ಮುಂಜಾನೆಯಿಂದ ಸಂಜೆಯತನಕ

ಸಂಗ್ರಹನಿತ್ಯಾನುಷ್ಠಾನ



ಬನ್ನಂಜೆ ಗೋವಿಂದಾಚಾರ್ಯ

Rarest Archiver

ಮುಂಜಾನೆಯಿಂದ ಸಂಜೆಯ ತನಕ

[ಸಂಗ್ರಹ ನಿತ್ಯಾನುಷ್ಠಾನ]

ನಿತ್ಯಕರ್ತವ್ಯ, ಜಪ, ಪೂಜೆ, ಸ್ತೋತ್ರಗಳ ಸಂಗ್ರಹ

ಸಂಗ್ರಹ–ಸಂಪಾದನ:

ಬನ್ನಂಜೆ ಗೋವಿಂದಾಚಾರ್ಯ

2011 - 12

ಈಶಾವಾಸ್ಯ ಪ್ರತಿಷ್ಠಾನ [ರಿ.]

ಉಡುಪಿ–ಬೆಂಗಳೂರು

Rarest Archiver

MUÑJĀNEYINDA SAÑJEYA TAÑAKA [Saṅgraha Nityānuṣṭhāna: Collection of Daily rituals and important *stotras*; Edited by Bannanje Govindacharya *Iśāvāsyam*, Ambalapadi, UDUPI-576 103.

© Editor

Publishers: Īśāvāsya Pratiṣṭhāna(R.), Udupi-Bangalore.

Regd.Office : Ishavasyam, Ambalapady, Udupi-3. [Ph.2521047]

First Edition : 1971

Eighth Edition : 2011 (1000 Copies)

ISBN : 978-81-920104-2-7

Pages: x +90

Price :

Art work: Ganjeefa Raghupathi Bhat

Cover Layout : Yaska Graphics, Bangalore.
[Tel. 22281997]

Computer typeset by :
Navadurga Lasertech,
C/o. Dr. K. Padmanabha Kekunnaya, UDUPI-2.
[Tel. 2531159]

Printed at : Raj Prakash Printers,
Chamarajpet, Bangalore-560 018.
[Tel. 26521515]

Rarest Archiver

ಕಾಲಪುರುಷನ ಒಂದು ವರುಷ

ಮುಖ್ಯವಾಗಿ ವರುಷದ ಗಣನೆ ಮೂರು ತೆರ:

365 ದಿನಗಳ ಸೌರಮಾನದ ವರುಷ.

355 ದಿನಗಳ ಚಾಂದ್ರಮಾನದ ವರುಷ.

360 ದಿನಗಳ ಸರಾಸರಿ ವರುಷ.

ಸೂರ್ಯ ಮೇಷದಿಂದ ಮೀನದ ತನಕ ಚರಿಸುವ ಕಾಲಮಾನವೇ ಸಂವತ್ಸರ. ಇದೇ ಸೌರಮಾನದ ವರುಷ. ಇದೇ ಕರಾರುವಾಕ್ಕಾದ ವರ್ಷಮಾನ: 365 $^{8}/_{31}$ ದಿನಗಳು.

ಚೈತ್ರದಿಂದ ಫಾಲ್ಗುನದ ತನಕ ಚಂದ್ರನ ಪಯಣದ ಕಾಲವೆ ಅನುವತ್ಸರ. ಇದೇ ಚಾಂದ್ರಮಾನದ ವರುಷ. 355 ದಿನಗಳು.

ಇದರ ಪ್ರಕಾರ ವರುಷದಲ್ಲಿ 10 ದಿನಗಳು ಕಮ್ಮಿಯಾದವು. ಸೌರಮಾನ ಚಾಂದ್ರ ಮಾನಗಳ ಈ ಅಂತರವನ್ನು ಸರಿದೂಗಿಸುವುದಕ್ಕಾಗಿಯೆ ಮೂರು ವರ್ಷಗಳಿ ಗೊಮ್ಮೆ ಚಾಂದ್ರಮಾನದವರು ಒಂದು ಅಧಿಕಮಾಸ ಸೇರಿಸಿ ಹೊಂದಿಸಿಕೊಳ್ಳು ತ್ತಾರೆ.

ಸೌರಮಾನಕ್ಕೆ ಅನುಗುಣವಾಗಿ ಹೊಂದಿಸಬೇಕಾದದ್ದೆಂದೆ ಇದನ್ನು ಅನುವತ್ಸರ ಎಂದು ಕರೆದರು.

ಪಾಶ್ಚಾತ್ಯರ ಗಣನೆಯಲ್ಲು ಅಷ್ಟೆ: ಜನವರಿಯಿಂದ ಡಿಸೆಂಬರ್ ತನಕ 365 ದಿನ ಗಳು. ಉಳಿದ $^{8}/_{31}$ ದಿನವನ್ನು ಸರಿದೂಗಿಸುವುದಕ್ಕಾಗಿ ನಾಕು ವರ್ಷಗಳಿಗೊಮ್ಮೆ ಫೆಬ್ರುವರಿಯಲ್ಲಿ 29 ದಿನಗಳು. ಆಗ ಅದೂ ಸೌರಮಾನಕ್ಕೆ ಅನುಗುಣವಾಯಿತು.

ಈ ಎರಡು ವರುಷಗಳ ಸರಾಸರಿ ಮಾನವೆ ಬಳಕೆಯಲ್ಲಿರುವ ವ್ಯಾವಹಾರಿಕವರ್ಷ: 360 ದಿನಗಳು. ಇದೇ ವತ್ಸರ. ಶಾಸ್ತ್ರದಲ್ಲಿ ಕೂಡ ಒಂದು ವರುಷ ಎಂದರೆ 360 ದಿನಗಳು ಎಂದೇ ಅರ್ಥ. ಇದು ವೇದಕಾಲದಿಂದ ನಡೆದು ಬಂದ ಕಾಲಗಣನೆ.

[ಪ್ರಾಚೀನರು ಇನ್ನೆರಡು ಬಗೆಯ ವರುಷಗಳನ್ನು ಉಲ್ಲೇಖಿಸುತ್ತಾರೆ: ನಾಕ್ಷತ್ರ ಮಾನದ ಮತ್ತು ಬಾರ್ಹಸ್ಪತ್ಯಮಾನದ ವರುಷ. 27 ನಕ್ಷತ್ರಗಳ ಪರಿವರ್ತನಕಾಲವೆ

Rarest Archiver

27 ದಿನಗಳ ತಿಂಗಳು. ಇಂಥ 12 ತಿಂಗಳುಗಳಿಗೆ ಒಂದು ನಾಕ್ಷತ್ರವರ್ಷ: 27x12 =324 ದಿನಗಳು. ಬೃಹಸ್ಪತಿ ಒಂದು ರಾಶಿಯಲ್ಲಿ ನೆಲಸಿರುವ ಕಾಲಮಾನವೆ ಬಾರ್ಹಸ್ಪತ್ಯ ವರುಷ. ಸುಮಾರು 13 ತಿಂಗಳ ವರುಷ. ಉದಾ: 2002 ಜುಲಾಯಿ 5ರಂದು ಬೃಹಸ್ಪತಿ ಕರ್ಕಾಟಕಕ್ಕೆ ಬಂದ. 2003 ಜುಲಾಯಿ 30ರಂದು ಸಿಂಹಕ್ಕೆ ಬಂದ. 2002 ಜುಲಾಯಿ 5ರಿಂದ 2003 ಜುಲಾಯಿ 30ರ ತನಕದ 390 ದಿನಗಳು ಒಂದು ಬಾರ್ಹಸ್ಪತ್ಯ ವರ್ಷ. ಇವು ಇಂದು ಆಚರಣೆಯಲ್ಲಿಲ್ಲ.]

ವಿಶೇಷವಾಗಿ ಧಾರ್ಮಿಕ ಆಚರಣೆಯಲ್ಲಿ ಬಳಕೆಯಾಗುವುದು ಸೌರಮಾನದ ಸಂವತ್ಸರ ಮತ್ತು ಚಾಂದ್ರಮಾನದ ಅನುವತ್ಸರ. ತುಳುವರಲ್ಲಿ ಮತ್ತು ತಮಿಳರಲ್ಲಿ ಸೌರಮಾನದ ಬಳಕೆ ಹೆಚ್ಚು. ಕರ್ನಾಟಕ ಮತ್ತು ಆಂಧ್ರದಲ್ಲಿ ಚಾಂದ್ರಮಾನದ ಬಳಕೆ ಹೆಚ್ಚು.

ಪಾಶ್ಚಾತ್ಯರಲ್ಲಿ ಮಧ್ಯರಾತ್ರಿ 12 ಗಂಟೆಗೆ ದಿನ ಬದಲಾವಣೆ. ಭಾರತೀಯರಿಗೆ ಸೂರ್ಯೋದಯದಿಂದ ಸೂರ್ಯೋದಯಕ್ಕೆ ಒಂದು ದಿನ. ಇನ್ನೂ ಕರಾರುವಾಕ್ಕಾಗಿ ಹೇಳುವುದಾದರೆ ಅನುಷ್ಠಾನದ ಮಟ್ಟಿಗೆ ಅರುಣೋದಯದಿಂದ ಅರುಣೋದಯಕ್ಕೆ ಒಂದು ದಿನ. ಸೂರ್ಯೋದಯಕ್ಕಿಂತ 96 ನಿಮಿಷ ಮೊದಲು ಅರುಣೋದಯ ಕಾಲ. 6 ಗಂಟೆಗೆ ಸೂರ್ಯೋದಯವಾದರೆ ಮುಂಜಾನೆ 4.24ಕ್ಕೆ ಮುಂದಿನ ದಿನದ ಕಾರ್ಯಕಲಾಪ ಪ್ರಾರಂಭ.

ಇಂಥ 15 ದಿನಗಳಿಗೆ ಒಂದು ಪಕ್ಷ.

ಇದೂ ಸ್ಥೂಲವಾದ ಗಣನೆಯೆ. ವಾಸ್ತವವಾಗಿ ಅಮಾವಾಸ್ಯೆಯಿಂದ ಹುಣ್ಣಿಮೆಯ ತನಕದ ದಿನಗಳು ಒಂದು ಪಕ್ಷ: ಶುಕ್ಲಪಕ್ಷ. ಹಾಗೆಯೆ ಹುಣ್ಣಿಮೆಯಿಂದ ಅಮಾವಾಸ್ಯೆಯ ತನಕದ ದಿನಗಳು ಇನ್ನೊಂದು ಪಕ್ಷ: ಕೃಷ್ಣಪಕ್ಷ. [ಒಂದು ಪಕ್ಷದಲ್ಲಿ ಕೆಲವೊಮ್ಮೆ 14 ದಿನಗಳು ಇರಬಹುದು; 16 ದಿನಗಳೂ ಇರಬಹುದು. ವಿರಳವಾಗಿ 13 ದಿನಗಳೂ ಇರಬಹುದು.]

ಇಂಥ ಎರಡು ಪಕ್ಷಗಳು ಸೇರಿ ಒಂದು ತಿಂಗಳು. ಅಮಾವಾಸ್ಯೆಯಿಂದ ಅಮಾವಾಸ್ಯೆಯ ತನಕ. ಹುಣ್ಣಿಮೆಯಿಂದ ಹುಣ್ಣಿಮೆಯ ತನಕದ ತಿಂಗಳನ್ನು ಪರಿಗಣಿಸುವ ಸಂಪ್ರದಾಯವೂ ಉಂಟು. ಎರಡು ತಿಂಗಳು ಸೇರಿ ಒಂದು ಋತು. ಮೂರು ಋತುಗಳು ಸೇರಿ ಒಂದು ಅಯನ. ಎರಡು ಅಯನಗಳು ಸೇರಿ ಒಂದು ವರುಷ. ಇದು ಕಾಲಪುರುಷನ ವಿಶ್ವರೂಪದ ಬಿತ್ತರ.

ದಿನದಿನವೂ ಐದು

ಹೀಗೆ ವರುಷವೆಂಬ ಕಾಲಪುರುಷನಿಗೆ ಐದು ಅಂಗಗಳು: ದಿನ, ಪಕ್ಷ, ಮಾಸ, ಋತು, ಅಯನ.

Rarest Archiver

ಪ್ರತಿದಿನವೂ ನಾವು ಗಮನಿಸಬೇಕಾದ ಅಂಶಗಳೂ ಐದು: ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣ.

ಇವೇ ಪಂಚಾಂಗದ ಪಂಚ ಅಂಗಗಳು. [ಇವುಗಳ ವಿವರ ಪರಿಶಿಷ್ಟದಲ್ಲಿ ಬಂದಿದೆ.]

ಪಂಚಾಂಗದ ಪುಟಗಳನ್ನು ತಿರುವಿದರೆ ಇದು ಸ್ಫುಟ. ಮೊದಲು ತಿಥಿ. ಅನಂತರ ವಾರ. ಅನಂತರ ಅಂದು ಆ ತಿಥಿ ಎಷ್ಟು ಗಳಿಗೆ ಇದೆ ಎನ್ನುವ ವಿವರ. ಆಮೇಲೆ ನಕ್ಷತ್ರ ಮತ್ತು ಅದು ಇರುವ ಗಳಿಗೆ. ತರುವಾಯ ಯೋಗ ಮತ್ತು ಗಳಿಗೆ. ಕೊನೆಯಲ್ಲಿ ಕರಣ ಮತ್ತು ಗಳಿಗೆ. ಉದಾಃ

೨ ಗು ೫೮। ಶ್ವ ೫೫। ವೈ ೪೦। ಬಾ ೨೫

ಇದನ್ನು ವಿವರಿಸಿ ಬರೆದರೆ ಹೀಗಾಗುತ್ತದೆ.

ದ್ವಿತೀಯಾ[ಬಿದಿಗೆ]ತಿಥಿ; ಗುರುವಾರ; 58 ಗಳಿಗೆ 15 ವಿಗಳಿಗೆ [5.18 A.M.]; ಅಶ್ವಿನಿ ನಕ್ಷತ್ರ; 55 ಗಳಿಗೆ 15 ವಿಗಳಿಗೆ [4.6 A.M.]; ವೈಧೃತಿಯೋಗ; 40 ಗಳಿಗೆ 15 ವಿಗಳಿಗೆ [10.6 P.M.]; ಬಾಲವಕರಣ 25 ಗಳಿಗೆ [4.00 P.M.]

ಅದಕೆಂದೆ ಸಂಕಲ್ಪದಲ್ಲಿ ಈ ಐದನ್ನೂ ಉಲ್ಲೇಖಿಸುವ ಪದ್ಧತಿ ಹಿಂದೆ ಇತ್ತು. ಈಗಣ ಸಂಕಲ್ಪದಲ್ಲು ಅದರ ಸುಳಿವು ಉಳಿದುಕೊಂಡಿದೆ:

'ಶುಭನಕ್ಷತ್ರ-ಶುಭಯೋಗ-ಶುಭಕರಣಾದ್ಯೇವಂಗುಣವಿಶಿಷ್ಟಾಯಾಂ ಶುಭತಿಥೌ....'

*　　*　　*　　*　　*

ನಿತ್ಯಕರ್ಮ–ನಿಯತಕರ್ಮ

ವೇದದೀಕ್ಷೆ ಪಡೆದ ವಟುವಿನ ಬಾಳಿನುದ್ದಕ್ಕೂ ಕರ್ಮದ ನಂಟು. ಯಜ್ಞೋಪವೀತ ಎಂದರೆ ಯಜ್ಞದ ದೀಕ್ಷಾಬಂಧ. ಗೃಹಸ್ಥಜೀವನ ಎಂದರೆ ಕರ್ಮಯೋಗದ ಕಮ್ಮಟ ಶಾಲೆ.

ಪ್ರತಿಯೊಂದು ವೇದಶಾಖೆಯವರಿಗೂ ಪ್ರತ್ಯೇಕ ಕರ್ಮಾನುಷ್ಠಾನ ವಿಧಿ–ವಿಧಾನ ಗಳಿವೆ. ಬೆಳಗಿನಿಂದ ಸಂಜೆಯ ತನಕ ಮಾಡುತ್ತ ಹೋದರೂ ಮುಗಿಯದಷ್ಟು ಕರ್ಮದ ಬಿತ್ತರಗಳೂ ಇವೆ.

ಒಂದು ಕಾಲವಿತ್ತು. ಶಾಸ್ತ್ರದ ವಿಧಿಯನ್ನು ಚಾಚೂ ತಪ್ಪದೆ ಅನುಸರಿಸುತ್ತಿದ್ದ ಕಾಲ. ಏನನ್ನೂ ಪ್ರಶ್ನಿಸದೆ ನಂಬುತ್ತಿದ್ದ ಕಾಲ. ಭಕ್ತಿಶ್ರದ್ಧೆಗಳಿಂದ ತುಂಬಿದ ಕಾಲ.

ಈಗ ಕಾಲ ಬದಲಾಯಿತು. ಅತ್ತ ಅರಿವೂ ಇಲ್ಲ; ಇತ್ತ ಶ್ರದ್ಧೆಯೂ ಇಲ್ಲ. 'ಇದನ್ನೆಲ್ಲ ಯಾಕೆ ಮಾಡಬೇಕು?' ಎಂದು ಮಗ ಕೇಳಿದರೆ ಅಪ್ಪ ಕಣ್‌ಕಣ್ಣು ಬಿಡುತ್ತಾನೆ.

ಉತ್ತರ ಕೊಡುವ ಅಪ್ಪಂದಿರಿದ್ದಾಗ ಮಕ್ಕಳಿಗೆ ಪ್ರಶ್ನೆ ಬರಲಿಲ್ಲ. ಮಕ್ಕಳಿಗೆ ಪ್ರಶ್ನೆ ಬಂದಾಗ ಅಪ್ಪಂದಿರಿಗೂ ಉತ್ತರ ಮರೆತಿತ್ತು!

Rarest Archiver

ಹಿರಿಯರಿಗೆ ತಿಳಿವಳಿಕೆ ಇಲ್ಲ. ಕಿರಿಯರಿಗೆ ನಂಬಿಕೆ ಇಲ್ಲ.

ಎಲ್ಲೋ ಕಿಂಚಿತ್ತು ನಂಬಿಕೆ ಇದ್ದರೂ ಈ ಅವಸರದ ಯುಗದಲ್ಲಿ ಕರ್ಮಾನುಷ್ಠಾನ ಮಾಡುತ್ತ ಕೂಡಲು ಬಿಡುವಿಲ್ಲ.

ಅಂಥವರು ಹೇಳುತ್ತಾರೆ: 'ನಮಗೂ ಇದನ್ನು ಉಳಿಸಬೇಕು ಎಂದು ಆಸೆ ಉಂಟು. ಆದರೆ ಮಕ್ಕಳು ಕೇಳಿದರೆ ಉತ್ತರಿಸುವುದು ಕಷ್ಟ. ಆದಕ್ಕಾಗಿ ಈ ಆಚರಣೆಗಳ ಹಿನ್ನೆಲೆಯನ್ನೂ ಅರ್ಥವನ್ನೂ ಸಂಕ್ಷಿಪ್ತವಾಗಿ ತಿಳಿಸುವ ಪುಸ್ತಕ ನಮಗೆ ಬೇಕು. ಹಾಗೆಯೆ ತುಂಬ ವಿಸ್ತಾರವಾಗಿ ಮಾಡುತ್ತ ಕೂಡಲು ಈ ಔದ್ಯೋಗಿಕಯುಗದಲ್ಲಿ ಸಾಧ್ಯವಿಲ್ಲ. ಅದರಿಂದ ಮಾಡಲೇಬೇಕಾದ್ದನ್ನು ಸಂಕ್ಷೇಪವಾಗಿ ವಿವರಿಸುವ ಪುಸ್ತಕ ನಮಗೆ ಬೇಕು. ಇಂಥ ಸಾರ್ಥಕ ಸಂಗ್ರಹ ನಿತ್ಯಾನುಷ್ಠಾನ ನಮಗೆ ಬೇಕು.'

ಅಂಥವರಿಗಾಗಿ ಈ ಪುಸ್ತಕ.

ಇಲ್ಲಿ ಬೆಳಗ್ಗೆ ಹಾಸಿಗೆಯಿಂದೆದ್ದು –ರಾತ್ರಿ ಮಲಗುವ ತನಕದ ಎಲ್ಲ ನಿತ್ಯಾನುಷ್ಠಾನದ ಸಂಗ್ರಹವಿದೆ.

ಇದು ಸಂಕ್ಷೇಪಶಾಸ್ತ್ರ. ಅನುಕೂಲವಿದ್ದವರು ಎಷ್ಟು ಬೇಕಾದರೂ ವಿಸ್ತರಿಸಿಕೊಳ್ಳ ಬಹುದು. ಎಷ್ಟನ್ನು ಶಾಸ್ತ್ರೀಯವಾಗಿ ಮಾಡಲೇಬೇಕೋ, ಕನಿಷ್ಠ ಎಷ್ಟನ್ನು ಮಾಡಿದರೆ ಕ್ರಿಯಾಲೋಪವಾಗದೋ ಅಷ್ಟೂ ಇಲ್ಲಿ ಬಂದಿದೆ.

ಜತೆಗೆ ಕ್ರಿಯಾಕಲಾಪದ ಸಂಕ್ಷಿಪ್ತವಾದ ಹಿನ್ನೆಲೆ; ಉದ್ದೇಶ. ಮಂತ್ರಭಾಗದ ಸಂಕ್ಷಿಪ್ತ ಅರ್ಥ ಕೂಡ.

ಸಂಪ್ರದಾಯವನ್ನು ಉಳಿಸಬೇಕು ಎಂಬ ಆಸೆ ಇದ್ದವರಿಗೆ ಅದನ್ನು ಕಿಂಚಿತ್ತಾದರೂ ತಿಳಿದು ಉಳಿಸುವ ಅವಕಾಶ ಇಲ್ಲಿದೆ.

ಒಳಗೆ ಏನಿದೆ?

ಬೆಳಗ್ಗೆದ್ದು, ದೇವರನ್ನು ನೆನೆದು, ಶೌಚ ಪೂರಯಿಸಿ, ಮೋರೆ ತೊಳೆದು, ಮಿಂದು ಸಂಧ್ಯಾವಂದನೆ ಮಾಡುವುದು ಒಂದು ಘಟ್ಟ.

ಜತೆಗೆ ಬ್ರಹ್ಮಯಜ್ಞ ಮತ್ತು ವಟುಗಳಿಗೆ ಅಗ್ನಿಕಾರ್ಯ [ಈಗ ಇವು ಬಳಕೆಯಿಂದ ಕಣ್ಮರೆಯಾಗಿದ್ದರೂ ಹಿಂದೆ ನಿತ್ಯಕರ್ಮವಾಗಿತ್ತು. ಉಪನಯನದಿಂದ ಮದುವೆಯ ತನಕ ಅಗ್ನಿಕಾರ್ಯ; ಅನಂತರ ಗೃಹಸ್ಥ ಜೀವನದಲ್ಲಿ ಅಗ್ನಿಹೋತ್ರ. ಹೀಗೆ ಕೊನೆಯ ಕಾಲದ ತನಕವೂ ಅಗ್ನಿಪೂಜೆ ನಡೆಯಬೇಕು ಎನ್ನುವುದು ವೇದಕಾಲದ ಸಂಪ್ರದಾಯ. 'ಯಾವಜ್ಜೀವಮಗ್ನಿಹೋತ್ರಂ ಜುಹೋತಿ'. ಈಗ ಗೃಹಸ್ಥಜೀವನದಲ್ಲಿ ಅಗ್ನಿಹೋತ್ರದ ಪ್ರತಿನಿಧಿಯಾಗಿ ವೈಶ್ವದೇವ ಉಳಿದುಕೊಂಡಿದೆ. ಅಗ್ನಿಕಾರ್ಯವನ್ನು ಮದುವೆಯ ತನಕ ಅಲ್ಲದಿದ್ದರೂ ಮೊದಲ ಉಪಾಕರ್ಮದ ತನಕವಾದರೂ ಉಳಿಸಿಕೊಂಡು ಬಂದವರುಂಟು.]

Rarest Archiver

ಎರಡನೆಯ ಘಟ್ಟದಲ್ಲ ಮಾಧ್ಯಾಹ್ನಿಕಸಂಧ್ಯಾವಂದನೆ ಮತ್ತು ಪೂಜೆ. [ಮಾಧ್ಯಾಹ್ನಿಕ ಸಂಧ್ಯಾವಂದನೆಯೂ ಈಗ ಬಳಕೆ ತಪ್ಪುತ್ತಿದೆ. ಬೆಳಗ್ಗೆ ಆಹ್ನಿಕ ಮುಗಿಸಿ, ಜತೆಗೆ ಪೂಜೆಯನ್ನೂ ಮುಗಿಸಿ ತಮ್ಮತಮ್ಮ ಉದ್ಯೋಗಕ್ಕೆ ತೆರಳಿದರೆ ಮತ್ತೆ ಮನೆಗೆ ಮರಳುವುದು ಸಂಜೆಯೇ. ಹಾಗಾಗಿ ಮಾಧ್ಯಾಹ್ನಿಕ ಲೋಪವಾಗುತ್ತಿದೆ. ಬೆಳಗ್ಗೆ–ಸಂಜೆ ಎರಡು ಹೊತ್ತು ಸಂಧ್ಯಾವಂದನೆ ಮಾಡಿದರೆ ಕ್ರಿಯಾಲೋಪವಾಗದು ಎನ್ನುವ ಅಭಿಪ್ರಾಯದವನು ನಾನು. ಆದರೂ ಮಾಡುವ ಅಭ್ಯಾಸವನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದರೆ ಚೆನ್ನು. ಕೆಲವರು ಮಾಧ್ಯಾಹ್ನಿಕವನ್ನೂ ಸೌಕರ್ಯಕ್ಕಾಗಿ ಬೆಳಗ್ಗೆಯೆ ಪೂರಯಿಸಿ ಉದ್ಯೋಗಕ್ಕೆ ತೆರಳುತ್ತಾರೆ. ಇದರ ಬಗ್ಗೆ ಶಾಸ್ತ್ರಕಾರರು ಏನೂ ಅನ್ನುವುದಿಲ್ಲ. ಇವೆಲ್ಲ ನಾವೇ ಮಾಡಿಕೊಂಡ ಅನುಕೂಲಶಾಸ್ತ್ರಗಳು. ಯಾವುದೇ ಕರ್ಮವನ್ನು ಆಯಾ ಕಾಲದಲ್ಲಿ ಮಾಡುವುದೇ ಚೆನ್ನು.]

ಮೂರನೆಯ ಹಂತದಲ್ಲಿ ರಾತ್ರಿಯ ಸಂಧ್ಯಾವಂದನೆ ಮತ್ತು ಪೂಜೆ. ಇಲ್ಲಿಗೆ ನಿತ್ಯಾಹ್ನಿಕದ ಒಂದು ಘಟ್ಟ ಮುಗಿಯಿತು.

ಅನಂತರ ಬರಿಯ ಸಾಳಗ್ರಾಮಕ್ಕೆ ಪೂಜೆ ಸಲ್ಲಿಸುವ ಅತಿಸಂಕ್ಷಿಪ್ತ ವಿಧಾನವನ್ನು ಬಯಸುವವರಿಗೆ ಪುರುಷಸೂಕ್ತದ ೧೬ ಮಂತ್ರಗಳಿಂದ ೧೬ ಉಪಚಾರಗಳ ಪೂಜಾವಿಧಿಯನ್ನು ಸೇರಿಸಿದ್ದೇನೆ. ವಾರ್ಷಿಕ ವಿಶೇಷಪೂಜೆಗಳಲ್ಲೂ, ಉದಾಃ ಪುಸ್ತಕ ಪೂಜೆ, ಅನಂತವ್ರತ ಇತ್ಯಾದಿ– ತೀರ ಅವಸರವಾದಾಗ ಮನೆಯ ನಿತ್ಯಪೂಜೆಯಲ್ಲೂ ಇದನ್ನು ಬಳಸಬಹುದು.

ಜತೆಗೆ ಯಜ್ಞೋಪವೀತಧಾರಣದ ವಿಧಿಯೂ ಇದೆ. ಇಲ್ಲಿಗೆ ನಿತ್ಯಾನುಷ್ಠಾನದ ಸಮಗ್ರಮುಖ ಸಂಕ್ಷಿಪ್ತವಾಗಿ ತಿಳಿದಂತಾಯಿತು.

ಪರಿಶಿಷ್ಟದಲ್ಲಿ ನಿತ್ಯೋಪಯೋಗಿ ಮಂತ್ರಗಳನ್ನು, ಸ್ತೋತ್ರಗಳನ್ನು ಕೊಡಲಾಗಿದೆ. ಮೊದಲು ಪುರುಷಸೂಕ್ತದ ಋಗ್ವೇದೀಯ ಮತ್ತು ಯಜುರ್ವೇದೀಯ ಪಾಠ. ಅನಂತರ ಶ್ರೀಸೂಕ್ತ.

ಸ್ತೋತ್ರಮಾಲಿಕೆಯಲ್ಲಿ ಮೊದಲು ಸ್ತೋತ್ರಗಳ ರಾಜನಾದ ವಿಷ್ಣುಸಹಸ್ರನಾಮ ಸ್ತೋತ್ರ. ಭಗವಂತನ ಸಾವಿರ ರೂಪಗಳನ್ನು ಬಣ್ಣಿಸುವ ಸಹಸ್ರನಾಮದ ಅನಂತರ ೧೦೮ ರೂಪಗಳನ್ನು ನಿರೂಪಿಸುವ ನಾರಾಯಣಾಷ್ಟೋತ್ತರಶತನಾಮಸ್ತೋತ್ರ. ಜತೆಗೆ ಸರ್ವತ್ರ ಪ್ರಸಿದ್ಧವಾದ ಕೃಷ್ಣಾಷ್ಟೋತ್ತರಶತನಾಮಸ್ತೋತ್ರ ಮತ್ತು ಸರ್ವಸಿದ್ಧಿ ಪ್ರದನಾದ ನೃಸಿಂಹಾಷ್ಟೋತ್ತರಶತನಾಮಸ್ತೋತ್ರ.

ಅನುಕೂಲವಿದ್ದವರು ಈ ಸ್ತೋತ್ರಗಳನ್ನು ಪ್ರತಿನಿತ್ಯ ಪಠಿಸುವ ಪರಿಪಾಠ ಇಟ್ಟುಕೊಂಡರೆ ಚೆನ್ನು. ಸಹಸ್ರನಾಮ–ಅಷ್ಟೋತ್ತರಶತನಾಮಗಳನ್ನು ಪಾರಾಯಣದಂತೆ ಅರ್ಚನೆಗೂ ಬಳಸಬಹುದು.

ವಿಷ್ಣುಸಹಸ್ರನಾಮವಂತು ಬಯಸಿದ್ದನ್ನೀವ ಕಲ್ಪವೃಕ್ಷ. ಆಯುರ್ವೇದಾಚಾರ್ಯ ಚರಕನ ಈ ಮಾತನ್ನು ಗಮನಿಸಬೇಕು:

Rarest Archiver

ವಿಷ್ಣುಂ ಸಹಸ್ರಮೂರ್ಧಾನಂ ಚರಾಚರಪತಿಂ ಪ್ರಭುಮ್ ।
ಸ್ತುವನ್ ನಾಮಸಹಸ್ರೇಣ ಜ್ವರಾನ್ ಸರ್ವಾನ್ ವ್ಯಪೋಹತಿ ॥

[ಚರಾಚರಗಳನ್ನು ಸಲಹುವ ಜಗದೊಡೆಯ, ಸಾವಿರ ತಲೆಯ ವಿಷ್ಣುವನ್ನು ಸಾವಿರ ನಾಮಗಳಿಂದ ಸ್ತುತಿಸಿದರೆ ಗುಣವಾಗದ ರೋಗಗಳಿಲ್ಲ.]

ಕೊನೆಯಲ್ಲಿ, ಪಲಿಮಾರುಮಠದ ಶ್ರೀ ರಾಜರಾಜೇಶ್ವರಯತಿಗಳು ರಚಿಸಿದ, ಎಲ್ಲ ಮಂಗಲಕಾರ್ಯಗಳಲ್ಲಿ–ಹಬ್ಬಹರಿದಿನಗಳಲ್ಲಿ ಪಠನೀಯವಾಗಿ ಜನಪ್ರಿಯವಾದ, ಸುಪ್ರಸಿದ್ಧ ಸುಪ್ರಭಾತಗೀತ ಮಂಗಲಾಷ್ಟಕ ಬಂದಿದೆ. ಸಂಸ್ಕೃತ ಸಾಹಿತ್ಯದಲ್ಲಿ ಇಷ್ಟು ಸುಂದರವಾದ ಮಂಗಲಾಷ್ಟಕ ಇದೊಂದೆ.

*　　*　　*　　*　　*

ಪರಿಶಿಷ್ಟದ ಎರಡನೆಯ ಭಾಗದಲ್ಲಿ ಕೆಲವು ಅಪೂರ್ವ ಮಾಹಿತಿಗಳಿವೆ; ನಿತ್ಯಾನುಷ್ಠಾನಕ್ಕೆ ತೀರ ಉಪಯುಕ್ತವಾದ ಮಾಹಿತಿಗಳು; ಹೊಸ ತಲೆಮಾರಿನವರು ಮರೆಯತೊಡಗಿ ಮರೆಯಾಗುತ್ತಿರುವ ಮಾಹಿತಿಗಳು.

60 ವತ್ಸರಗಳು; ಆಯನ–ಋತು–ಮಾಸ–ಪಕ್ಷಗಳು; ತಿಥಿ–ವಾರಗಳು; 27 ನಕ್ಷತ್ರಗಳು; 27 ಯೋಗಗಳು ಮತ್ತು 11 ಕರಣಗಳು.

ಸಂವತ್ಸರದ ಹೆಸರುಗಳು ಪಂಚಾಂಗಗಳಲ್ಲು ತಪ್ಪಾಗಿ ಪ್ರಕಟವಾಗುತ್ತಿವೆ. ಉದಾ: ಪ್ರಮೋದ ಸಂವತ್ಸರ ಈ ಪಂಚಾಂಗಪಂಡಿತರ ಕೈಯಲ್ಲಿ 'ಪ್ರಮೋದೂತ' ಆಗಿದೆ! [ಯಾವ ಭಾಷೆ ಇದು? ಸಂಸ್ಕೃತವಂತು ಅಲ್ಲ. ಸಂಸ್ಕೃತದ 'ಪ್ರಮೋದೋಽಥ' ಇವರ ಕೈಯಲ್ಲಿ ಸಿಕ್ಕಾಗ ಆದ ದುರಂತ!] ಹಾಗೆಯೇ ಪ್ರಜಾಪತಿ 'ಪ್ರಜೋತ್ಪತ್ತಿ' ಆಗಿದೆ! ಹೇಮಲಂಬಿ 'ಹೇವಿಳಂಬಿ' ಆಗಿದೆ! ಪ್ರಮಾದಿ ಹೋಗಿ 'ಪ್ರಮಾದೀಚ' ಆಗಿದೆ. [ಶ್ಲೋಕದ ಚಕಾರವೂ ನಾಮಪದದ ಜತೆಗೆ ಸೇರುವಷ್ಟು ದಡ್ಡತನದ ಪಾಂಡಿತ್ಯ. ಇವರ ಪ್ರಕಾರ ಹೀಗೆ ಶಬ್ದರೂಪ: ಪ್ರಮಾದೀಚಃ ಪ್ರಮಾದೀಚೌ ಪ್ರಮಾದೀಚಾಃ! ಇದನ್ನು ಕೇಳಿ ಪಾಣಿನಿಗೂ ಗಾಬರಿಯಾಗಬೇಕು. ವಾಸ್ತವವಾಗಿ ಇದು ನಕಾರಾಂತವಾದ ಪ್ರಮಾದಿನ್ ಶಬ್ದ: ಪ್ರಮಾದೀ ಪ್ರಮಾದಿನೌ ಪ್ರಮಾದಿನಃ!]

ಕೊನೆಯಲ್ಲಿ ಯಾವ ನಕ್ಷತ್ರಕ್ಕೆ ಯಾವ ರಾಶಿ ಎನ್ನುವ ಕೋಷ್ಟಕ; ಮತ್ತು ತಾರಾಬಲ ನೋಡುವ ಕೋಷ್ಟಕ.

ಇದರಿಂದ– ಜನ್ಮನಕ್ಷತ್ರದಿಂದ ಜನ್ಮರಾಶಿಯನ್ನು ಸುಲಭವಾಗಿ ತಿಳಿಯಬಹುದು. ನಾವು ಕಾರ್ಯಾರಂಭ ಮಾಡುವಾಗ ತಾರಾನುಕೂಲ ಇದೆಯೇ ಎನ್ನುವುದನ್ನು ಸುಲಭವಾಗಿ ತಿಳಿಯಬಹುದು.

ಹೀಗೆ ಇಲ್ಲಿ ನಿತ್ಯೋಪಯೋಗಿಯಾದ ಎಲ್ಲವೂ ಇದೆ.

ಇದೇ ರೀತಿ ಇಡಿಯ ವರುಷದಲ್ಲಿ ಬರುವ ಎಲ್ಲ ವಿಶೇಷದಿನಗಳ, ಹಬ್ಬಹರಿದಿನಗಳ ಆಚರಣೆಯ ವಿವರವನ್ನೊಳಗೊಂಡ ಪುಸ್ತಕವನ್ನು ಜಿಜ್ಞಾಸುಗಳಿಗೆ

Rarest Archiver

ಒದಗಿಸುವುದು ನಮ್ಮ ಮುಂದಿನ ಯೋಜನೆ. ಈ ಪುಸ್ತಕವನ್ನು ನೀವು ಪ್ರೀತಿಯಿಂದ ಸ್ವಾಗತಿಸಿದರೆ ಆ ಪುಸ್ತಕವೂ ಸದ್ಯದಲ್ಲೆ ನಿಮ್ಮ ಕೈಸೇರಬಲ್ಲುದು.
ಇಷ್ಟು ನಮ್ಮದು; ಮುಂದಿನದು ನಿಮ್ಮದು.

ಜೂನ್ 30, 2003 — ಬನ್ನಂಜೆ ಗೋವಿಂದಾಚಾರ್ಯ

ನಾವು ಕೃತಜ್ಞರು–

ಈ ಪುಸ್ತಕದ ಮುದ್ರಣಕ್ಕೆ ವಿಶೇಷ ನೆರವನ್ನಿತ್ತ
ಶ್ರೀ ರಾಘವೇಂದ್ರಾಚಾರ್ಯ, ಉಡುಪಿ, ಇವರಿಗೆ,
ಕಲಾವಿದ ಗಂಜೀಫಾ ರಘುಪತಿ ಭಟ್ಟರಿಗೆ,
ಕಂಪ್ಯೂಟರ್‌ನಿಂದ ಅಕ್ಷರಗಳನ್ನು ಜೋಡಿಸಿದ
ಡಾ। ಪದ್ಮನಾಭ ಕೇಕುಣ್ಣಾಯರಿಗೆ,
ಮುದ್ರಿಸಿದ 'ರಾಜಪ್ರಕಾಶ್' ಮುದ್ರಣಾಲಯದ ಮಾಲಕ
ಶ್ರೀ ಪ್ರಕಾಶ್ ಮತ್ತು ಬಳಗದವರಿಗೆ,
ಎಲ್ಲ ಬಗೆಯ ನೆರವಿತ್ತವರಿಗೆ
ಪುಸ್ತಕವನ್ನು ಕೊಂಡು ಓದುವ ಅನಿಮಿತ್ತಬಂಧುಗಳಿಗೆ

ಈಶಾವಾಸ್ಯ-ಪ್ರತಿಷ್ಠಾನ
ಉಡುಪಿ–ಬೆಂಗಳೂರು.

Rarest Archives



Rarest Archives

ಪ್ರಾತಃಕಾಲದ ಕರ್ತವ್ಯ

ಬ್ರಾಹ್ಮಮುಹೂರ್ತದಲ್ಲಿ[೧] –ಸೂರ್ಯೋದಯದಿಂದ ಸುಮಾರು ಒಂದೂವರೆ ಘಂಟೆಯ ಮುನ್ನ– ಎಚ್ಚತ್ತು ಶ್ರೀಹರಿಯನ್ನು ನೆನೆಯಬೇಕು. ಜಗದ ನೇತಾರನಾದ ನಾರಾಯಣನ ಕರುಣಾದೃಷ್ಟಿಯನ್ನು ಪ್ರಾರ್ಥಿಸಿಕೊಳ್ಳಬೇಕು:

[೨]ಉತ್ತಿಷ್ಠೋತ್ತಿಷ್ಠ ಗೋವಿಂದ ಉತ್ತಿಷ್ಠ ಗರುಡಧ್ವಜ ।
ಉತ್ತಿಷ್ಠ ಕಮಲಾಕಾಂತ ತ್ರೈಲೋಕ್ಯಂ ಮಂಗಲಂ ಕುರು ॥

ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ।
ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ॥

ಈ ಮಂತ್ರವನ್ನು ೧೬–೨೪–೪೮–೧೦೮ ಹೀಗೆ ಇಷ್ಟವಾದಷ್ಟು ಬಾರಿ, ಅನುಕೂಲವಿದ್ದಷ್ಟು ಬಾರಿ ಆವೃತ್ತಿ ಮಾಡಬಹುದು.

ಪ್ರಾತಃಪ್ರಭೃತಿ ಸಾಯಾಂತಂ ಸಾಯಾದಿ ಪ್ರಾತರಂತತಃ ।
ಯತ್‌ಕರೋಮಿ ಜಗನ್ನಾಥ ತದಸ್ತು ತವ ಪೂಜನಮ್ ॥

ಸ್ವಾಮಿನ್ ದಾಸೋಽಸ್ಮಿ ತೇ ನಿತ್ಯಂ ಪ್ರಿಯಂ ತೇ ಕರವಾಣ್ಯಹಮ್ ।
ಅಪ್ರಿಯೇ ಭವತೋ ನಾಥ ಮಾ ಯಾನ್ಮೇ ಮನಆದಿಕಮ್ ॥

---

೧. ಬೆಳ್ಳಿ ಮೂಡಿ ಬಾನು ಬೆಳಗಿದೆ. ಲೋಕಜೀವನದ ಕೋಲಾಹಲ ಇನ್ನೂ ತೊಡಗಿಲ್ಲ. ಪ್ರಕೃತಿ ಪ್ರಸನ್ನವಾಗಿದೆ. ನೆಲ ಮುಗಿಲುಗಳು ಸೌಮ್ಯವಾಗಿವೆ. ಗಿಡಗಂಟಿಯಲ್ಲಿ ಹಕ್ಕಿಗಳು ಭಗವಂತನನ್ನು ಹಾಡಲು ಇಷ್ಟರಲ್ಲಿ ತೊಡಗಿಯಾಗಿದೆ. ಮನೆಯಲ್ಲಿ ಮೊದಲೆ ಎದ್ದ ಐದೆಯರ ಇಂಪಾದ ಉದಯಗೀತೆ ಕೇಳಿಬರುತ್ತಿದೆ. ಇದು ವಿಪ್ರರು– ಶ್ರೋತ್ರಿಯರು ಎದ್ದೇಳುವ ಸಮಯ; ಹರಿಯನ್ನು ನೆನೆವ ಸಮಯ. ವಿದ್ಯೆಗೆ ಅಭಿಮಾನಿಯಾದ ಉಷೆ ಮುಗಿಲಲ್ಲಿ ಮುಸುಕು ತೆರೆದು ಕಾಣಿಸಿಕೊಳ್ಳುತ್ತಿದ್ದಾಳೆ. ಇಂಥ ಹೊತ್ತಿನಲ್ಲಿ ಅವಿದ್ಯೆಯ ಮುಸುಕನ್ನು ಹೊದ್ದು ಮಲಗಿರಬಾರದು. ಇದು ಅರುಣೋದಯದ ಬ್ರಾಹ್ಮ ಮುಹೂರ್ತ; ಉಷೆ ಮೂಡಿದ ಚಂದದ ಕಾಲ. ಇದು ಕರ್ತವ್ಯದ ಹೊತ್ತು; ಕರ್ತವ್ಯದ ಹೊಣೆಯರಿತ ವಿಪ್ರರು ಎಚ್ಚತ್ತು ಹರಿಯನ್ನು ನೆನೆಯಬೇಕಾದ ಹೊತ್ತು.

೨. ಯಾರ ಪ್ರೇರಣೆಯಿಲ್ಲದೆ ಏನೂ ನಡೆಯದೋ –ಯಾರಿಂದಲೇ ಎಲ್ಲವೂ ನಡೆವುದೋ– ಅಂಥ ಹರಿಯನ್ನು ದಿನಬೆಳಗು ಎದ್ದು ನೆನೆಯಬೇಕು: 'ಭಗವನ್ ನಿನಗೆ ಸುಪ್ರಭಾತ; ನಿನ್ನಿಂದ ನಮಗೆ ಸುಪ್ರಭಾತ. ಬೆಳಗಿನಿಂದ ಸಂಜೆಯ ತನಕ, ಸಂಜೆಯಿಂದ ಬೆಳಗಿನ ತನಕ ನಾನು ಮಾಡಿದ್ದೆಲ್ಲ ನಿನ್ನ ಪೂಜೆಯಾಗಲಿ. ನಿನ್ನ ಸೇವೆಗಾಗಿ ನನ್ನ ಬದುಕು ಇದೆ; ಅದನ್ನು ನನ್ನಿಂದ ಮಾಡಿಸಿಕೊಳ್ಳು. ಪ್ರತಿಕ್ಷಣವೂ ನಿನ್ನ ನೆನಪಿನಿಂದ ನನ್ನ ಜೀವನ ಜಾಗೃತವಾಗಿರಲಿ. ನನ್ನ ತಪ್ಪು ನಿನ್ನ ಕಾರುಣ್ಯಧಾರೆಯಲ್ಲಿ ಒಪ್ಪಾಗಲಿ. ನನ್ನ ಬಾಳು ಧರ್ಮಮಯವಾಗಲಿ. ಓ ಪ್ರಾಣನಾಯಕನೆ, ನಿನಗೆ ಶರಣು. ನನ್ನ ಎಲ್ಲ ಕಾರ್ಯವೂ

Rarest Archives

ಸರ್ವೇಂದ್ರಿಯಾಭಿಮಾನಿಶ್ರೀಪ್ರಾಣಸಂಸ್ಥೇನ ವಿಷ್ಣುನಾ ।
ಪ್ರೇರಿತಃ ಶ್ರೀಶತುಷ್ಟ್ಯರ್ಥಂ ಕರಿಷ್ಯೇ ಕರ್ಮ ಚಾಖಿಲಮ್ ॥
ನಮೋ ವಸ್ತ್ವಾತ್ವಿಕಾ ದೇವಾ ವಿಷ್ಣುಭಕ್ತಿಪರಾಯಣಾಃ ।
ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವ ಹಿ ॥

ಶೌಚಕರ್ಮ

ಅನಂತರ ಹಾಸುಗೆಯಿಂದೆದ್ದು 'ಶೌಚಕರ್ಮ'ವನ್ನು ಪೂರಯಿಸಬೇಕು. ಅತ್ತ–ಇತ್ತ, ಅಟ್ಟಬೆಟ್ಟಗಳತ್ತ ಕಣ್ಣು ಹಾಯಿಸಿಕೊಂಡು, ತಲೆ ಕೆದರಿ, ಮೈ ತೆರೆದು ಶೌಚಮಾಡಬಾರದು; ನೆಟ್ಟ ನೋಟದಿಂದ ಮೈಯನ್ನು ನಲುಗಿಸದೆ ಕುಳಿತಿರಬೇಕು; ತಲೆಗೂದಲುಗಳನ್ನು ಬಟ್ಟೆಯಿಂದ ಮುಚ್ಚಿಕೊಂಡಿರಬೇಕು ಎಂದು ಶಾಸ್ತ್ರಕಾರರ ಮತ. ಮಲ–ಮೂತ್ರ ವಿಸರ್ಜನೆಯ ಕಾಲದಲ್ಲಿ ಏಕವಸ್ತ್ರನಾಗಿದ್ದರೆ, ತಲೆಗೆ ಬಟ್ಟೆ ಸುತ್ತಿಕೊಂಡಿರದಿದ್ದರೆ, ಆದರ ಪ್ರತಿನಿಧಿಯಾಗಿ ಯಜ್ಞೋಪವೀತವನ್ನು ಬಲಕಿವಿಗೆ ಸುತ್ತಿಕೊಳ್ಳಬೇಕು. ಬೇರೆ ಬಟ್ಟೆಯಿದ್ದರೆ ಯಜ್ಞೋಪವೀತವನ್ನು ಮಾಲಾಕಾರ [ನಿವೀತ]ವಾಗಿ ಧರಿಸಬೇಕು.[೩] ಶೌಚಕಾಲದಲ್ಲಿ ಹೊಯಿಗೆ ಬೆರೆತ ಸ್ವಚ್ಛವಾದ

ನಿನ್ನ ಪೂಜೆಯೆಂದು ಸ್ವೀಕರಿಸಿ ಕರುಣಿಸು. ವಿಷ್ಣುಭಕ್ತಿಪರರಾದ ದೇವತೆಗಳಿರಾ, ನೀವು ನಮಗೆ ಸನ್ಮಾರ್ಗದ ನಿರ್ದೇಶಕರಾಗಬೇಕು; ಬಾಳ ಕಡಲನ್ನು ದಾಟಿಸುವ ಅಂಬಿಗ ರಾಗಬೇಕು.'

ಇಂಥ ಅನುಸಂಧಾನದಿಂದ ಬಗೆ ಪಾವನವಾಗುತ್ತದೆ. ಬಾಳು ಧನ್ಯವಾಗುತ್ತದೆ. ಇಂಥ ನೆನಕೆಯಿಂದಲೇ ಸಾತ್ತ್ವಿಕತೆಯ ಉದಯವಾಗುತ್ತದೆ. ಹರಿಯನ್ನು ನೆನೆವುದಕ್ಕೆ ಇಂಥ ಮಂತ್ರವೇ–ಇಂಥ ವಾಕ್ಯವೇ ಆಗಬೇಕು ಎಂದಿಲ್ಲ. ಯಾವ ಮಾತಿನಿಂದ ನೆನೆದರೂ ಅದು ಹರಿಯನ್ನು ಮುಟ್ಟುತ್ತದೆ. ಅನುಸಂಧಾನ ಮುಖ್ಯ ಹೊರತು ಮಂತ್ರದ ಪದಪುಂಜವಲ್ಲ. ಆದ್ದರಿಂದಲೇ ಆಚಾರ್ಯಮಧ್ವರು 'ಸ್ಮೃತ್ವಾ ಹರಿಂ ಸಮುತ್ಥಾಯ' –ಹರಿಯನ್ನು ನೆನೆದು ಮುಂದಿನ ಕಾರ್ಯಗಳಿಗೆ ಎದ್ದು ಆಣಿಯಾಗಬೇಕು –ಎಂದಿದ್ದಾರೆ. ನೆನೆವ ರೀತಿ ಏನಾದರೇನು? ಎಂತಾದರೇನು? ಶ್ರೀಹರಿ ಮೆಚ್ಚುವ ರೀತಿ ಎಲ್ಲವೂ ನೆನೆವ ರೀತಿಯೇ. ಸಮಯಾನುಕೂಲವಿದ್ದವರು ಇನ್ನೂ ಹಲವು ಸ್ತೋತ್ರಗಳನ್ನು ಪಠಿಸಬಹುದು: ಮಂಗಲಾಷ್ಟಕ, ಗಜೇಂದ್ರಮೋಕ್ಷ ಇತ್ಯಾದಿ.

ಹರಿಯ ಸ್ತವನಗಳಲ್ಲೆಲ್ಲ ಸರ್ವೋಚ್ಚಸ್ತವನವೆನಿಸಿದ 'ಸಹಸ್ರನಾಮ'ವನ್ನು ಬೆಳಗ್ಗೆದ್ದು ಪಠಿಸಬೇಕು ಎನ್ನುವ ವಚನವೂ ಇದೆ:

ಸಂಕೀರ್ತ್ಯ ನಾಮಸಾಹಸ್ರಂ ನಮಸ್ಕೃತ್ಯ ಗುರೂನಪಿ ।
ತುಲಸೀಕಾನನಂ ಗಾಂ ಚ ಸಂಸ್ಪೃಶ್ಯಾಥ ಸಮಾಹಿತಃ ॥ — *(ಹಾರೀತ)*

'ತಿಳಿಯಾದ ಬಗೆಯಿಂದ ಸಹಸ್ರನಾಮವನ್ನು ಪಠಿಸಿ, ಹಿರಿಯರಿಗೆ ತಲೆಬಾಗಿ, ತುಳಸಿಯ ತೋಟಕ್ಕೆ ನೀರೆರೆದು ಮಣಿದು, ಹಸುವಿನ ಮೈತಿಕ್ಕಿ ತಿನ್ನಲಿಕ್ಕೆ ನಮಿಸಬೇಕು.'

೩. 'ಶಿರಃಪರಿವೇಷ್ಟನಂ ಪ್ರಥಮಮ್, ನಿವೀತಂ ದ್ವಿತೀಯಮ್, ದಿಶಾಮನವಲೋಕನಂ ತೃತೀಯಮ್.' — *(ಆಪಸ್ತಂಬ)*

Rarest Archiver

ಮಣ್ಣಿನಿಂದ, ತಿಳಿಯಾದ ನೀರಿನಿಂದ ಕೊಳೆಯನ್ನು ತೊಳೆದುಕೊಂಡು ಶುಚಿಯಾಗಿರ ಬೇಕು.೪ ಮೈಯ್ ನಿರ್ಮಲವಿದ್ದರೆ ಮನ ನಿರ್ಮಲವಾಗುತ್ತದೆ. ನೈರ್ಮಲ್ಯವನ್ನರಿ ಯದ ಜನದ ಬಗೆ ಕೆಸರಿನಿಂದ ಕದಡಿರುತ್ತದೆ. ಅಂಥ ಬಗೆಯಲ್ಲಿ ಭಗವಂತ ನೆಲೆಸಲಾರ. ಈ ದೇಹ ಭಗವಂತನ ದೇಗುಲ. ಅದನ್ನು ನಾವು ಎಷ್ಟು ಗುಡಿಸಿ–ಸಾರಿಸಿ ಚೊಕ್ಕ ಮಾಡಿದೆವು ಅಷ್ಟು ಚೆನ್ನು.೫

ದಂತಧಾವನ

ಅನಂತರದ ಕಾರ್ಯ ದಂತಧಾವನ.೬ ಇದಕ್ಕಾಗಿ ಹಲ್ಲುಗಳಿಗೆ ಹಿತವಾದ–ವಿಹಿತವಾದ 'ದಂತಕಾಷ್ಠ'ವನ್ನು ಉಪಯೋಗಿಸಬೇಕು. ಹಬ್ಬ ಹರಿದಿನಗಳಲ್ಲಿ

ತಲೆ ಮುಚ್ಚಿಕೊಂಡಿರಬೇಕು, ಜನಿವಾರ ಮಾಲಾಕಾರವಾಗಿರಬೇಕು, ಸುತ್ತು ದಿಕ್ಕುಗಳೆಡೆ ಕಣ್ಣು ಹಾಯಿಸದೆ ನಿಶ್ಚಲವಾಗಿರಬೇಕು. ಇವು ಪ್ರಾಚೀನರ ಶೌಚಸೂತ್ರಗಳು.

೪. ಇದಕ್ಕೆ ಕೆಲವು ಧರ್ಮಶಾಸ್ತ್ರಕಾರರು ಅಂಥ ಮಣ್ಣು – ಇಂಥ ಮಣ್ಣು ಎಂದು ನಿಯಮ ವಿಧಿಸಿದ್ದಾರೆ. ಎಲ್ಲದರ ತಾತ್ಪರ್ಯ ಒಂದೇ: ಮಣ್ಣು ನೈರ್ಮಲ್ಯದ ಸಾಧನವಾಗಿರ ಬೇಕು; ಮಣ್ಣನ್ನು ಬಳಿದುಕೊಳ್ಳುವುದು ಮೈಯನ್ನು ಕೊಳಕಾಗಿಸುವುದಕ್ಕಲ್ಲ ಎನ್ನುವುದು. ಅದರಿಂದಲೇ ಮನುವು ಯಾವ ದೇಶದಲ್ಲಿ ಎಂಥ ಮಣ್ಣು, ಎಂಥ ನೀರು ಅನು ಕೂಲವೋ ಹಿತವೋ ಅಲ್ಲಿ ಅದನ್ನು ಬಳಸಬೇಕು ಎಂದಿದ್ದಾನೆ:

ಯಸ್ಮಿನ್ ದೇಶೇ ತು ಯತ್ ತೋಯಂ ಯಾ ತು ತತ್ರೈವ ಮೃತ್ತಿಕಾ ।
ಸೈವ ತತ್ರ ಪ್ರಶಸ್ತಾ ಸ್ಯಾತ್ ತಯಾ ಶೌಚಂ ವಿಧೀಯತೇ ॥

೫. ಶೌಚ, ನೈರ್ಮಲ್ಯ ಇದ್ದರೆ ಎಲ್ಲ ಇದೆ. ಅದು ಒಂದು ಇಲ್ಲವಾದರೆ ಯಾವುದೂ ಇಲ್ಲ. ಅಶುಚಿಯ ಎಲ್ಲ ಕಾರ್ಯವೂ ನಿಷ್ಫಲ. ನೈರ್ಮಲ್ಯವೇ ಅಧಿಕಾರದ ಮೂಲಸೂತ್ರ ಎಂದಿದ್ದಾರೆ ಸ್ಮೃತಿಕಾರರು:

ಶೌಚೇ ಯತ್ನಃ ಸದಾ ಕಾರ್ಯಃ ಶೌಚಮೂಲೋ ದ್ವಿಜಃ ಸ್ಮೃತಃ ।
ಶೌಚಾಚಾರವಿಹೀನಸ್ಯ ಸಮಸ್ತಾ ನಿಷ್ಫಲಾಃ ಕ್ರಿಯಾಃ ॥ *– (ದಕ್ಷ)*

ಈ ನೈರ್ಮಲ್ಯದ ವಿಧಿಸೂತ್ರಗಳನ್ನು ನೆನಪಿನಲ್ಲಿಟ್ಟಿರಬೇಕು ಎಂದೇ ಆಚಾರ್ಯರು **'ಕೃತಶೌಚೋ ಯಥಾವಿಧಿ'** ಎಂದಿದ್ದಾರೆ.

೬. 'ದಂತಧಾವನ' ಎಂದರೆ –ಹಲ್ಲು ತೊಳೆಯುವುದು ಎಂದು ಒಂದು ಅರ್ಥ. 'ಹಲ್ಲು ಉಜ್ಜಲು ಉಪಯೋಗಿಸುವ ವಸ್ತು–ಸಾಧನ' (ದಂತಕಾಷ್ಠ –ಹಲ್ಲು ತಿಕ್ಕುವ ಕಡ್ಡಿ) ಎಂದು ಇನ್ನೊಂದು ಅರ್ಥ. ಮೊದಲನೆಯ ಅರ್ಥದ ದಂತಧಾವನ ಎಲ್ಲರಿಗೂ, ಎಲ್ಲ ದಿನಗಳಲ್ಲೂ ವಿಹಿತವಾದರೆ ಎರಡನೆಯ ಅರ್ಥದ ದಂತಧಾವನ ಗೃಹಸ್ಥರಿಗೆ ಪುಣ್ಯ ದಿನಗಳಲ್ಲಿ, ವ್ರತಿಗಳಿಗೆ ಯತಿಗಳಿಗೆ, ಎಲ್ಲ ದಿನಗಳಲ್ಲಿ ವಿಹಿತವಲ್ಲ ಎಂದು ಶಾಸ್ತ್ರಕಾರರ ಅಭಿಮತ. ವ್ರತಿಗಳು–ಬ್ರಹ್ಮಚಾರಿಗಳು ಈ ಹಲ್ಲುಕಡ್ಡಿಯನ್ನು ಉಪಯೋಗಿಸಬಾರದು. ಎಲೆಗಳಿಂದಲೇ ಹಲ್ಲು ತಿಕ್ಕಬೇಕು. ನಾಲಿಗೆಯ ಶುದ್ಧಿಗಷ್ಟೇ ಕಡ್ಡಿಯನ್ನು ಬಳಸಬೇಕು. ನಿಷ್ಠೆಯಲ್ಲಿರುವವರು ಉಪಭೋಗದ ವಸ್ತುಗಳಿಂದ ಎಷ್ಟು ದೂರಾದರೆ ಅಷ್ಟು ಚೆನ್ನು –ಅಲ್ಲವೇ?

Rarest Archiver

ಮಾತ್ರ ಕಾಷ್ಠವನ್ನು ಬಳಸದೆ ಮಾವು ಮೊದಲಾದ ಎಲೆಗಳಿಂದ ತೊಳೆಯಬೇಕು. ಆದರೆ ನಾಲಿಗೆಯ 'ಅಗ್ರ'ವನ್ನು ತೆಗೆಯಲು ಅಂಥ ದಿನಗಳಲ್ಲೂ 'ಕಾಷ್ಠ'[ಕಡ್ಡಿ]ವನ್ನು ಬಳಸಬಹುದು. ಬ್ರಹ್ಮಚಾರಿಗಳು ವ್ರತದೀಕ್ಷಿತರು ಮೊದಲಾದವರು ಕಾಷ್ಠವನ್ನು ಬಳಸದೆ ಬರಿಯ ಎಲೆಗಳಿಂದಲೆ ದಂತಧಾವನವನ್ನು ಮಾಡುವುದು ವಿಹಿತವಾಗಿದೆ.

ಆಚಮನ

ಹೀಗೆ ಹೊರಮೈಯ ಶುದ್ಧಿಯನ್ನು ಸಂಪಾದಿಸಿ ಆಂತರಿಕ ನೈರ್ಮಲ್ಯದ ಅನುಸಂಧಾನದ ಸಂಕೇತವಾಗಿ ಶುದ್ಧ ಜಲದಿಂದ ಮುಂದಿನ ಮಂತ್ರಗಳಿಂದ ಎರಡು ಬಾರಿ ಆಚಮನವನ್ನು ಮಾಡಬೇಕು.[೭] [ಕೆಲವರು ಸಂಧ್ಯಾವಂದನಕಾಲದಲ್ಲಿ ಮಾತ್ರ ಮಂತ್ರಪೂರ್ವಕ ಆಚಮನ ಮಾಡುತ್ತಾರೆ. ಇಲ್ಲಿ ಮಂತ್ರವಿರದ ಬರಿಯ ಆಚಮನ.]

ಆಚಮನದ ರೀತಿ:[೮]

ಓಂ ಋಗ್ವೇದಾಯ ಸ್ವಾಹಾ
ಓಂ ಯಜುರ್ವೇದಾಯ ಸ್ವಾಹಾ
ಓಂ ಸಾಮವೇದಾಯ ಸ್ವಾಹಾ

---

೭. ಆಚಮನ ಅಂತರಂಗಪಾವಿತ್ರ್ಯದ ಸಂಕೇತವೆಂತಲೇ ಆಗಣ ನಮ್ಮ ರೀತಿ ನೀತಿಗಳು ನೈರ್ಮಲ್ಯದ ದ್ಯೋತಕಗಳಾಗಿರಬೇಕು. ಆಗ ತಲೆಗೆ ಪಾಗು ಕಟ್ಟಿಕೊಂಡಿರಬಾರದು; ಬಟ್ಟೆ ಸುತ್ತಿಕೊಂಡಿರಬಾರದು; ಕಾಲಲ್ಲಿ ಜೋಡು ಮೆಟ್ಟಿಕೊಂಡಿರಬಾರದು. ಅಲ್ಲದೆ, ಈ ಆಚಮನವನ್ನು ಪೂರ್ವ ಉತ್ತರ ಅಥವಾ ಐಶಾನ್ಯಮುಖವಾಗಿ ಕುಳಿತು ಮಾಡಬೇಕು. ದಿಕ್ಕುಗಳು ಕೂಡ ಶುಭ-ಅಶುಭಗಳ, ಶುದ್ಧಿ-ಅಶುದ್ಧಿಗಳ ಸಂಕೇತವಾಗಿವೆ. ಪೂರ್ವ-ಉತ್ತರಗಳು ಶುಭದ ಶುದ್ಧಿಯ ಸಂಕೇತಗಳು. ಕೆಲವರು ಸ್ನಾನದ ಪೂರ್ವದಲ್ಲಿ ಮಂತ್ರರಹಿತವಾಗಿ ಆಚಮನ ಮಾಡುತ್ತಾರೆ.

೮. ಸ ಆಚಾಮೋಽಂತರಂಗಾನಾಂ ಸ್ನಾನರೂಪ್ಯೋ ನಿಗದ್ಯತೇ ।
ಋಗ್ಯಜುಃಸಾಮವೇದ್ಯೈಸ್ತು ಚತುರ್ಥ್ಯಂತೈಃ ಸಶದ್ವಯೈಃ ॥
ಆಶ್ನೀತ ತ್ರಿರ್ಮುಖಂ ತಿರ್ಯಙ್ ಮಾರ್ಜಯೇದ್ ದ್ವಿಃ ಸ್ಪೃಶನ್ನಪಃ ।
'ಅಥರ್ವವೇದಾಯ ನಮಃ' ಇತಿ ಪ್ರಾಚ್ಯೋ ಮನುಸ್ತಯೋಃ ॥
'ಇತಿಹಾಸಪುರಾಣಾಭ್ಯಾಂ ನಮಃ' ಇತ್ಯಪರೋ ಮತಃ ।
'ಅಗ್ನಯೇ ನಮಃ' ಇತ್ಯುಕ್ತ್ವಾ ಮಾರ್ಜಯೇದಧ ಆನನಮ್ ॥
'ವಿಷ್ಣವೇ ನಮಃ' ಇತ್ಯುಕ್ತ್ವಾ ಸಿಂಚೇತ್ ಪ್ರಪದಯೋರ್ಜಲಮ್ ।
ಸಾಂಗುಷ್ಠಯಾನಾಮಿಕಯಾ ಸ್ಪೃಶೇಚ್ಚಕ್ಷುರ್ದ್ವಯಂ ಕ್ರಮಾತ್ ॥
ತಥಾ ನಾಸೇ ತು ತರ್ಜನ್ಯಾ ಶ್ರೋತ್ರೇಽಂಗುಲ್ಯಾ ಕನಿಷ್ಠಯಾ ।
ಸಮಸ್ತಾಭಿರ್ವಾಮಪಾಣೇಂ ಸೀಮಾಂ ಮಧ್ಯಮಯಾ ಸ್ಪೃಶೇತ್ ॥
ಹೃದಯಂ ಚ ಸಮಸ್ತಾಭಿಃ ಸೂರ್ಯೋ ವಾಯುರ್ದಿಶಸ್ತಥಾ ।

Rarest Archiver

ಈ ಮೂರು ಮಂತ್ರಗಳಿಂದ –ಮೂರು ಬಾರಿ– ಉದ್ದಿನ ಕಾಳು ಮುಳುಗು ವಷ್ಟು ಶುದ್ಧ ಜಲವನ್ನು ಅಂಗೈಗೆ ಹಾಕಿ ಕುಡಿಯಬೇಕು.

ಓಂ ಅಥರ್ವವೇದಾಯ ನಮಃ
ಓಂ ಇತಿಹಾಸಪುರಾಣಾಭ್ಯಾಂ ನಮಃ

ಎರಡು ಬಾರಿ ಬಾಯಿಯನ್ನು ಅಡ್ಡವಾಗಿ ನೀರಿನಿಂದ ಒರೆಸಬೇಕು.

ಓಂ ಅಗ್ನಯೇ ನಮಃ

ಬಾಯಿಯ ಕೆಳಭಾಗವನ್ನು ಒರೆಸಬೇಕು.

ಓಂ ವಿಷ್ಣವೇ ನಮಃ

ಮುಂಗಾಲಿಗೆ ನೀರನ್ನು ಚಿಮುಕಿಸಬೇಕು.

ಓಂ ಸೂರ್ಯಾಯ ನಮಃ । ಓಂ ಸೂರ್ಯಾಯ ನಮಃ

ಹೆಬ್ಬೆರಳು–ಅನಾಮಿಕೆಗಳಿಂದ ಬಲ–ಎಡ ಕಣ್ಣುಗಳನ್ನು ಮುಟ್ಟಬೇಕು.

ಓಂ ವಾಯವೇ ನಮಃ । ಓಂ ವಾಯವೇ ನಮಃ

ಹೆಬ್ಬೆರಳು–ತೋರುಬೆರಳುಗಳಿಂದ ಮೂಗಿನ ಬಲ–ಎಡ ಹೊರಳೆಗಳನ್ನು.

ಓಂ ದಿಗ್ಭ್ಯೋ ನಮಃ । ಓಂ ದಿಗ್ಭ್ಯೋ ನಮಃ

ಹೆಬ್ಬೆರಳು–ಕಿರಿಬೆರಳುಗಳಿಂದ ಬಲ–ಎಡ ಕಿವಿಗಳನ್ನು.

ಓಂ ವಸಿಷ್ಠಾಯ ನಮಃ

ಎಲ್ಲ ಬೆರಳುಗಳಿಂದ ಎಡಗೈಯನ್ನು.

ಓಂ ಶ್ರಿಯೇ ನಮಃ

ಹೆಬ್ಬೆರಳು–ನಡುಬೆರಳುಗಳಿಂದ ಹೊಕ್ಕುಳನ್ನು.

ಓಂ ಪರಾತ್ಮನೇ ನಮಃ

ಎಲ್ಲ ಬೆರಳುಗಳಿಂದ ಎದೆಯನ್ನು ಮುಟ್ಟಬೇಕು.[೯]

ವಸಿಷ್ಠಃ ಶ್ರೀಃ ಪರಾತ್ಮಾ ಚ ಸೋದ್ದೇಶಾ ಹೃದ್‌ವಸಾನಕಾಃ ।
ತತ್ರ ಮಂತ್ರಾಃ ಪ್ರಶಸ್ಯಂತೇ ಮಂತ್ರಾಚಾಮೋಯಮೀರಿತಃ ॥

ಇಲ್ಲಿ ಎರಡು ಆಚಮನವಿಧಾನವನ್ನು ಕೊಟ್ಟಿದೆ. ಮೊದಲನೆಯದು ತೌಳವರಲ್ಲಿ, ಆಚಾರ್ಯರ ಜನ್ಮಭೂಮಿಯಲ್ಲಿ ಬಳಕೆಯಿರುವ ರೀತಿ. ಎರಡನೆಯದು ಕರ್ನಾಟಕ ದೇಶಸ್ಥರಲ್ಲಿ ಬಳಕೆಯಿರುವ ರೀತಿ. ಮೊದಲನೆಯದು ಶ್ರೌತಾಚಮನ; ಎರಡನೆಯದು ವೈಷ್ಣವಾಚಮನ. ಎರಡೂ ತೆರನಾದ ವಿಧಾನಕ್ಕೂ ಪ್ರಮಾಣವಿರುವುದರಿಂದ ಎಲ್ಲಿ ಹೇಗೆ ಸಂಪ್ರದಾಯವೋ ಆವರು ಹಾಗೆ ಆಚರಿಸಬೇಕು. ಒಂದೇ ಗುರಿಯನ್ನು ಮುಟ್ಟುವ ಎರಡು ಕವಲುದಾರಿಗಳನ್ನು ಸಂಧಿಸಿದಾಗ ನಮ್ಮ ಹಿರಿಯರು ನಡೆದುಬಂದ, ಜಾಡನ್ನೆ ಹಿಡಿದು ನಡೆವುದು ಚೆನ್ನು.

೯. ಶ್ರೌತಾಚಮನಪದ್ಧತಿ ಎಂದು ಪ್ರಸಿದ್ಧವಾದ ಈ ಪದ್ಧತಿ ವಿಶೇಷತಃ ತೌಳವರಲ್ಲಿ ಬಳಕೆ

Rarest Archiver

[ಆಚಮನದ ಇನ್ನೊಂದು ರೀತಿ–೧೦

ಓಂ ಕೇಶವಾಯ ಸ್ವಾಹಾ
ಓಂ ನಾರಾಯಣಾಯ ಸ್ವಾಹಾ
ಓಂ ಮಾಧವಾಯ ಸ್ವಾಹಾ

ಹಿಂದಿನಂತೆಯೇ ಮೂರು ಬಾರಿ ಜಲಪ್ರಾಶನ ಮಾಡಬೇಕು.

ಓಂ ಗೋವಿಂದಾಯ ನಮಃ । ಓಂ ವಿಷ್ಣವೇ ನಮಃ

ಎರಡೂ ಕೈಗಳನ್ನು ತೊಳೆದುಕೊಳ್ಳಬೇಕು.

ಓಂ ಮಧುಸೂದನಾಯ ನಮಃ । ಓಂ ತ್ರಿವಿಕ್ರಮಾಯ ನಮಃ

ತುಟಿಗಳನ್ನು ತೊಳೆದ ಬೆರಳುಗಳಿಂದ ಮುಟ್ಟಬೇಕು.

ಓಂ ವಾಮನಾಯ ನಮಃ । ಓಂ ಶ್ರೀಧರಾಯ ನಮಃ

ತುದಿಬೆರಳುಗಳಿಂದ ದವಡೆಗಳನ್ನು ಮುಟ್ಟಬೇಕು.

ಓಂ ಹೃಷೀಕೇಶಾಯ ನಮಃ

ಮತ್ತೊಮ್ಮೆ ಕೈಗಳನ್ನು ತೊಳೆದುಕೊಳ್ಳಬೇಕು.

ಇದೆ. ಆಚಾರ್ಯಮಧ್ವರ ಸದಾಚಾರಸ್ಮೃತಿಗೆ ಅನುಗುಣವಾಗಿ ನಾರಾಯಣ ಪಂಡಿತಾಚಾರ್ಯರು ರಚಿಸಿದ 'ಯೋಗದೀಪಿಕಾ'ದಲ್ಲಿ ಉಕ್ತವಾದ ಆಚಮನವಿಧಾನ ವಿದು. [ಈಗ ಬಳಕೆಯಲ್ಲಿರುವ ಪದ್ಧತಿಗೂ ಇದಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಆದರೆ ಆಚಾರ್ಯರ ಅನುಮತಿ ಪಡೆದ, ನಾರಾಯಣಪಂಡಿತರು ಉಲ್ಲೇಖಿಸಿದ ವಿಶಿಷ್ಟಪದ್ಧತಿ ಯಿದು. ಇದನ್ನು ಆಚರಣೆಗೆ ತರುವುದು ಹೆಚ್ಚು ಔಚಿತ್ಯಪೂರ್ಣ.] ಇಲ್ಲಿ ಆಯಾ ಇಂದ್ರಿಯಗಳನ್ನು ಮುಟ್ಟುವಾಗ ಆಯಾ ಇಂದ್ರಿಯಗಳ ಅಭಿಮಾನಿಗಳನ್ನು ಸ್ಮರಿಸುವ ತತ್ತ್ವವನ್ನು ಕಾಣುತ್ತೇವೆ. 'ತಾತ್ವಿಕ ದೇವತೆಗಳೆ, ನನ್ನ ಕರಣಗಳು ಹರಿಯನ್ನು ಮರೆಯ ದಿರಲಿ' ಎಂದು ಪ್ರಾರ್ಥಿಸುವುದು ಇದರ ತಾತ್ಪರ್ಯ. ಮುಖ್ಯವಾದ ವಿಧಿನಿಷೇಧಗಳು ಎರಡೆ. ಹರಿಯನ್ನು ನೆನೆಯಬೇಕು; ಮರೆಯಬಾರದು. ಉಳಿದೆಲ್ಲವುಗಳು ಇದರ ಪೂರಕಗಳು, ಅಂಗಗಳು. ಆದರಿರ ಎಲ್ಲ ಕಾರ್ಯಾರಂಭದಲ್ಲಿ ಈ ಭಾವನೆಯನ್ನು ಮೂಡಿಸುವುದಕ್ಕಾಗಿ ಶಾಸ್ತ್ರಕಾರರು ಆಚಮನವನ್ನು ವಿಧಿಸಿದ್ದಾರೆ. ಜತೆಗೆ ಶುದ್ಧಿಯ ಸಂಕೇತವಾದ ಶುದ್ಧಜಲಪ್ರಾಶನವೂ ಸೇರಿದೆ. ಹೀಗೆ ಆಚಮನದಿಂದ ಮನದ ಮಲವನ್ನು ತೊಳೆದು ಮೊದಲನೆಯ ಹಂತದ ಆಂತರಂಗ-ಬಹಿರಂಗಶುದ್ಧಿಯನ್ನು ಸಂಪಾದಿಸಿ ಸ್ನಾನಕ್ಕೆ ಆಣಿಯಾಗಬೇಕು ಎಂದಿದ್ದಾರೆ ಆಚಾರ್ಯರು: **'ಧೌತದಂತಃ ಸಮಾಚಮ್ಯ ಸ್ನಾನಂ ಕುರ್ಯಾತ್'** ಎಂದು.

೧೦. ನಮ್ಮ ದೇಹದ ಒಂದೊಂದು ಅಂಗಗಳಲ್ಲಿಯೂ ಇದ್ದು ನಮ್ಮನ್ನು ಸಲಹುವ ಪರಮಾತ್ಮನ ರೂಪಗಳನ್ನು ನೆನೆದು ಜಾಗೃತಿಯನ್ನು ಪಡೆವುದು ಕೇಶವಾದಿ ಮಂತ್ರಗಳ ಅನುಸಂಧಾನದ ಕೃತ್ಯ. ಈ ದೇಹದಲ್ಲೆಲ್ಲ ಪರಮಾತ್ಮ ತುಂಬಿಕೊಂಡಿದ್ದಾನೆ. ನಾವು ನಮ್ಮನ್ನು ಅವನಿಗೆ ಅರ್ಪಿಸಿಕೊಂಡಿದ್ದೇವೆ. ನಮ್ಮನ್ನು ಸಲಹುವ, ಧರ್ಮಮಾರ್ಗದಲ್ಲಿ ನಡೆಸುವ ಭಾರ ಅವನದು. ಇದು ಆಚಮನದ ಹಿನ್ನೆಲೆ.

Rarest Archiver

ಓಂ ಪದ್ಮನಾಭಾಯ ನಮಃ

ಬೆರಳುಗಳಿಂದ ಕಾಲುಗಳಿಗೆ ನೀರನ್ನು ಚಿಮುಕಿಸಬೇಕು.

ಓಂ ದಾಮೋದರಾಯ ನಮಃ

ನಡುಬೆರಳಿನಿಂದ ತಲೆಯನ್ನು ಮುಟ್ಟಬೇಕು.

ಓಂ ಸಂಕರ್ಷಣಾಯ ನಮಃ

ನಡುಬೆರಳಿನಿಂದ ತುದಿಮೂಗನ್ನು ಮುಟ್ಟಬೇಕು.

ಓಂ ವಾಸುದೇವಾಯ ನಮಃ । ಓಂ ಪ್ರದ್ಯುಮ್ನಾಯ ನಮಃ

ಹೆಬ್ಬೆರಳು–ತೋರುಬೆರಳುಗಳಿಂದ ಮೂಗಿನ ಬಲ–ಎಡ ಹೊರಳೆಗಳನ್ನು ಮುಟ್ಟಬೇಕು.

ಓಂ ಅನಿರುದ್ಧಾಯ ನಮಃ । ಓಂ ಪುರುಷೋತ್ತಮಾಯ ನಮಃ

ಹೆಬ್ಬೆರಳು–ಅನಾಮಿಕೆಗಳಿಂದ ಬಲ–ಎಡ ಕಣ್ಣುಗಳಿಗೆ ನೀರು ಮುಟ್ಟಿಸಬೇಕು.

ಓಂ ಅಧೋಕ್ಷಜಾಯ ನಮಃ । ಓಂ ನಾರಸಿಂಹಾಯ ನಮಃ

ಹೆಬ್ಬೆರಳು–ಕಿರಿಬೆರಳುಗಳಿಂದ ಬಲ–ಎಡ ಕಿವಿಗಳನ್ನು ಮುಟ್ಟಬೇಕು.

ಓಂ ಅಚ್ಯುತಾಯ ನಮಃ

ಹೊಕ್ಕುಳನ್ನು ಮುಟ್ಟಬೇಕು.

ಓಂ ಜನಾರ್ದನಾಯ ನಮಃ

ಅಂಗೈಯಿಂದ ಎದೆಯನ್ನು ಮುಟ್ಟಬೇಕು.

ಓಂ ಉಪೇಂದ್ರಾಯ ನಮಃ

ತಲೆಯ ಮೇಲೆ ಕೈಯನ್ನಿರಿಸಬೇಕು.

ಓಂ ಹರಯೇ ನಮಃ । ಓಂ ಶ್ರೀಕೃಷ್ಣಾಯ ನಮಃ

ತುದಿಬೆರಳುಗಳಿಂದ ಬಲ–ಎಡ ತೋಳುಗಳನ್ನು ಮುಟ್ಟಬೇಕು.]

ಪ್ರಾತಃಸ್ನಾನ

ಅನಂತರ– **ವಿಷ್ಣುಪ್ರೇರಣಯಾ ವಿಷ್ಣುಪ್ರೀತ್ಯರ್ಥಂ ಪ್ರಾತಃಸ್ನಾನಂ ಕರಿಷ್ಯೇ** ಎಂದು ಸಂಕಲ್ಪಿಸಿ–೧೧

---

೧೧. ಯಾವುದೇ ಒಂದು ಕಾರ್ಯದ ಪೂರ್ವಭಾವಿಯಾಗಿ ಮನಸ್ಸಿನಲ್ಲಿ ಮಾಡಿಕೊಳ್ಳುವ ತೀರ್ಮಾನಕ್ಕೆ 'ಸಂಕಲ್ಪ' ಎಂದು ಹೆಸರು. ಯಾವ ಕಾರ್ಯಕ್ಕೆ ತೊಡಗುವುದಾದರೂ ನಮಗೆ 'ಇದಮಿತ್ಥಂ' ಎನ್ನುವ ಸಂಕಲ್ಪ ಬೇಕು. ಆದರೆ ಈ ಸಂಕಲ್ಪ ಸ್ವಾರ್ಥದಲ್ಲಿ ಪರ್ಯವಸಾನವಾಗಬಾರದು. ತನ್ನಲ್ಲಿಯೆ ಸೀಮಿತವಾಗಿರಬಾರದು. ನಮ್ಮ ಎಲ್ಲ ಕೆಲಸ ಭಗವಂತನಿಂದ ಪ್ರೇರಿತವಾಗಿದೆ; ಭಗವಂತನಿಗಾಗಿ ಇದೆ –ಎನ್ನುವುದಕ್ಕಾಗಿ ಪ್ರಾಚೀನರು ಸಂಕಲ್ಪಮಂತ್ರದಲ್ಲಿ **ವಿಷ್ಣುಪ್ರೇರಣಯಾ ವಿಷ್ಣುಪ್ರೀತ್ಯರ್ಥಂ** ಎಂಬ ಪದಗಳನ್ನು ಸೇರಿಸಿ ಕೊಂಡರು. ನಾನು ಮಾಡುವ ಎಲ್ಲ ಕೆಲಸವೂ ಭಗವಂತನ ಸೇವೆಯಾಗಿದೆ ಎಂದು ಸಂಕಲ್ಪಿಸಿ ಕಾರ್ಯಕ್ಕೆ ತೊಡಗುವ ಪದ್ಧತಿ ಸಾತ್ತ್ವಿಕವೂ ಆಗಿದೆ; ಪವಿತ್ರವೂ ಆಗಿದೆ.

Rarest Archiver

ಯಸ್ಯ ಪಾದೋದ್ಭವಾಂ ಗಂಗಾಂ ತ್ರೈಲೋಕ್ಯೇಶೋ ಮಹೇಶ್ವರಃ ।
ದಧಾರ ಶಿರಸಾ ಭಕ್ತ್ಯಾ ತಂ ನಮಾಮಿ ಹರಿಂ ಪರಮ್ ॥[೧೨]

ಎಂದು ಭಗವಂತನನ್ನು ನೆನೆದು–

ಇಮಂ ಮೇ ಗಂಗೇ ಯಮುನೇ ಸರಸ್ವತಿ
ಶುತುದ್ರಿ ಸ್ತೋಮಂ ಸಚತಾ ಪರುಷ್ಣ್ಯಾ ।
ಅಸಿಕ್ನ್ಯಾ ಮರುದ್ವೃಧೇ ವಿತಸ್ತಯಾ-
ರ್ಜೀಕೀಯೇ ಶೃಣುಹ್ಯಾ ಸುಷೋಮಯಾ ॥[೧೩]

ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ ।
ನರ್ಮದೇ ಸಿಂಧುಕಾವೇರಿ ಜಲೇಽಸ್ಮಿನ್ ಸನ್ನಿಧಿಂ ಕುರು ॥[೧೪]

ಎಂದು ಎಲ್ಲ ಪುಣ್ಯಜಲದ ದೇವತೆಗಳೂ ನಾವು ಮೀಯುವ ನೀರಿನಲ್ಲಿ ಸನ್ನಿಹಿತ ರಾಗುವಂತೆ ವಿನಂತಿಸಿಕೊಂಡು ಮೀಯಬೇಕು.[೧೫] ತಟಾಕಾದಿಗಳಲ್ಲಿ ಮುಳುಗಿ ಮೀಯುವುದು ಹೆಚ್ಚು ಪ್ರಶಸ್ತ.[೧೬]

---

೧೨. 'ಹರಿಯ ಕಾಲಿನಿಂದ ಹರಿದುಬಂದ ಗಂಗೆಯನ್ನು ಮೂರು ಲೋಕದ ಒಡೆಯನಾದರೂ ಶಂಕರನು ತಲೆಯಲ್ಲಿ ಹೊತ್ತನಂತೆ. ಅಂಥ ಪವಿತ್ರಮೂರ್ತಿ ಹರಿಗೆ ವಂದನೆಗಳು' –ಎನ್ನುವ ತಾತ್ಪರ್ಯದ ಈ ಮಂತ್ರದ ಅನುಸಂಧಾನವೇ ಒಂದು ಪವಿತ್ರ ಸ್ನಾನ. ಈ ಮಂತ್ರಸ್ನಾನಕ್ಕಿಂತ ಮಿಗಿಲಾದ ಸ್ನಾನ ಒಂದಿದೆಯೆ? – **'ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ'** ಎಂದು ಪ್ರಾಚೀನರು ನುಡಿದುದು ಈ ಕಾರಣದಿಂದಲೇ. ಪರಮಪುರುಷನನ್ನು ನೆನೆವವನು ಎಂದೂ-ಎಲ್ಲೂ ಪವಿತ್ರನೆ; ಜಗನ್ನಿಯಾಮಕನ ಅರಿವಿರದ ಜನ ಎಷ್ಟು ಮಿಂದರೇನು? ಏನು ತೊಳೆದರೇನು?

೧೩. 'ಭಾರತದ ಖ್ಯಾತನದಿಗಳಾದ ಗಂಗೆ, ಯಮುನೆ, ಸರಸ್ವತಿ, ಶುತುದ್ರಿ, ಪರುಷ್ಣೀ, ಅಸಿಕ್ನೀ, ಮರುದ್ವೃಧಾ, ವಿತಸ್ತಾ, ಆರ್ಜೀಕಿಯಾ ಮತ್ತು ಸುಷೋಮಾ-ಹಿಮಾಲಯದಿಂದ ಹರಿವ ಈ ನದಿಗಳೆಲ್ಲ ನನ್ನ ಪ್ರಾರ್ಥನೆಯನ್ನಾಲಿಸಲಿ' ಎನ್ನುತ್ತದೆ ಈ ವೇದಮಂತ್ರ.

೧೪. 'ಗಂಗೆ ಯಮುನೆ ಮುಂತಾದ ಎಲ್ಲ ತೀರ್ಥಗಳೂ ನಾನು ಮೀಯುವ ನೀರಿನಲ್ಲಿ ಸನ್ನಿಹಿತವಾಗಿರಲಿ' ಎನ್ನುವ ಅನುಸಂಧಾನ ಮನವನ್ನು ತೊಳೆಯುತ್ತದೆ; ಮೀಯುವ ನೀರು ಮೈಯನ್ನು ತೊಳೆಯುತ್ತದೆ.

೧೫. ಸ್ನಾನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ತಾರತಮ್ಯವನ್ನು ಶಾಸ್ತ್ರಕಾರರು ನಿರೂಪಿಸಿದ್ದಾರೆ. ಸಂದರ್ಭವಿಶೇಷದಲ್ಲಿ ಬಿಸಿನೀರು ಸ್ನಾನವನ್ನೂ ಅವರು ಒಪ್ಪಿದ್ದಾರೆ. ಆರೋಗ್ಯ ಸರಿಯಿಲ್ಲದಿರುವಾಗ ಕಂಠಸ್ನಾನ, ಕಟಿಸ್ನಾನ, ಒದ್ದೆ ಬಟ್ಟೆಯಿಂದ ಮೈ ಒರಸಿಕೊಳ್ಳುವುದು, ನೀರನ್ನು ಪ್ರೋಕ್ಷಿಸಿಕೊಳ್ಳುವುದು, ಹರಿಯನ್ನು ನೆನೆದು ಮಂತ್ರಸ್ನಾನ ಮಾಡುವುದು ಎಲ್ಲವೂ ವಿಹಿತವೆ. ಅದರಿಂದಲೇ ಆಚಾರ್ಯರು ಎಲ್ಲವನ್ನೂ ಕ್ರೋಡೀಕರಿಸಿ –**'ವಿಧಾನತಃ'**– ವಿಧಿವತ್ತಾಗಿ ಮಾಡಬೇಕು ಎಂದು ಒಂದು ಮಾತಿನಲ್ಲಿ ಮುಗಿಸಿ ಮುಂದೆ ತಟಾಕಸ್ನಾನದ ವಿಶೇಷ ವಿಧಿಗಳನ್ನು ವಿವರಿಸಿದ್ದಾರೆ.

೧೬. ಎಂತಲೆ ಸಮೀಪದಲ್ಲಿ ನದಿ-ಕೆರೆಗಳ ಸೌಕರ್ಯವುಳ್ಳವರು ಮುಳುಗಿ ಮೀಯುವುದು ಚೆನ್ನು. ಆದರ ವಿಶೇಷ ವಿಧಿಗಳನ್ನು ಆಚಾರ್ಯರು ಈ ರೀತಿ ವಿವರಿಸಿದ್ದಾರೆ:

Rarest Archiver

ಉದ್ಧೃತೇತಿ ಮೃದಾಲಿಪ್ಯ ದ್ವಿಷಡಷ್ಟಷಡಕ್ಷರೈಃ ।
ತ್ರಿರ್ನಿಮಜ್ಯಾಪ್ಯಸೂಕ್ತೇನ ಪ್ರೋಕ್ಷಯಿತ್ವಾ ಪುನಸ್ತಥಾ ॥
ಮೃದಾಽಽಲಿಪ್ಯ ನಿಮಜ್ಯ ತ್ರಿಸ್ತ್ರಿರ್ಜಪೇದಘಮರ್ಷಣಮ್ ।
ಸ್ರಷ್ಟಾರಂ ಸರ್ವಲೋಕಾನಾಂ ಧ್ಯಾತ್ವಾ ನಾರಾಯಣಂ ಪರಮ್ ॥
ಯತಶ್ಚಾಸೋ ನಿಮಜ್ಯಾಪ್ಸು ಪ್ರಣವೇನೋತ್ಥಿತಃ ಸದಾ ।
ಸಿಂಚೇತ್ ಪುರುಷಸೂಕ್ತೇನ ಸ್ವದೇಹಸ್ಥಂ ಹರಿಂ ಸ್ಮರನ್ ॥

ಆಚಾರ್ಯರ ವಚನದಂತೆ ಅವಗಾಹನಸ್ನಾನದ ವಿಧಿ ಈ ತೆರನಾಗಿದೆ:

ಜಲಾಶಯದಲ್ಲಿ ಪೂರ್ವಾಭಿಮುಖವಾಗಿ ಅಥವಾ ಪ್ರವಾಹಾಭಿಮುಖವಾಗಿ ನಿಂತು ಕೊಂಡು ಹಿಂದೆ ಹೇಳಿದಂತೆಯೆ ಸಂಕಲ್ಪಿಸಿ [ಸಂಕಲ್ಪದ ಮುನ್ನ ಮೂರು ಬಾರಿ ಮುಳುಗಿ ಮಲಸ್ನಾನ ಮಾಡುವುದು ಸಂಪ್ರದಾಯ] ಕೆಳಗಿನ ಮಂತ್ರದಿಂದ ಮೃತ್ತಿಕೆಯನ್ನು ಮೈಗೆ ಹಚ್ಚಿಕೊಳ್ಳಬೇಕು:

ಉದ್ಧೃತಾಸಿ ವರಾಹೇಣ ಕೃಷ್ಣೇನ ಶತಬಾಹುನಾ ।
ಮೃತ್ತಿಕೇ ಹನ ಮೇ ಪಾಪಂ ಯನ್ಮಯಾ ದುಷ್ಕೃತಂ ಕೃತಮ್ ॥
ಮೃತ್ತಿಕೇ ಬ್ರಹ್ಮದತ್ತಾಸಿ ಕಾಶ್ಯಪೇನಾಭಿಮಂತ್ರಿತಾ ।
ಮೃತ್ತಿಕೇ ದೇಹಿ ಮೇ ಪುಷ್ಟಿಂ ತ್ವಯಿ ಸರ್ವಂ ಪ್ರತಿಷ್ಠಿತಮ್ ॥
ಮೃತ್ತಿಕೇ ಪ್ರತಿಷ್ಠಿತಂ ಸರ್ವಂ ತನ್ಮೇ ನಿರ್ಬುದ ಮೃತ್ತಿಕೇ ।
ತ್ವಯಾ ಹತೇನ ಪಾಪೇನ ಗಚ್ಛಾಮಿ ಪರಮಾಂ ಗತಿಮ್ ॥

ಅನಂತರ 'ಓಂ ನಮೋ ಭಗವತೇ ವಾಸುದೇವಾಯ', 'ಓಂ ನಮೋ ನಾರಾಯಣಾಯ', 'ಓಂ ವಿಷ್ಣವೇ ನಮಃ' ಎಂದು ಈ ಮೂರು ಮಂತ್ರಗಳಿಂದ ಮೂರು ಬಾರಿ ಮುಳುಗಬೇಕು. ಆಮೇಲೆ ಕೆಳಗಿನ ಸೂಕ್ತವನ್ನು ಪಠಿಸುತ್ತ ನೀರನ್ನು ಪ್ರೋಕ್ಷಿಸಬೇಕು:

ಆಪ್ಸೋ ಹಿ ಷ್ಠಾ ಮಯೋ ಭುವಸ್ತಾ ನ ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ । ಯೋ ವಃ ಶಿವತಮೋ ರಸಸ್ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ । ತಸ್ಮಾ ಅರಂ ಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ । ಆಪ್ಸೋ ಜನಯಥಾ ಚ ನಃ ॥

ಮತ್ತೊಮ್ಮೆ 'ಉದ್ಧೃತಾಽಸಿ'– ಇತ್ಯಾದಿಮಂತ್ರಗಳಿಂದ ಮೃತ್ತಿಕೆಯನ್ನು ಲೇಪಿಸಿ ಕೊಂಡು ಹಿಂದೆ ಹೇಳಿದಂತೆಯೆ ದ್ವಾದಶಾಕ್ಷರ-ಅಷ್ಟಾಕ್ಷರ-ಷಡಕ್ಷರಗಳಿಂದ ಮೂರು ಬಾರಿ ಮುಳುಗಬೇಕು. ಅನಂತರ ನೀರಲ್ಲಿ ಮುಳುಗಿ ಕುಳಿತು ಜಗತ್ಕಾರಣನಾದ ನಾರಾಯಣನನ್ನು ನೆನೆಯುತ್ತ ಮೂರು ಬಾರಿ ಅಘಮರ್ಷಣವನ್ನು ಜಪಿಸಬೇಕು:

ಓಂ ಋತಂ ಚ ಸತ್ಯಂ ಚಾಭೀದ್ಧಾತ್ ತಪಸೋಽಧ್ಯಜಾಯತ । ತತೋ ರಾತ್ರ್ಯಜಾಯತ ತತಃ ಸಮುದ್ರೋ ಅರ್ಣವಃ । ಸಮುದ್ರಾದರ್ಣವಾದಧಿ ಸಂವತ್ಸರೋಽಅಜಾಯತ । ಅಹೋರಾತ್ರಾಣಿ ವಿದಧದ್ ವಿಶ್ವಸ್ಯ ಮಿಷತೋ ವಶೀ । ಸೂರ್ಯಾಚಂದ್ರಮಸೌ ಧಾತಾ ಯಥಾಪೂರ್ವಮಕಲ್ಪಯತ್ । ದಿವಂ ಚ ಪೃಥಿವೀಂ ಚಾಂತರಿಕ್ಷಮಥೋ ಸ್ವಃ ॥

ಅನಂತರ ಓಂಕಾರವನ್ನು ಜಪಿಸಿ ನೀರಿನಿಂದ ಮೇಲೆದ್ದು ಪುರುಷಸೂಕ್ತದ ಮಂತ್ರಗಳಿಂದ ತನ್ನ ದೇಹದಲ್ಲಿರುವ ಭಗವಂತನಿಗೆ ಇದು ಅಭಿಷೇಕ ಎಂದು ನೆನೆದುಕೊಂಡು ತನ್ನ ಶಿರಸ್ಸಿನ ಮೇಲೆ ನೀರನ್ನು ಸೇಚಿಸಿಕೊಳ್ಳಬೇಕು:

Rarest Archiver

ವಸ್ತ್ರಧಾರಣ[೧೭]

ಅನಂತರ ಒಣಗಿದ ಬಟ್ಟೆಯನ್ನು ಉಟ್ಟುಕೊಳ್ಳಬೇಕು. ದೇವತಾತರ್ಪಣ ಮುಗಿದ ಅನಂತರ ಸ್ನಾನದ ಒದ್ದೆ ಬಟ್ಟೆಯನ್ನು ಒಣಹಾಕಬೇಕು.

ಊರ್ಧ್ವಪುಂಡ್ರಧಾರಣ

ಅನಂತರ ಎರಡುಬಾರಿ ಆಚಮನಮಾಡಿ ಗೋಪೀಚಂದನದಿಂದ ಕೇಶವಾದಿ ದ್ವಾದಶನಾಮಸ್ಮರಣಪೂರ್ವಕವಾಗಿ ಊರ್ಧ್ವಪುಂಡ್ರಗಳನ್ನು ಧರಿಸಬೇಕು:[೧೮]

೧. ಓಂ ಕೇಶವಾಯ ನಮಃ	(ಹಣೆಯಲ್ಲಿ ಹುಬ್ಬುಗಳ ನಡುವಿನಿಂದ ತಲೆಗೂದಲಿನ ವರೆಗೆ)
೨. ಓಂ ನಾರಾಯಣಾಯ ನಮಃ	(ಹೊಟ್ಟೆ)
೩. ಓಂ ಮಾಧವಾಯ ನಮಃ	(ಎದೆ)
೪. ಓಂ ಗೋವಿಂದಾಯ ನಮಃ	(ಕುತ್ತಿಗೆ)
೫. ಓಂ ವಿಷ್ಣವೇ ನಮಃ	(ಹೊಟ್ಟೆಯ ಬಲಬದಿ)
೬. ಓಂ ಮಧುಸೂದನಾಯ ನಮಃ	(ಬಲತೋಳು)
೭. ಓಂ ತ್ರಿವಿಕ್ರಮಾಯ ನಮಃ	(ಕತ್ತಿನ ಬಲಬದಿ)
೮. ಓಂ ವಾಮನಾಯ ನಮಃ	(ಹೊಟ್ಟೆಯ ಎಡಬದಿ)
೯. ಓಂ ಶ್ರೀಧರಾಯ ನಮಃ	(ಎಡತೋಳು)
೧೦. ಓಂ ಹೃಷೀಕೇಶಾಯ ನಮಃ	(ಕತ್ತಿನ ಎಡಬದಿ)
೧೧. ಓಂ ಪದ್ಮನಾಭಾಯ ನಮಃ	(ಬೆನ್ನಿನ ಕೆಳಬದಿ)
೧೨. ಓಂ ದಾಮೋದರಾಯ ನಮಃ	(ಕತ್ತಿನ ಹಿಂಬದಿ)

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ ದಶಾಂಗುಲಮ್ ॥

೧೭. ಈ ಮಾತನ್ನು ಆಚಾರ್ಯರು 'ವಸಿತ್ವಾ ವಾಸಃ' ಎಂದೂ 'ನಿಪೀಡ್ಯಾಥ ವಾಸೋ ವಿಸ್ತೀರ್ಯ ಚಾಂಜಸಾ' ಎಂದೂ ಹೇಳಿದ್ದಾರೆ.

೧೮. ಈ ಊರ್ಧ್ವಪುಂಡ್ರಧಾರಣ ನಮ್ಮ ದೇಹದೊಳಗಿನ ನಾಡೀಚಕ್ರಗಳನ್ನು ಶುದ್ಧಿಗೊಳಿಸುತ್ತದೆ; ಚುರುಕುಗೊಳಿಸುತ್ತದೆ. ನಾಭಿಮೂಲದಿಂದ ಹೊರಟ ಸುಷುಮ್ನಾನಾಡಿ ಹೃದಯ –ಕಂಠ–ನಾಸಾಮೂಲದ ಮಾರ್ಗವಾಗಿ ನೆತ್ತಿಯ ನಡುವಿನಲ್ಲಿ ಊರ್ಧ್ವಮುಖವಾಗಿ ನಿಂತಿದೆ. ಆದರ ಎಡಬಲಗಳಲ್ಲಿ ಇಡಾ–ಪಿಂಗಲಾ ಎಂಬ ನಾಡಿಗಳಿವೆ. ಜೀವದ ಊರ್ಧ್ವಮುಖೀಗಮನಕ್ಕೆ ಈ ನಾಡಿಗಳನ್ನು ಉನ್ಮುಖಿಗೊಳಿಸುವುದು ತೀರ ಆವಶ್ಯ. ಹೀಗೆ ನಾಡಿಯ ಊರ್ಧ್ವಗತಿಯನ್ನು ಸೂಚಿಸುವ ಸಂಕೇತವಾದ ಈ ಊರ್ಧ್ವಪುಂಡ್ರ ಧಾರಣಕ್ಕೆ ಸಾಧನೆಯಲ್ಲಿ ಬಹಳ ಮಹತ್ವದ ಸ್ಥಾನ ಉಂಟು. ಈ ಅನುಸಂಧಾನವಿಲ್ಲದ ಸಾಧನೆಯಿಂದ ಯಾವ ಫಲವೂ ಇಲ್ಲ. ಇದೇ ಊರ್ಧ್ವಪುಂಡ್ರದ ಮಹತ್ವ. ಅದರಿಂದಲೇ ಎಲ್ಲ ಸಾಧನೆಯ ಮೊದಲೂ ಊರ್ಧ್ವಪುಂಡ್ರವನ್ನು ಧರಿಸಲೇಬೇಕು ಎಂದು ಶಾಸ್ತ್ರ

Rarest Archiver

ದ್ವಾದಶಪುಂಡ್ರಗಳ ಆದ್ಯಂತಗಳಲ್ಲಿ **ಓಂ ನಮೋ ಭಗವತೇ ವಾಸುದೇವಾಯ** ಎಂದು ನೆತ್ತಿಯಲ್ಲಿಯೂ ಪುಂಡ್ರವನ್ನು ಧರಿಸಬೇಕು.

ಮುದ್ರಾಧಾರಣ

ಅನಂತರ ಉಳಿದ ಗೋಪೀಚಂದನದಿಂದ ಮುದ್ರೆಗಳನ್ನು ಧರಿಸಬೇಕು. ಅವುಗಳಲ್ಲಿ ಚಕ್ರಪದ್ಮ ಮುದ್ರೆಗಳನ್ನು ಕಣ್ಣಿನ–ಹೊಟ್ಟೆಯ–ಕೊರಳ ಬಲಬದಿ, ಬಲ ಭುಜಗಳಲ್ಲಿ; ಗದಾಶಂಖಿಗಳನ್ನು ಕಣ್ಣಿನ–ಹೊಟ್ಟೆಯ–ಕೊರಳ ಎಡಬದಿ, ಎಡಭುಜ ಗಳಲ್ಲಿ; ನಾರಾಯಣಮುದ್ರೆಯನ್ನು ಎಲ್ಲ ಕಡೆ; ಎದೆಯ ಮೇಲೆ ಪದ್ಮ ಮುದ್ರೆಯನ್ನು ಲಲಾಟದಲ್ಲಿ ಗದಾಮುದ್ರೆಯನ್ನು; ಶಿರಸ್ಸಿನಲ್ಲಿ ಎಲ್ಲ ಮುದ್ರೆ ಗಳನ್ನೂ ಧರಿಸಬೇಕು.[೧೯]

ಪ್ರಾತಃಸಂಧ್ಯೆ

ಹಿಂದೆ ಹೇಳಿದ ಮಂತ್ರಗಳಿಂದ ಎರಡುಬಾರಿ ಆಚಮನಮಾಡಿ ಸಂಕಲ್ಪ ಮಾಡಬೇಕು:

ಸಂಕಲ್ಪ

ಅಸ್ಮಿನ್ ಪ್ರವರ್ತಮಾನೇ .....ಸಂವತ್ಸರೇ[೨೦] .....ಅಯನೇ .....ಋತೌ .....ಮಾಸೇ .....ಪಕ್ಷೇ .....ತಿಥೌ .....ವಾಸರೇಽದ್ಯ ಶುಭದಿನೇ [ಮಧ್ವಾಂತ

ಕಾರರು ಒತ್ತಾಯಪೂರ್ವಕವಾಗಿ ವಿಧಿಸಿದ್ದಾರೆ. ಕೆಲವರು ಕೃಷ್ಣಪಕ್ಷದಲ್ಲಿ ಕೇಶವಾದಿ ದ್ವಾದಶನಾಮಗಳ ಬದಲು ಸಂಕರ್ಷಣಾದಿದ್ವಾದಶನಾಮಗಳನ್ನು ಉಚ್ಚರಿಸಿ ದ್ವಾದಶ ಪುಂಡ್ರಗಳನ್ನು ಧರಿಸುತ್ತಾರೆ.

೧೯. ಸಾತ್ತ್ವತಸಂಹಿತೆಯಲ್ಲಿ ಈ ಮಾತು ಬಂದಿದೆ:

ಚಕ್ರಪದ್ಮಂ ಚ ದಕ್ಷೇ ತು ಗದಾಶಂಖಂ ತು ವಾಮತಃ ।
ಅಷ್ಟಾಕ್ಷರಾಂಕಿತಾಂ ಮುದ್ರಾಂ ಸರ್ವಸ್ಥಾನೇಷು ಧಾರಯೇತ್ ।
ಹೃದಿ ಪದ್ಮಂ ಲಲಾಟೇ ಚ ಗದಾಂ ಶಿರಸಿ ಪಂಚ ಚ ।

ಮನೆಯ ಆಳು-ಕಾಳುಗಳಿಗೆ ಕೂಡ ಚಕ್ರಶಂಖಿಗಳಿಂದ ಚಿಹ್ನೆಯನ್ನು ಮಾಡುವುದು ಸೂಕ್ತವಾಗಿದೆ ಎಂದಿದ್ದಾರೆ ಶಾಸ್ತ್ರಕಾರರು. ಏಕೆಂದರೆ ಇದು ತಾನು ಹರಿಯ ಕೈಂಕರ್ಯಕ್ಕೆ ಆಣಿಯಾಗಿದ್ದೇನೆ ಎನ್ನುವುದರ ಸಂಕೇತ; ತಾನು ಹರಿಯ ಅನನ್ಯಭಕ್ತ ಎನ್ನುವುದಕ್ಕೆ ಸಾಕ್ಷಿ. ಇದು ಹರಿಭಕ್ತಿಯ ದೀಕ್ಷೆ. ನಾರಾಯಣಪಂಡಿತರು ಎಡ-ಬಲ ತೋಳುಗಳಲ್ಲಿ ಶಂಖಿ-ಚಕ್ರಗಳನ್ನು ಧರಿಸಬೇಕು ಎಂದಷ್ಟೇ ಹೇಳುತ್ತಾರೆ:-'**ಸುದರ್ಶನಂ ಚ ಶಂಖಿಂ ಚ ಮುದ್ರಯೇದ್ ಬಾಹುಮೂಲಯೋಃ**' [ಯೋಗದೀಪಿಕಾ.]

೨೦. ಇಲ್ಲಿ ..... ಹೀಗೆ ಗುರುತಿಸಿದ ಜಾಗದಲ್ಲಿ ಸಂವತ್ಸರ, ಅಯನ, ಋತು, ಮಾಸ, ಪಕ್ಷ ಮತ್ತು ಆಯಾ ದಿನದ ತಿಥಿ-ವಾರಗಳ ಹೆಸರನ್ನು ಸೇರಿಸಿಕೊಳ್ಳಬೇಕು. ಸಂಕಲ್ಪದಲ್ಲಿ ತಿಥಿ-ವಾರಗಳನ್ನು ನೆನೆಯುವ ಪದ್ಧತಿ ಅತ್ಯಂತ ಸಮೀಚೀನವಾಗಿದೆ. ನಾವು ಯಾವ ದೇಶ-ಕಾಲಗಳಲ್ಲಿ ಯಾವ ಪರಿಸ್ಥಿತಿಯಲ್ಲಿ ಏನನ್ನು ಮಾಡುತ್ತಿದ್ದೇವೆ ಎನ್ನುವುದರ ಅರಿವು ನಮಗಿರಬೇಕು- ಅಲ್ಲವೆ?

Rarest Archives

ರ್ಗತ[೨೧]ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ ಪ್ರಾತಃಸಂಧ್ಯಾಕರ್ಮ ಕರಿಷ್ಯೇ –ಎಂದು ನೀರನ್ನು ಅರ್ಘ್ಯಪಾತ್ರೆಗೆ ಬಿಡಬೇಕು.

ಮಾರ್ಜನ

ಮುಂದಿನ ಒಂಭತ್ತು ಮಂತ್ರಗಳಿಂದ ಒಂಭತ್ತು ಬಾರಿ ನಿರ್ಮಾಲ್ಯದ ತುದಿಯಿಂದ ಪ್ರೋಕ್ಷಿಸಿಕೊಳ್ಳಬೇಕು.

[೨೨]**ಓಂ ಆಪ್ಲೋ ಹಿ ಷ್ಠಾ ಮಯೋಭುವಃ । ತಾ ನ ಊರ್ಜೇ ದಧಾತನ । ಮಹೇ ರಣಾಯ ಚಕ್ಷಸೇ । ಯೋ ವಃ ಶಿವತಮೋ ರಸಃ । ತಸ್ಯ ಭಾಜಯತೇಹ ನಃ । ಉಶತೀರಿವ ಮಾತರಃ । ತಸ್ಮಾ ಅರಂ ಗಮಾಮ ವಃ । ಯಸ್ಯ ಕ್ಷಯಾಯ ಜಿನ್ವಥ । ಆಪ್ಲೋ ಜನಯಥಾ ಚ ನಃ ॥**

---

೨೧. ಪ್ರತಿಯೊಬ್ಬ ಮಾಧ್ವನೂ ಸಂಕಲ್ಪದ ಕಾಲದಲ್ಲಿ 'ಮಧ್ವಾಂತರ್ಗತ' ಎಂಬ ಮಾತನ್ನು ಹೇಳಬೇಕು. ನಾವು ಭಗವಂತನೆಡೆಗೆ ಸಾಗಲು ದಾರಿ ತೋರುವವರು ಗುರುಗಳು. ಆದರಿಂದ ಸಂಕಲ್ಪಕಾಲದಲ್ಲಿ ಗುರುಸ್ಮರಣೆ ಕೂಡಾ ಅತ್ಯಂತ ಮುಖ್ಯಕರ್ತವ್ಯ.

೨೨. 'ಓ ನೀರಿನಲ್ಲಿ ನೆಲಸಿರುವ ದೇವತೆಗಳೆ, ನೀವು ಸುಖದ ನೆಲೆಯಾಗಿರುವಿರಿ. ನೀವು ನಮ್ಮನ್ನು ಉನ್ನತಿಗೇರಿಸಬೇಕು; ಅತುಲವಾದ ಸುಖವನ್ನು, ಜ್ಞಾನವನ್ನು ಕರುಣಿಸಬೇಕು. ಮಕ್ಕಳನ್ನು ಮಮತೆಯಿಂದ ಕಾಣುವ ತಾಯಂದಿರಂತೆ ನೀವು ನಿಮ್ಮ ಮಂಗಲಕರವಾದ ರಸದಿಂದ ನಮ್ಮನ್ನು ಸಲಹಿರಿ. ನೀವು ಯಾರ ಮನೆಗೆ ಹರಿಯ ಬಯಸುವಿರೋ ಅಲ್ಲಿಗೆ ನಿಮ್ಮನ್ನು ಕೊಂಡೊಯ್ಯುವೆವು. ಓ ದೇವತೆಗಳಿರ, ನೀವು ನಮ್ಮನ್ನು ಉನ್ನತಿಗೇರಿಸಬೇಕು' –ಇದು ಮಾರ್ಜನಮಂತ್ರಗಳ ಅರ್ಥ. ಈ ಮಂತ್ರಗಳಿಂದ ಒಂಬತ್ತು ಬಾರಿ ಪ್ರೋಕ್ಷಿಸಿಕೊಳ್ಳುವುದರಿಂದ ಒಂಭತ್ತು ವಿಧದ ದೋಷಗಳು ನಾಶವಾಗುತ್ತವೆ ಎಂದು ಶಾಸ್ತ್ರದ ವಾಣಿಯಿದೆ:

ರಜಸ್ತಮೋಮೋಹಜಾತಾನ್ ಜಾಗ್ರತ್‌ಸ್ವಪ್ನಸುಷುಪ್ತಿಜಾನ್ ।
ವಾಙ್ಮನಃಕಾಯಜಾನ್ ದೋಷಾನ್ ನವೈತಾನ್ ನವಭಿರ್ದಹೇತ್ ॥

'ರಜಸ್ಸು–ತಮಸ್ಸು–ಅಜ್ಞಾನಗಳಿಂದ, ಎಚ್ಚರ–ಕನಸು–ನಿದ್ದೆಗಳಲ್ಲಿ, ಮಾತು–ಮನಸ್ಸು–ಮೈಗಳಿಂದ ಮಾಡಿದ ದೋಷಗಳ ಪ್ರಾಯಶ್ಚಿತ್ತವಾಗಿ ಈ ಒಂಭತ್ತು ಪ್ರೋಕ್ಷಣೆಗಳನ್ನು ಮಾಡಿಕೊಳ್ಳಬೇಕು.'

ಪ್ರಾಚೀನರು ಪಾವಿತ್ರ್ಯಕ್ಕೆ ಕೊಟ್ಟ ಪ್ರಾಧಾನ್ಯವನ್ನು ನಾವು ಈ ಮಂತ್ರಗಳಿಂದ ತಿಳಿದುಕೊಳ್ಳಬಹುದು. ಸ್ನಾನದಿಂದ ಶುಚಿಯಾಗಿ ಬಂದವನು ಮತ್ತೊಮ್ಮೆ ಮಾರ್ಜನದಿಂದ ಮಂತ್ರಸ್ನಾನವನ್ನು ಮಾಡಿ ಸಂಧ್ಯಾಕರ್ಮವನ್ನು ಆಚರಿಸಬೇಕು ಎಂದು ಹೇಳಿರುವುದಕ್ಕೆ ಈ ಪಾವಿತ್ರ್ಯದ ದೃಷ್ಟಿಯೇ ಕಾರಣ. ಇದನ್ನೆ ಆಚಾರ್ಯರು '**ಪ್ರೋಕ್ಷ್ಯಾಚಮ್ಯ ವಿಧಾನತಃ**' ಎಂದುದು. ಸೂರ್ಯಾರ್ಘ್ಯದ ಮುನ್ನ ಆಚಮನ ಮುಂದೆ ನಿರೂಪಿತವಾಗುತ್ತದೆ.

Rarest Archiver

ಜಲಪ್ರಾಶನ

ಅನಂತರ ಕೈಯಲ್ಲಿ ನೀರು ಹಿಡಿದುಕೊಂಡು–

ಓಂ ಸೂರ್ಯಶ್ಚ ಮಾ ಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ ಪಾಪೇಭ್ಯೋ ರಕ್ಷಂತಾಮ್ । ಯದ್ ರಾತ್ರ್ಯಾ ಪಾಪಮಕಾರ್ಷಂ ಮನಸಾ ವಾಚಾ ಹಸ್ತಾಭ್ಯಾಂ ಪದ್ಭ್ಯಾಮುದರೇಣ ಶಿಶ್ನಾ । ರಾತ್ರಿಸ್ತದವಲುಂಪತು ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತಯೋನೌ ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ ।[೨೩] ಎಂಬ ಮಂತ್ರದಿಂದ ಚಿತ್ತಶುದ್ಧ್ಯರ್ಥವಾಗಿ ಜಲಪ್ರಾಶನ ಮಾಡಿ ಎರಡು ಬಾರಿ ಆಚಮನ ಮಾಡಬೇಕು.

ಅರ್ಘ್ಯಪ್ರದಾನ

ಅನಂತರ ಸೂರ್ಯಾಭಿಮುಖನಾಗಿ ನಿಂತು[೨೪] ಕೆಳಗಿನ ಮಂತ್ರದಿಂದ ಮೂರು ಬಾರಿ ಅರ್ಘ್ಯವನ್ನೀಯಬೇಕು.

ಓಂ ಭೂರ್ಭುವಃ ಸ್ವಃ । ಓಂ ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್[೨೫]। [ಮೂರು ಬಾರಿ ಈ ಮಂತ್ರ ಹೇಳಿ ಮೂರು ಅರ್ಘ್ಯ].

---

೨೩. ರಾತ್ರಿ ಜಪದ ಕಾಲದಲ್ಲಿ ಈ ಮಂತ್ರವನ್ನು ಈ ರೀತಿ ಪಠಿಸಬೇಕು:

ಓಮ್ ಅಗ್ನಿಶ್ಚ ಮಾ ಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ ಪಾಪೇಭ್ಯೋ ರಕ್ಷಂತಾಮ್ । ಯದಹ್ನಾ ಪಾಪಮಕಾರ್ಷಂ ಮನಸಾ ವಾಚಾ ಹಸ್ತಾಭ್ಯಾಂ ಪದ್ಭ್ಯಾಮುದರೇಣ ಶಿಶ್ನಾ । ಅಹಸ್ತದವಲುಂಪತು ಯತ್ಕಿಂಚ ದುರಿತಂ ಮಯಿ । ಇದಮಹಂ ಮಾಮಮೃತಯೋನೌ ಸತ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ ।

'ನಾನು ರಾತ್ರಿ ಹೊತ್ತು ಕಾಯಿಕ-ವಾಚಿಕ-ಮಾನಸಿಕವಾಗಿ ಮಾಡಿದ ಎಲ್ಲ ಪಾಪಗಳನ್ನು ರಾತ್ರಿಯ ದೇವತೆಗಳು ಪರಿಹರಿಸಲಿ. ಮನ್ಯುದೇವತೆಗಳು ಪರಿಹರಿಸಲಿ. ಉದಿಸಿಬರುವ ಸೂರ್ಯನು ಅವುಗಳನ್ನು ತೊಡೆದುಕೊಂಡು ಬರಲಿ. ನಾವು ನಮ್ಮನ್ನು ಸೂರ್ಯ ನಾರಾಯಣನಿಗೆ ಅರ್ಪಿಸಿಕೊಂಡಿದ್ದೇವೆ' ಎಂದು ಬೆಳಗ್ಗೆ ಹೇಳುವ ಮಂತ್ರದ ಅರ್ಥ ವಾಗುತ್ತದೆ. 'ಹಗಲಿನ ಪಾಪಗಳನ್ನು ಹಗಲಿನ ದೇವತೆಗಳು ಪರಿಹರಿಸಲಿ. ಸಂಜೆ ಬೆಳಗುವ ಅಗ್ನಿದೇವನು ಪರಿಹರಿಸಲಿ. ಏಕೆಂದರೆ ನಾವು ಸತ್ಯಸ್ವರೂಪನಾದ ಭಗವಂತ ನಿಗೆ ನಮ್ಮನ್ನು ಅರ್ಪಿಸಿಕೊಂಡಿದ್ದೇವೆ' ಎಂದು ರಾತ್ರಿ ಹೇಳುವ ಮಂತ್ರದ ಅರ್ಥ.

೨೪. ಆದರಿಂದಲೆ ಪ್ರಾತಃಕಾಲದಲ್ಲಿ ಪೂರ್ವಾಭಿಮುಖವಾಗಿ ನಿಂತು ಅರ್ಘ್ಯ ನೀಡಿದರೆ ಸಾಯಂಕಾಲ ಪಶ್ಚಿಮಾಭಿಮುಖವಾಗಿ ನೀಡಬೇಕು. ಸಂಜೆ ಉತ್ತರಾಭಿಮುಖವಾಗಿ ನೀಡಬೇಕು ಎಂಬ ಪಕ್ಷವೂ ಉಂಟು.

೨೫. ಸೂರ್ಯಮಂಡಲದಲ್ಲಿ ಸನ್ನಿಹಿತನಾದ ನಾರಾಯಣನಿಗೆ ಈ ಅರ್ಘ್ಯ ಸಲ್ಲುತ್ತದೆ ಎಂಬ ಅನುಸಂಧಾನದಿಂದ ಸೂರ್ಯನಾರಾಯಣನನ್ನು ಸ್ಮರಿಸಿಕೊಂಡು ಈ ಅರ್ಘ್ಯವನ್ನೀಯ ಬೇಕು ಎಂದಿದ್ದಾರೆ ಆಚಾರ್ಯರು: **'ಗಾಯತ್ರ್ಯಾ ಚಾಂಜಲಿಂ ದತ್ತ್ವಾ ಧ್ಯಾತ್ವಾ ಸೂರ್ಯಗತಂ ಹರಿಮ್.'**

Rarest Archiver

ಪ್ರದಕ್ಷಿಣ

ಆಮೇಲೆ ಕೈಯಲ್ಲಿ ನೀರು ಹಿಡಿದುಕೊಂಡು **ಆಸಾವಾದಿತ್ಯೋ ಬ್ರಹ್ಮ ।** **ಓಮಾಪ್ತೋ ಜ್ಯೋತೀರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್**[೨೬] ಎಂದು ಶಿರಸ್ಸಿಗೆ ಪ್ರದಕ್ಷಿಣಾಕಾರವಾಗಿ ತಂದು ನೀರನ್ನು ಅರ್ಘ್ಯಪಾತ್ರೆಗೆ ಬೆಲ್ಲಿ ಎರಡು ಬಾರಿ ಆಚಮನ ಮಾಡಬೇಕು.[೨೭]

ತರ್ಪಣ

[೨೮] ಅನಂತರ ದ್ವಾದಶನಾಮಗಳಿಂದ ದ್ವಾದಶತರ್ಪಣಗಳನ್ನೀಯಬೇಕು:

ಶುಕ್ಲಪಕ್ಷದಲ್ಲಿ:	ಕೃಷ್ಣಪಕ್ಷದಲ್ಲಿ:
ಓಂ ಕೇಶವಂ ತರ್ಪಯಾಮಿ ।	ಓಂ ಸಂಕರ್ಷಣಂ ತರ್ಪಯಾಮಿ ।
ಓಂ ನಾರಾಯಣಂ ತರ್ಪಯಾಮಿ ।	ಓಂ ವಾಸುದೇವಂ —— ,, ——
ಓಂ ಮಾಧವಂ ತರ್ಪಯಾಮಿ ।	ಓಂ ಪ್ರದ್ಯುಮ್ನಂ —— ,, ——
ಓಂ ಗೋವಿಂದಂ ತರ್ಪಯಾಮಿ ।	ಓಂ ಅನಿರುದ್ಧಂ —— ,, ——
ಓಂ ವಿಷ್ಣುಂ ತರ್ಪಯಾಮಿ ।	ಓಂ ಪುರುಷೋತ್ತಮಂ —— ,, ——
ಓಂ ಮಧುಸೂದನಂ ತರ್ಪಯಾಮಿ ।	ಓಂ ಅಧೋಕ್ಷಜಂ —— ,, ——
ಓಂ ತ್ರಿವಿಕ್ರಮಂ ತರ್ಪಯಾಮಿ ।	ಓಂ ನಾರಸಿಂಹಂ —— ,, ——
ಓಂ ವಾಮನಂ ತರ್ಪಯಾಮಿ ।	ಓಂ ಅಚ್ಯುತಂ —— ,, ——
ಓಂ ಶ್ರೀಧರಂ ತರ್ಪಯಾಮಿ ।	ಓಂ ಜನಾರ್ದನಂ —— ,, ——
ಓಂ ಹೃಷೀಕೇಶಂ ತರ್ಪಯಾಮಿ ।	ಓಂ ಉಪೇಂದ್ರಂ —— ,, ——
ಓಂ ಪದ್ಮನಾಭಂ ತರ್ಪಯಾಮಿ ।	ಓಂ ಹರಿಂ —— ,, ——
ಓಂ ದಾಮೋದರಂ ತರ್ಪಯಾಮಿ ।	ಓಂ ಕೃಷ್ಣಂ —— ,, ——

ಮತ್ತೆ ಪುನಃ ಎರಡು ಬಾರಿ ಆಚಮನ ಮಾಡಬೇಕು.

---

೨೬. 'ನನ್ನಲ್ಲಿರುವ ಭಗವಂತನೆ ಆ ಸೂರ್ಯನಲ್ಲು ಇದ್ದಾನೆ. ಅಮೃತಸ್ವರೂಪನಾದ ಅವನೆ ಜಗತ್ತಿನ ಎಲ್ಲೆಡೆಯು ತುಂಬಿದ್ದಾನೆ' ಎಂದು ಈ ಮಂತ್ರದ ಅರ್ಥ.

೨೭. ಇದನ್ನೆ ಆಚಾರ್ಯರು **'ಮಂತ್ರತಃ ಪರಿವೃತ್ಯಾಥ ಸಮಾಚಮ್ಯ'** ಎಂದುದು.

೨೮. ಇಲ್ಲಿ ಆಚಾರ್ಯರು **'ಸುರಾದಿಕಾನ್ ತರ್ಪಯಿತ್ವಾ'** ಎಂದು ಬರೆದಿದ್ದಾರೆ. ಇದು ಬ್ರಹ್ಮಯಜ್ಞದ ಕುರಿತು ಹೇಳಿದ ಮಾತು. ಅದು ಮಾಧ್ಯಾಹ್ನಿಕ ಕರ್ಮವಾದುದರಿಂದ ಪ್ರಾತಃಕಾಲದ ಕರ್ಮದಲ್ಲಿ ಸೇರಿಸಿಕೊಳ್ಳಬಾರದು ಎಂದು ವ್ಯಾಖ್ಯಾನಕಾರರು ಅಭಿಪ್ರಾಯಪಡುತ್ತಾರೆ. ಆದರೆ –ಕೇಶವಾದಿ ರೂಪಗಳನ್ನು ಕೂಡ ಆಚಾರ್ಯರು ಈ ಮಾತಿನಲ್ಲಿ ಸೂಚ್ಯವಾಗಿ ಹೇಳಿದ್ದಾರೆ ಎಂದು ಅರ್ಥಮಾಡಬಹುದೇನೋ! ಸುರರಿಗೆ ಕಾರಣಭೂತಗಳಾದ ಕೇಶವಾದಿ ರೂಪಗಳು ಸುರಾದಿಗಳೇ ಅಲ್ಲವೇ? ಸೂರ್ಯಾದಿ ನವಗ್ರಹರಿಗೆ ಕೂಡ ಈ ಸಂದರ್ಭದಲ್ಲಿ ತರ್ಪಣಕೊಡುವ ಸಂಪ್ರದಾಯ ಉಂಟು. ಅದನ್ನೂ **'ಸುರಾದಿಕಾನ್'** ಎಂದು ಆಚಾರ್ಯರು ಸೂಚಿಸಿರಬಹುದು.

Rarest Archiver

ಪಾಪಪುರುಷನಿರಸನ

ನಾವು ಮಾಡಿರುವ ಪಾತಕಗಳು ಸಂಚಿತವಾಗಿ ಹೊಟ್ಟೆಯ ಎಡಪಕ್ಕದಲ್ಲಿ ನೆಲಸಿರುತ್ತವೆ ಎಂದು ಚಿಂತಿಸಬೇಕು. ಏಕೆಂದರೆ ಯಾವುದೇ ಮಂತ್ರಜಪಕ್ಕೆ ತೊಡಗುವ ಮುನ್ನ ನಮ್ಮ ದೇಹದಲ್ಲಿ ಸಂಚಿತವಾಗಿರಬಹುದಾದ ಎಲ್ಲ ಬಗೆಯ ಪಾತಕಗಳನ್ನು ಅನುಸಂಧಾನಪೂರ್ವಕವಾಗಿ ನಿಸ್ಸಾರಣಗೊಳಿಸಿ ಮೈ-ಮನಗಳ ಶುದ್ಧಿಯನ್ನು ಸಂಪಾದಿಸಿಕೊಳ್ಳುವುದು ಅವಶ್ಯ.[೨೯]

ಆಮೇಲೆ ನಾಭಿಯಲ್ಲಿ ಕೈಯನ್ನಿಟ್ಟು– **ವಾಯುಮಂಡಲಷಟ್ಕೋಣಚಕ್ರ-ಸ್ಥಿತೋ ನೀಲವರ್ಣೋ ಭಗವಾನ್ ಪ್ರದ್ಯುಮ್ನೋ ಮದ್‌ದೇಹಸ್ಥಂ ಪಾಪ-ಪುರುಷಂ ವಾಯುನಾ ಶೋಷಯತು** ಎಂದು, **ಯಂ ಯಂ ಯಂ** ಎಂದು ಮೂರು ಬಾರಿ ಜಪಿಸಬೇಕು. ಹೃದಯವನ್ನು ಮುಟ್ಟಿಕೊಂಡು– **ಅಗ್ನಿಮಂಡಲ-ತ್ರಿಕೋಣಚಕ್ರಸ್ಥಿತೋ ರಕ್ತವರ್ಣೋ ಭಗವಾನನಿರುದ್ಧೋ ಮದ್‌ದೇಹಸ್ಥಂ ಪಾಪಪುರುಷಂ ವಹ್ನಿನಾ ನಿರ್ದಹತು** ಎಂದು, **ರಂ ರಂ** ಎಂದು ಆರು ಬಾರಿ ಜಪಿಸಬೇಕು. ಶಿರಸ್ಸಿನಲ್ಲಿ ಕೈಯಿಟ್ಟು– **ವರ್ತುಲಮಂಡಲಮಧ್ಯಸ್ಥಃ ಶ್ವೇತವರ್ಣೋ ಭಗವಾನ್ ವಾಸುದೇವೋ ಮದ್‌ದೇಹಮಮೃತವೃಷ್ಟ್ಯಾಪ್ಲಾವಯತು** ಎಂದು **ವಂ ವಂ** ಎಂದು ಹನ್ನೆರಡು ಬಾರಿ ಜಪಿಸಬೇಕು.[೩೦]

---

೨೯. ಪಾಪಪುರುಷನ ಆಕೃತಿ ಕಲ್ಪನೆಯೂ ಮುಂದಿನ ಪ್ರಮಾಣದಲ್ಲಿ ಬಂದಿದೆ:

ಬ್ರಹ್ಮಹತ್ಯಾಶಿರಸ್ಕಂ ಚ ಸ್ವರ್ಣಸ್ತೇಯಭುಜದ್ವಯಮ್ ।
ಸುರಾಪಾನಹೃದಾ ಯುಕ್ತಂ ಗುರುತಲ್ಪಕಟಿದ್ವಯಮ್ ॥
ತತ್‌ಸಂಯೋಗಪದದ್ವಂದ್ವಮಂಗಪ್ರತ್ಯಂಗಪಾತಕಮ್ ।
ಉಪಪಾತಕರೋಮಾಣಂ ರಕ್ತಶ್ಮಶ್ರುವಿಲೋಚನಮ್ ।
ಖಡ್ಗಚರ್ಮಧರಂ ಕೃಷ್ಣಂ ಕುರ್ಯಾ ವಾಮೇ ವಿಚಿಂತಯೇತ್ ॥

ಬ್ರಹ್ಮಹತ್ಯೆಯೆ ಶಿರಸ್ಸು; ಹೊನ್ನಿನ ಕಳವು ತೋಳುಗಳು; ಮದ್ಯಪಾನ ಹೃದಯ; ಗುರುಪತ್ನೀಗಮನ ಅವನ ಕಟಿ; ಪಾತಕಿಗಳ ಸಹವಾಸರೂಪವಾದ ಪಾತಕವೇ ಅವನ ಕಾಲುಗಳು; ಉಳಿದೆಲ್ಲ ಪಾತಕಗಳೂ ಅವನ ಅಂಗಾಂಗಗಳು. ಇಂತಹ ಪಾಪಪುರುಷನನ್ನು ಹೊಟ್ಟೆಯ ಎಡಬದಿಯಲ್ಲಿ ಚಿಂತಿಸಬೇಕು.

೩೦. ನಾಭಿಮೂಲದಲ್ಲಿ ಷಟ್ಕೋಣಮೂಲಾಧಾರದಲ್ಲಿರುವ ಪ್ರದ್ಯುಮ್ನನು ಪಾಪಪುರುಷನನ್ನು ಶುಷ್ಕಗೊಳಿಸುತ್ತಾನೆ. ಹೃದಯದ ತ್ರಿಕೋಣಮಂಡಲದಲ್ಲಿರುವ ಅನಿರುದ್ಧನು ಅಗ್ನಿಯಿಂದ ಅವನನ್ನು ಸುಟ್ಟುಬಿಡುತ್ತಾನೆ. [ಸಂಕರ್ಷಣನು ಅವನನ್ನು ದೇಹದಿಂದ ನಿಸ್ಸಾರಣಗೊಳಿಸುತ್ತಾನೆ.] ಶಿರಸ್ಸಿನಲ್ಲಿ ವರ್ತುಲಮಂಡಲದಲ್ಲಿ ಕುಳಿತಿರುವ ವಾಸುದೇವನು ಬ್ರಹ್ಮನಾಡಿಯಿಂದ ಅಮೃತವನ್ನು ಸುರಿಸಿ ದೇಹವನ್ನು ಪವಿತ್ರಗೊಳಿಸುತ್ತಾನೆ ಎಂದು ಈ ಮಂತ್ರಗಳ ಅನುಸಂಧಾನದ ತಾತ್ಪರ್ಯ. ಅದರಂತೆ ಶೋಷಣೆಯ ಸಂಕೇತವಾಗಿ **ಯಂ** ಎಂಬ ವಾಯುಬೀಜವನ್ನೂ ದಹನದ ಸಂಕೇತವಾಗಿ **ರಂ** ಎಂಬ ಅಗ್ನಿಬೀಜವನ್ನೂ ಅಮೃತಪ್ಲಾವನೆಗೆ ಸಂಕೇತವಾಗಿ **ವಂ** ಎಂಬ ವರುಣಬೀಜವನ್ನೂ ಜಪಿಸುತ್ತಾರೆ.

Rarest Archiver

ಗಾಯತ್ರೀಜಪ

ಗಾಯತ್ರೀಜಪದ ಅಂಗವಾಗಿ ಮೊದಲು ಮೂರು ಬಾರಿ ಪ್ರಾಣಾಯಾಮ ಮಾಡಬೇಕು:೩೧

ಓಂ ಭೂರ್ಭುವಃ ಸ್ವಃ । ಓಂ ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ಎಂದು ಮೂರು ಬಾರಿ ಜಪಿಸಿ ಕೈಯಲ್ಲಿ ನೀರು ಹಿಡಿದುಕೊಂಡು– **ಓಮ್ ಆಪೋ ಜ್ಯೋತೀ-ರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್** ಎಂದು ತಲೆಗೆ ಸುತ್ತು ವರಿದು ಆ ನೀರನ್ನು ಅರ್ಘ್ಯಪಾತ್ರೆಗೆ ಬಿಡಬೇಕು. ಅನಂತರ ಮಂತ್ರದ ಋಷಿ–ಛಂದಸ್ಸು–ದೇವತೆಗಳನ್ನು ಸ್ಮರಿಸಬೇಕು.೩೨

ಅಸ್ಯ ಶ್ರೀಗಾಯತ್ರೀಮಂತ್ರಸ್ಯ ವಿಶ್ವಾಮಿತ್ರ ಋಷಿಃ [ತಲೆಯನ್ನು ಸ್ಪರ್ಶಿಸ ಬೇಕು], **ದೈವೀ ಗಾಯತ್ರೀ ಛಂದಃ** [ಮುಖ], **ಸವಿತೃನಾಮಕೋ ನಾರಾ-ಯಣೋ ದೇವತಾ** [ಹೃದಯ], **ಶ್ರೀಲಕ್ಷ್ಮೀನಾರಾಯಣಪ್ರಸಾದಸಿದ್ಧ್ಯರ್ಥೇ ಜಪೇ ವಿನಿಯೋಗಃ ।**

ಅನಂತರ ಕರನ್ಯಾಸ–ಅಂಗನ್ಯಾಸಗಳನ್ನು ಮಾಡಬೇಕು:

ಕರನ್ಯಾಸ: **ಓಂ ತತ್ಸವಿತುಃ ಅಂಗುಷ್ಠಾಭ್ಯಾಂ ನಮಃ** [ಎರಡೂ ತರ್ಜನಿಗಳಿಂದ ಎರಡೂ ಕೈಯ ಅಂಗುಷ್ಠವನ್ನು ಬುಡದಿಂದ ಮೇಲಿನ ತನಕ ಸ್ಪರ್ಶಿಸಬೇಕು]
ಓಂ ವರೇಣ್ಯಂ ತರ್ಜನೀಭ್ಯಾಂ ನಮಃ [ಅಂಗುಷ್ಠದಿಂದ ತರ್ಜನಿಗಳನ್ನು]
ಓಂ ಭರ್ಗೋ ದೇವಸ್ಯ ಮಧ್ಯಮಾಭ್ಯಾಂ ನಮಃ [ನಡುಬೆರಳುಗಳನ್ನು]
ಓಂ ಧೀಮಹಿ ಅನಾಮಿಕಾಭ್ಯಾಂ ನಮಃ [ಅನಾಮಿಕೆಗಳನ್ನು]

ಜಪಕರ್ಮದ ಪ್ರಾರಂಭದಲ್ಲಿ ಈ ಪಾಪಪುರುಷನ ಶೋಷಣ–ದಹನ–ಪ್ಲುತಿಗಳನ್ನು ಮಾಡಬೇಕೆಂದು ಆಚಾರ್ಯರು ತಂತ್ರಸಾರದಲ್ಲಿ ನುಡಿದಿದ್ದಾರೆ:

ಆದಾವೇವ ಜಪೇ ಕುರ್ಯಾಚ್ಛೋಷಣಂ ದಹನಂ ಪ್ಲುತಿಮ್ ।

೩೧. ತುದಿಬೆರಳುಗಳಿಂದ ಮೂಗನ್ನು ಹಿಡಿದು, ಬಲ ಹೊರಳೆಯಿಂದ ಶ್ವಾಸವನ್ನು ಹೊರ ಬಿಟ್ಟು, ಎಡ ಹೊರಳೆಯಿಂದ ಶ್ವಾಸವನ್ನೆಳೆದುಕೊಂಡು ಎರಡು ರಂಧ್ರಗಳನ್ನೂ ಬಿಗಿ ಹಿಡಿದು ಶ್ವಾಸನಿರೋಧ ಮಾಡಿಕೊಂಡು ಮೇಲಣ ಮಂತ್ರಗಳನ್ನು ಮೂರು ಸಾರಿ ಜಪಿಸಬೇಕು. ಶ್ವಾಸನಿರೋಧಮಾಡಿ ಪರತತ್ತ್ವವನ್ನು ಚಿಂತಿಸುವುದು ಮನಸ್ಸಿಗೂ ಆರೋಗ್ಯ; ದೇಹಕ್ಕೂ ಆರೋಗ್ಯ.

೩೨. ಮಂತ್ರದ್ರಷ್ಟಾರನಾದ ಋಷಿಯನ್ನು ತಲೆಮಣೆದು ಗೌರವಿಸುವ ಸಂಕೇತವಾಗಿ ಋಷಿಯನ್ನು ಸ್ಮರಿಸುವಾಗ ತಲೆಯನ್ನು ಮುಟ್ಟುವುದು. ಛಂದೋಭಿಮಾನಿ ದೇವತೆಗಳು ನನ್ನ ಬಾಯಿಂದ ಮಂತ್ರವನ್ನು ಸ್ವಚ್ಛವಾಗಿ ನುಡಿಸಲಿ ಎಂದು ಛಂದಸ್ಸನ್ನು ಸ್ಮರಿಸುವಾಗ ಬಾಯಿ ಮುಟ್ಟುವುದು. ಭಗವಂತ ಧ್ಯಾನದಲ್ಲಿ ಹೃದಯಗೋಚರನಾಗಲಿ ಎಂದು ಹೃದಯದಲ್ಲಿ ಅಂಗೈಯಿಟ್ಟು ದೇವತಾಸ್ಮರಣೆ.

Rarest Archiver

ಓಂ ಧಿಯೋ ಯೋ ನಃನಿಷ್ಕಿಕಾಭ್ಯಾಂ ನಮಃ [ಕಿರುಬೆರಳುಗಳನ್ನು]

ಓಂ ಪ್ರಚೋದಯಾತ್ ಕರತಲಕರಪೃಷ್ಠಾಭ್ಯಾಂ ನಮಃ [ಎಲ್ಲಾ ಬೆರಳುಗಳಿಂದ ಆಂಗೈ ಹಿಂಗೈಗಳನ್ನು ಸ್ಪರ್ಶಿಸಬೇಕು]

ಅಂಗನ್ಯಾಸ: **ಓಂ ತತ್ಸವಿತುಃ ಹೃದಯಾಯ ನಮಃ** [ಬಲಗೈಯಿಂದ ಎದೆಯನ್ನು ಸ್ಪರ್ಶಿಸಬೇಕು]

ಓಂ ವರೇಣ್ಯಂ ಶಿರಸೇ ಸ್ವಾಹಾ [ತಲೆಯನ್ನು]

ಓಂ ಭರ್ಗೋ ದೇವಸ್ಯ ಶಿಖಾಯೈ ವಷಟ್ [ಶಿಖೆಯನ್ನು]

ಓಂ ಧೀಮಹಿ ಕವಚಾಯ ಹುಮ್ [ಎದೆಯ ಮೇಲೆ ಸ್ವಸ್ತಿಕಾಕಾರವಾಗಿ ಕೈಗಳನ್ನು ಹಿಡಿಯಬೇಕು]

ಓಂ ಧಿಯೋ ಯೋ ನಃ ನೇತ್ರಾಭ್ಯಾಂ ವೌಷಟ್ [ಕಣ್ಣುಗಳನ್ನು]

ಓಂ ಪ್ರಚೋದಯಾತ್ ಅಸ್ತ್ರಾಯ ಫಟ್ [ಎಂದು ಚಪ್ಪಾಳೆ ತಟ್ಟಿ ದಿಗ್ಬಂಧ ಮಾಡಬೇಕು].

ಧ್ಯಾನಿಸಬೇಕಾದ ರೂಪ ಈ ತೆರನಾಗಿದೆ: ಶ್ರೀನಾರಾಯಣನು ಸೂರ್ಯ ಮಂಡಲದಲ್ಲಿ ಪದ್ಮಾಸನಾಸೀನನಾಗಿದ್ದಾನೆ. ತೋಳಿನಲ್ಲಿ ವಂಕಿ, ಕಿವಿಯಲ್ಲಿ ಮಕರ ಕುಂಡಲ, ಶಿರಸ್ಸಿನಲ್ಲಿ ಕಿರೀಟ, ಕತ್ತಿನಲ್ಲಿ ಮುತ್ತಿನ ಹಾರಗಳು, ಬಂಗಾರದ ಮೈಬಣ್ಣ, ಎರಡು ಕೈಗಳನ್ನು ತೊಡೆಯ ಮೇಲಿರಿಸಿಕೊಂಡು ಉಳಿದೆರಡು ಕೈಗಳಿಂದ ಶಂಖ ಚಕ್ರಗಳನ್ನು ಧರಿಸಿದ್ದಾನೆ. ಇಂಥ ನಾರಾಯಣಮೂರ್ತಿಯನ್ನು[೩೩] ಧ್ಯಾನಿಸಬೇಕು; ಮನದಲ್ಲಿ ಕಲ್ಪಿಸಿಕೊಂಡು ಚಿಂತಿಸಬೇಕು. ಅನಂತರ –**ಸವಿತೃನಾಮಕನಾರಾಯಣ–ಪ್ರೇರಣಯಾ ನಾರಾಯಣಪ್ರೀತ್ಯರ್ಥಂ ಯಥಾಶಕ್ತಿ ಗಾಯತ್ರೀಮಂತ್ರಜಪಂ ಕರಿಷ್ಯೇ** ಎಂದು ಸಂಕಲ್ಪಿಸಿ ಉಕ್ತಲಕ್ಷಣನಾದ ನಾರಾಯಣನನ್ನೆ ನೆನೆಯುತ್ತ ಗಾಯತ್ರೀಮಂತ್ರವನ್ನು ಮೌನವಾಗಿ ಕಮ್ಮಿಯೆಂದರೆ ಹತ್ತು ಬಾರಿ[೩೪] ಜಪಿಸಬೇಕು.

---

೩೩. ಈ ಮಾತನ್ನು ಆಚಾರ್ಯರು ಸ್ಪಷ್ಟಪಡಿಸಿದ್ದಾರೆ:

ಅರ್ಕಮಂಡಲಗಂ ವಿಷ್ಣುಂ ಧ್ಯಾತ್ವೈವ ತ್ರಿಪದೀಂ ಜಪೇತ್ ।

ನಾರಾಯಣನ ಈ ರೂಪವನ್ನು ಆಚಾರ್ಯರು ನರಸಿಂಹಪುರಾಣದ ವಚನದಿಂದ ಹೀಗೆ ವಿವರಿಸಿದ್ದಾರೆ:

ಧ್ಯೇಯಃ ಸದಾ ಸವಿತೃಮಂಡಲಮಧ್ಯವರ್ತೀ
ನಾರಾಯಣಃ ಸರಸಿಜಾಸನಸನ್ನಿವಿಷ್ಟಃ ।
ಕೇಯೂರವಾನ್ ಮಕರಕುಂಡಲವಾನ್ ಕಿರೀಟೀ
ಹಾರೀ ಹಿರಣ್ಮಯವಪುರ್ಧೃತಶಂಖಚಕ್ರಃ ॥

೩೪. ಈ ಗಾಯತ್ರಿಯ ಜಪ ಸಾವಿರ ಬಾರಿಯಾದರೆ ಉತ್ತಮ. ನೂರು ಬಾರಿಯಾದರೆ ಮಧ್ಯಮ. ಕಮ್ಮಿಯೆಂದರೆ ಹತ್ತು ಬಾರಿಯಾದರೂ ಮಾಡಬೇಕು ಎಂದು ಆಚಾರ್ಯರ ಉಕ್ತಿಯಿದೆ:

Rarest Archiver

ಓಂ ಭೂರ್ಭುವಃ ಸ್ವಃ । ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ ॥[೩೫]

ಸವಿತಾರಂ ತರ್ಪಯಾಮಿ ಎಂದು ಹತ್ತು ಗಾಯತ್ರಿಗೊಂದರಂತೆ ತರ್ಪಣ ನೀಡಬೇಕು.

ಅನಂತರ ಭಗವತ್ಸ್ವರೂಪವನ್ನು ನೆನೆದುಕೊಂಡು ಅಂಗನ್ಯಾಸ–ಕರನ್ಯಾಸ–ಋಷಿಚ್ಛಂದಸ್ಸು–ಪ್ರಾಣಾಯಾಮಗಳನ್ನು ಮಾಡಿ ಕೃಷ್ಣಾರ್ಪಣ ಮಾಡಬೇಕು:

ಆನೇನ ಗಾಯತ್ರಿಜಪಕರಣೇನ ಸವಿತೃನಾಮಕಃ ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಮ್ । ಶ್ರೀಕೃಷ್ಣಾರ್ಪಣಮಸ್ತು ।

ಅಷ್ಟಾಕ್ಷರಮಂತ್ರಜಪ

ಓಂ ಓಂ ನಮೋ ನಾರಾಯಣಾಯ ಓಮ್ ಎಂದು ಹನ್ನೆರಡು ಬಾರಿ ಜಪಿಸಿ ಪ್ರಾಣಾಯಾಮ ಮಾಡಬೇಕು.

ಋಷಿ–ಛಂದಸ್ಸು–ದೇವತೆ:

ಅಸ್ಯ ಶ್ರೀನಾರಾಯಣಾಷ್ಟಾಕ್ಷರಮಂತ್ರಸ್ಯ ಅಂತರ್ಯಾಮೀ ಋಷಿಃ ।
[ಎಂದು ತಲೆಯನ್ನು ಸ್ಪರ್ಶಿಸಬೇಕು]
ದೈವೀ ಗಾಯತ್ರೀ ಛಂದಃ । [ಮುಖ]
ಪರಮಾತ್ಮಾ ದೇವತಾ । [ಹೃದಯ]

ಅಂಗನ್ಯಾಸ:

ಓಂ ಕೃದ್ಭೋಲ್ಕಾಯ ಹೃದಯಾಯ ನಮಃ [ಎದೆಯನ್ನು ಸ್ಪರ್ಶಿಸಬೇಕು]

ಸಹಸ್ರಪರಮಾಂ ದೇವೀಂ ಶತಮಧ್ಯಾಂ ದಶಾವರಾಮ್ ।

ತಟಾಕಾದಿಗಳಲ್ಲಿ ಜಪಿಸುವವರಿಗೆ ಇನ್ನೊಂದು ವಿಶೇಷವಿದೆ. ಸೂರ್ಯೋದಯದ ವರೆಗೆ ನಿಂತಿದ್ದು ಅನಂತರ ಬೇಕಿದ್ದರೆ ಕುಳಿತುಕೊಳ್ಳಬಹುದು:

ಆಸೂರ್ಯದರ್ಶನಾತ್ ತಿಷ್ಠೇತ್ ತತಸ್ತೂಪವಿಶೇತ ವಾ ।

ಪ್ರಾತಃಕಾಲದ ಜಪವನ್ನು ನಕ್ಷತ್ರಗಳು ಕಾಣಿಸಿಕೊಳ್ಳುತ್ತಿರುವಾಗಲೇ ತೊಡಗಬೇಕು. ಹಾಗೆಯೇ ಸಂಜೆ ಸೂರ್ಯಾಸ್ತದ ಮುನ್ನವೇ ಜಪಿಸಬೇಕು ಮತ್ತು ಸಾಯಂಕಾಲದ ಜಪವನ್ನು ಕುಳಿತೇ ಮಾಡಬೇಕು ಎಂದೂ ಆಚಾರ್ಯರು ನಿರೂಪಿಸಿದ್ದಾರೆ:

ಪೂರ್ವಾಂ ಸಂಧ್ಯಾಂ ಸನಕ್ಷತ್ರಾಮುತ್ತರಾಂ ಸದಿವಾಕರಾಮ್ ।
ಉತ್ತರಾಮುಪವಿಶ್ಯೈವ ವಾಗ್ಯತಃ ಸರ್ವದಾ ಜಪೇತ್ ॥

ನಮ್ಮ ಬುದ್ಧಿಶಕ್ತಿಯನ್ನು ಪ್ರೇರಿಸುವ ಜಗತ್‌ಸ್ರಷ್ಟಾರನಾದ ನಾರಾಯಣನ ಸರ್ವಭಜನೀಯವಾದ ತೇಜಸ್ಸನ್ನು ಧ್ಯಾನಿಸುವೆವು ಎಂದು ಈ ಗಾಯತ್ರೀಮಂತ್ರದ ತಾತ್ಪರ್ಯವಾಗುತ್ತದೆ.

೩೫. ಈ ಮಂತ್ರವನ್ನು ಸ್ವರಸಹಿತವಾಗಿ ಜಪಿಸುವುದು ಉತ್ತಮ. ಇದನ್ನು ಬಲ್ಲವರಿಂದ ಕೇಳಿ ತಿಳಿದುಕೊಳ್ಳಬೇಕು.

Rarest Archiver

ಓಂ ಮಹೋಲ್ಕಾಯ ಶಿರಸೇ ಸ್ವಾಹಾ [ತಲೆ]

ಓಂ ವೀರೋಲ್ಕಾಯ ಶಿಖಾಯೈ ವಷಟ್ [ಶಿಖೆ]

ಓಂ ದ್ಯೂಲ್ಕಾಯ ಕವಚಾಯ ಹುಂ [ಎದೆಯ ಮೇಲೆ ಸ್ವಸ್ತಿಕಾಕಾರವಾಗಿ ಕೈಗಳನ್ನು ಹಿಡಿಯಬೇಕು]

ಓಂ ಸಹಸ್ರೋಲ್ಕಾಯ ಅಸ್ತ್ರಾಯ ಫಟ್ [ಚಪ್ಪಾಳೆ ತಟ್ಟಬೇಕು]

ಧ್ಯೇಯಮೂರ್ತಿ:[೩೬] ಉದಿಸುವ ಸೂರ್ಯನಂತೆ ಬೆಳಗುವ ಬಣ್ಣ. ಜ್ಞಾನಾನಂದ ಮಯವಾದ ದೇಹ. ಕೈಗಳಲ್ಲಿ ಚಕ್ರ–ಶಂಖ–ಗದಾ–ಪದ್ಮಗಳು. ಶ್ರೀ–ಭೂದೇವಿಯ ರಿಂದ ಆಲಿಂಗಿತವಾದ ಮೂರ್ತಿ. ಬ್ರಹ್ಮಾದಿಗಳು ಸುತ್ತ ನಿಂತು ಸೇವಿಸುತ್ತಿದ್ದಾರೆ. ಸುತ್ತಮುತ್ತ ಅಕ್ಷರಪ್ರತಿಪಾದ್ಯಗಳಾದ ಎಂಟು ಭಗವನ್ಮೂರ್ತಿಗಳು ಮೂಲ ರೂಪದಂತೆಯೆ ಬೆಳಗುತ್ತಿವೆ. ಚಕ್ರ–ಶಂಖಿಗಳನ್ನೂ ವರಾಭಯಗಳನ್ನೂ ಧರಿಸಿವೆ. ಇಂಥ ನಾರಾಯಣಮೂರ್ತಿಯನ್ನು ಧ್ಯಾನಿಸುತ್ತ–

ಶ್ರೀಮನ್ನಾರಾಯಣಪ್ರೇರಣಯಾ ಶ್ರೀನಾರಾಯಣಪ್ರೀತ್ಯರ್ಥಂ ಶ್ರೀಮದಷ್ಟಾಕ್ಷರಮಂತ್ರಜಪಂ ಕರಿಷ್ಯೇ ಎಂದು ಸಂಕಲ್ಪಿಸಿ ಗಾಯತ್ರಿಯನ್ನು ಜಪಿಸಿದ ಸಂಖ್ಯೆಗಿಂತ ಮೂರುಪಟ್ಟು[೩೭] ಅಷ್ಟಾಕ್ಷರವನ್ನು ಜಪಿಸಬೇಕು.

।। ಓಂ ಓಂ ನಮೋ ನಾರಾಯಣಾಯ ಓಮ್ ।।

ಹತ್ತು ಮಂತ್ರಗಳಿಗೊಂದರಂತೆ **ಓಂ ಓಂ ನಮೋ ನಾರಾಯಣಾಯ ಓಂ ನಾರಾಯಣಂ ತರ್ಪಯಾಮಿ** ಎಂದು ತರ್ಪಣವನ್ನೀಯಬೇಕು. ಅನಂತರ ಹಿಂದಿನಂತೆಯೆ ಭಗವತ್ಸ್ವರೂಪವನ್ನು ಧ್ಯಾನಿಸಿ ಅಂಗನ್ಯಾಸ ಮಾಡಿ ಋಷಿಛಂದಸ್ಸು ದೇವತೆಗಳನ್ನು ನೆನೆದು ಪ್ರಾಣಾಯಾಮಗೈದು ಕೃಷ್ಣಾರ್ಪಣ ಮಾಡಬೇಕು: **ಅನೇನ ಅಷ್ಟಾಕ್ಷರಜಪಕರಣೇನ ಭಗವಾನ್ ನಾರಾಯಣಃ ಪ್ರೀಯತಾಮ್ । ಶ್ರೀಕೃಷ್ಣಾರ್ಪಣಮಸ್ತು ।**

---

೩೬. ಧ್ಯೇಯಮೂರ್ತಿಯ ಲಕ್ಷಣಗಳನ್ನು ತಂತ್ರಸಾರದ ಪದ್ಯಗಳಲ್ಲಿ ಕಾಣಬಹುದು:

ಉದ್ಯದ್ಭಾಸ್ವತ್ಸಮಾಭಾಸಶ್ಚಿದಾನಂದೈಕದೇಹವಾನ್ ।
ಚಕ್ರಶಂಖಿಗದಾಪದ್ಮಧರೋ ಧ್ಯೇಯೋಽಹಮೀಶ್ವರಃ ॥
ಲಕ್ಷ್ಮೀಧರಾಭ್ಯಾಮಾಶ್ಲಿಷ್ಟಃ ಸ್ವಮೂರ್ತಿಗಣಮಧ್ಯಗಃ ।
ಬ್ರಹ್ಮವಾಯುಶಿವಾಹೀಶವಿಪೈಃ ಶಕ್ರಾದಿಕೈರಪಿ ॥
ಸೇವ್ಯಮಾನೋಽಧಿಕಂ ಭಕ್ತ್ಯಾ ನಿತ್ಯನಿಃಶೇಷಶಕ್ತಿಮಾನ್ ।
ಮೂರ್ತಯೋಽಷ್ಟಾವಪಿ ಧ್ಯೇಯಾಶ್ಚಕ್ರಶಂಖವರಾಭಯೈಃ ।
ಯುಕ್ತಾಃ ಪ್ರದೀಪವರ್ಣಾಶ್ಚ ಸರ್ವಾಭರಣಭೂಷಿತಾಃ ॥

೩೭. ಈ ಮಾತು ಸದಾಚಾರಸ್ಮೃತಿಯಲ್ಲಿ ಬಂದಿದೆ:

ಗಾಯತ್ರ್ಯಾಸ್ತ್ರಿಗುಣಂ ವಿಷ್ಣುಂ ಧ್ಯಾಯನ್ನಷ್ಟಾಕ್ಷರಂ ಜಪೇತ್ ।

Rarest Archiver

ದಿಗುಪಸ್ಥಾನ

ಅನಂತರ ದಿಗಭಿಮಾನಿದೇವತೆಗಳನ್ನು ಈ ಮಂತ್ರಗಳಿಂದ ಅಭಿವಂದಿಸಬೇಕು:

೩೮ ಪ್ರಾಚ್ಯೈ ದಿಶೇ ನಮಃ । ಅವಾಚ್ಯೈ ದಿಶೇ ನಮಃ । ಪ್ರತೀಚ್ಯೈ ದಿಶೇ ನಮಃ । ಉದೀಚ್ಯೈ ದಿಶೇ ನಮಃ । ಊರ್ಧ್ವಾಯೈ ದಿಶೇ ನಮಃ । ಅಧರಾಯೈ ದಿಶೇ ನಮಃ । ಇಂದ್ರಾಯ ನಮಃ । ಅಗ್ನಯೇ ನಮಃ । ಯಮಾಯ ನಮಃ । ನಿರ್ಋತಯೇ ನಮಃ । ವರುಣಾಯ ನಮಃ । ವಾಯವೇ ನಮಃ । ಸೋಮಾಯ ನಮಃ । ಈಶಾನಾಯ ನಮಃ । ಬ್ರಹ್ಮಣೇ ನಮಃ । ಅನಂತಾಯ ನಮಃ । ಸಂಧ್ಯಾಯೈ ನಮಃ । ಸಾವಿತ್ರ್ಯೈ ನಮಃ । ಗಾಯತ್ರ್ಯೈ ನಮಃ । ಸರಸ್ವತ್ಯೈ ನಮಃ । ಸರ್ವೇಭ್ಯೋ ದೇವೇಭ್ಯೋ ನಮಃ । ದೇವೀಭ್ಯೋ ನಮಃ । ಋಷಿಭ್ಯೋ ನಮಃ । ಮಾತೃಭ್ಯೋ ನಮಃ । ಪಿತೃಭ್ಯೋ ನಮಃ ।

೩೯ ಯಾಂ ಸದಾ ಸರ್ವಭೂತಾನಿ ಸ್ಥಾವರಾಣಿ ಚರಾಣಿ ಚ ।
ಸಾಯಂ ಪ್ರಾತರ್ನಮಸ್ಯಂತಿ ಸಾ ಮಾಂ ಸಂಧ್ಯಾಭಿರಕ್ಷತು ॥

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋನಮಃ ॥

ಆಕಾಶಾತ್ ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್ ।
ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ ॥

---

೩೮. ಈ ದಿಙ್ನಮಸ್ಕಾರ ಮಾಡುವಾಗ, ಆಯಾ ದಿಕ್ಕುಗಳಿಗೆ ಮುಖ ಮಾಡಿ ಕೈಮುಗಿದು ನಿಂತು ಆಯಾ ದಿಗ್‌ದೇವತೆಗಳ ಮಂತ್ರ ಪಠಿಸುವುದು ಸಂಪ್ರದಾಯ. ಈ ದಿಗುಪ ಸ್ಥಾನಕ್ಕೆ ಬೇರೆಬೇರೆ ಸಂಪ್ರದಾಯಗಳಲ್ಲಿ ಬೇರೆಬೇರೆ ಮಂತ್ರಗಳಿವೆ. ಎಲ್ಲೆಡೆಗು ಅನ್ವಯ ವಾಗುವ ಸಂಕ್ಷಿಪ್ತಮಂತ್ರಗಳನ್ನಷ್ಟೆ ಸಂಗ್ರಹರೂಪವಾಗಿ ಇಲ್ಲಿ ಕೊಡಲಾಗಿದೆ. ಅಪೇಕ್ಷೆ ಯಿದ್ದವರು ಬಲ್ಲವರಿಂದ ತಿಳಿದು ತಮ್ಮ ಸಂಪ್ರದಾಯದ ಮಂತ್ರಗಳನ್ನು ಪಠಿಸ ಬಹುದು.

೩೯. ಈ ಮಂತ್ರಗಳ ತಾತ್ಪರ್ಯ ಈ ತೆರನಾಗಿದೆ. 'ಚರಾಚರಾತ್ಮಕವಾದ ಈ ಜಗತ್ತು ಯಾವ ಸಂಧ್ಯೆಗೆಂದು ಬೈಗು-ಬೆಳಗು ಮಣಿಯುತ್ತಿದೆಯೋ ಅಂಥ ಸಂಧ್ಯಾದೇವಿ ನನ್ನನ್ನು ರಕ್ಷಿಸಲಿ'; 'ಗೋಬ್ರಾಹ್ಮಣರಿಗೆ, ಸಕಲ ಜಗತ್ತಿಗೆ ಪ್ರಿಯನಾದ ಗೋವಿಂದನಿಗೆ ವಂದನೆಗಳು'; 'ಯಾರಿಗೆ ಎಷ್ಟು ಮಣಿದರೇನು? ಎಲ್ಲ ನಮಸ್ಕಾರವೂ ಕೇಶವನನ್ನಲ್ಲವೆ ಸೇರುವುದು? ಮುಗಿಲಿನಿಂದ ಹರಿದುಬಂದ ನೀರು ಕೊನೆಗಾದರೂ ಕಡಲನ್ನೆ ಸೇರ ಬೇಕಲ್ಲವೆ?'; 'ಭಗವಂತನಿಗೆ ಅನಂತಮೂರ್ತಿಗಳುಂಟು. ಅನಂತ ಅವಯವಗಳುಂಟು. ಅನಂತ ನಾಮಗಳುಂಟು. ಅನಂತ ಆಯುಧಗಳುಂಟು. ಶಾಶ್ವತನೂ ಪುರುಷೋತ್ತ ಮನೂ ಆದ ನಾರಾಯಣನಿಗೆ ಬಾರಿಬಾರಿಗೂ ಪ್ರಣಾಮಗಳು'. **'ಪ್ರಣಮ್ಯ ದೇವಾನ್ ವಿಪ್ರಾಂಶ್ಚ ಗುರೂಂಶ್ಚ ಹರಿಪಾರ್ಷದಾನ್'** ಎಂದು ಆಚಾರ್ಯರು ಇದನ್ನು ಸೂಚಿಸಿ ದ್ದಾರೆ.

Rarest Archiver

ನಮೋಽಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟೀಯುಗಧಾರಿಣೇ ನಮಃ ॥

ಆನಂತರ ಎಡ–ಬಲ ಕಿವಿಗಳನ್ನು ಎಡ – ಬಲ ಕೈಗಳಿಂದ ಹಿಡಿದುಕೊಂಡು **.....ಗೋತ್ರ .....ಪ್ರವರಾನ್ವಿತಃ .....ಶಾಖಾಧ್ಯಾಯೀ .....ಶರ್ಮಾ ಅಹಂ ಭೋ ಅಭಿವಾದಯೇ** ಎಂದು ತನ್ನ ಗೋತ್ರ–ಪ್ರವರ–ಶಾಖೆ–ಹೆಸರುಗಳನ್ನು ಉಚ್ಚರಿಸಿ ಕೈಗಳನ್ನು ಅದಲುಬದಲಾಗಿ ಸ್ವಸ್ತಿಕಾಕಾರವಾಗಿ ಹಿಡಿದು ನೆಲಮುಟ್ಟಿ ನಮಸ್ಕರಿಸಬೇಕು.

ಕೃಷ್ಣಾರ್ಪಣ

ಆನಂತರ ನಾವು ಮಾಡಿದ ಕರ್ಮ ಭಗವಂತನಿಗೆ ಪ್ರಿಯವಾಗಲಿ ಎಂದು ಪ್ರಾರ್ಥಿಸಿ ಅವನಿಗೆ ಅರ್ಪಿಸಬೇಕು:

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾಽಽತ್ಮನಾ ವಾಽನುಸೃತಃ ಸ್ವಭಾವಮ್ ।
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಅನೇನ ಸಂಧ್ಯಾಕರ್ಮಕರಣೇನ ಭಗವಾನ್ ಶ್ರೀನಾರಾಯಣಃ ಪ್ರೀಯತಾಮ್ । ಎಂದು ಕೃಷ್ಣಾರ್ಪಣ ಮಾಡಬೇಕು: **ಶ್ರೀಕೃಷ್ಣಾರ್ಪಣಮಸ್ತು ।**

* * *

Rarest Archiver

ಮಾಧ್ಯಾಹ್ನಿಕ ಸಂಧ್ಯಾವಂದನ[೪೦]

ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ ಮಾಧ್ಯಾಹ್ನಿಕಸಂಧ್ಯಾಮುಪಾಸಿಷ್ಯೇ ಎಂದು ಸಂಕಲ್ಪಿಸಿ ಈ ಕೆಳಗಿನ ಮಂತ್ರದಿಂದ ಸೂರ್ಯನಾರಾಯಣನಿಗೆ ಅರ್ಘ್ಯವನ್ನೀಯಬೇಕು:

೪೧ **ಓಮ್ ಹಂಸಃ ಶುಚಿಷದ್ ವಸುರಂತರಿಕ್ಷಸದ್ಧೋತಾ ವೇದಿಷದತಿಥಿರ್ದುರೋಣಸತ್ । ನೃಷದ್ ವರಸದೃತಸದ್ ವ್ಯೋಮಸದಬ್ಜಾ ಗೋಜಾ ಋತಜಾ ಅದ್ರಿಜಾ ಋತಮ್ ।**

ಸೂರ್ಯೋಪಸ್ಥಾನ

ಅನಂತರ ಸೂರ್ಯನತ್ತ ಮುಖಮಾಡಿ ನಿಂತು ಕೈಮುಗಿದುಕೊಂಡು:

೪೨ **ಓಮ್ ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್ । ಪಶ್ಯೇಮ ಶರದಃ ಶತಮ್ । ಜೀವೇಮ ಶರದಃ ಶತಮ್ । ನಂದಾಮ ಶರದಃ**

---

೪೦. ಈ ಮಾಧ್ಯಾಹ್ನಿಕವು ವಾಸ್ತವವಾಗಿ ಮಧ್ಯಾಹ್ನದಲ್ಲಿ ಮಾಡಬೇಕಾದದ್ದು. ಬೆಳಗು, ಮಧ್ಯಾಹ್ನ, ಸಂಜೆ ಹೀಗೆ ಮೂರು ಸಂಧ್ಯೆಗಳಲ್ಲಿ ಆಚರಿಸುವುದರಿಂದಲೆ ಇದನ್ನು ತ್ರಿಕಾಲಸಂಧ್ಯೆ ಎಂದು ಕರೆಯುತ್ತಾರೆ. ಆದರೆ ಇಂದಿನ ದಿನಗಳಲ್ಲಿ ಉದ್ಯೋಗನಿರತರಾದ ಮಂದಿ ಮಧ್ಯಾಹ್ನಕಾಲದಲ್ಲಿ ಪುನಃ ಸ್ನಾನಾಹ್ನಿಕ ಮುಂತಾದ್ದನ್ನು ಮಾಡುವುದು ಕಷ್ಟ ಸಾಧ್ಯವಾದ್ದರಿಂದ ಕ್ರಿಯಾಲೋಪವಾಗದಂತೆ ಪ್ರಾತಃಸಂಧ್ಯೆಯ ಅನಂತರವೆ ಇದನ್ನೂ ಮಾಡಿ ಬಿಡುವುದುಂಟು. ಕಾಲಾವಕಾಶ ಇದ್ದವರು ಸಕಾಲದಲ್ಲಿ ಮಧ್ಯಾಹ್ನಿಕವನ್ನು ಮಾಡುವುದು ಶ್ರೇಷ್ಠ. ಆಚಾರ್ಯಮಧ್ವರು 'ಸದಾಚಾರಸ್ಮೃತಿ'ಯಲ್ಲಿ ಮಾಧ್ಯಾಹ್ನಿಕ ಸಂಧ್ಯಾವಂದನೆಯ ಬಗೆಗೆ ಉಲ್ಲೇಖಿಸಲಿಲ್ಲ. ಪ್ರಾಯಃ ಎರಡು ಹೊತ್ತು ಮಾತ್ರ ಸಂಧ್ಯಾವಂದನೆ ಮಾಡಿದರೂ ಕ್ರಿಯಾಲೋಪವಾಗುವುದಿಲ್ಲ ಎನ್ನುವುದು ಅದರ ಭಾವವಿರಬಹುದು.

೪೧. ಹಂಸನಾಮಕನಾದ ಭಗವಂತ ಸೂರ್ಯನಲ್ಲಿದ್ದು ಎಲ್ಲವನ್ನೂ ನಿಯಮಿಸುತ್ತಿದ್ದಾನೆ. ನಮ್ಮಲ್ಲಿ ಸನ್ನಿಹಿತನಾಗಿ, ನಾವು ಉಪಯೋಗಿಸುವ ಪೂಜೋಪಕರಣಗಳಲ್ಲಿ ಸನ್ನಿಹಿತನಾಗಿ ನಮ್ಮಿಂದ ಪೂಜೆ ಮಾಡಿಸಿಕೊಳ್ಳುವವನೂ ಅವನೆ; ಪೂಜೆಕೊಳ್ಳುವವನೂ ಅವನೆ. ಪರಮಸತ್ಯನಾದ, ಗುಣಪೂರ್ಣನಾದ ಆ ಭಗವಂತನೆ ನೆಲಮುಗಿಲುಗಳಲ್ಲಿ ತುಂಬಿದ್ದಾನೆ ಎಂದು ಅನುಸಂಧಾನ ಮಾಡವುದೆ ಈ ಮಂತ್ರದ ಉದ್ದೇಶ.

೪೨. 'ಸೂರ್ಯ ಜಗತ್ತಿನ ಕಣ್ಣು. ಭಗವಂತ ಲೋಕಸಾಕ್ಷಿಯಾಗಿ ಅವನನ್ನು ಮುಗಿಲಿನಲ್ಲಿ ನಿಲಿಸಿದ್ದಾನೆ. ಪ್ರಕಾಶಮಾನವಾದ ಈ ಕಣ್ಣು ದಿನವೂ ಮೂಡುದಿಕ್ಕಿನಿಂದ ಮೇಲೇರಿ ಬರುತ್ತದೆ. ಅಂಥ ಲೋಕಸಾಕ್ಷಿಯಾದ ಸೂರ್ಯನನ್ನು, ಅವನಲ್ಲಿ ನೆಲೆನಿಂತು ಲೋಕವನ್ನು ನಡೆಸುತ್ತಿರುವ ಭಗವಂತನನ್ನು ಕಾಣುವುದಕ್ಕಾಗಿ, ನಮ್ಮ ಆರಿವನ್ನು ಹಿಗ್ಗಿಸಿಕೊಳ್ಳುವುದಕ್ಕಾಗಿ ನಾವು ನೂರುವರ್ಷ ಬದುಕಬಯಸುತ್ತೇವೆ. ನಮ್ಮ ಪೂರ್ಣಾಯುಸ್ಸು

Rarest Archiver

ಶತಮ್ । ಮೋದಾಮ ಶರದಃ ಶತಮ್ । ಭವಾಮ ಶರದಃ ಶತಮ್ । ಪ್ರಬ್ರವಾಮ ಶರದಃ ಶತಮ್ । ಅಜೀತಾಃ ಸ್ಯಾಮ ಶರದಃ ಶತಮ್ । ಜ್ಯೋಕ್ ಚ ಸೂರ್ಯಂ ದೃಶೇ ಎಂಬ ಮಂತ್ರದಿಂದ ಭಗವಾನ್ ಸೂರ್ಯ ನಾರಾಯಣನನ್ನು ಪ್ರಾರ್ಥಿಸಿ ಅಭಿವಂದಿಸಬೇಕು.

ಗಾಯತ್ರೀಜಪ

ಅನಂತರ ಹಿಂದಿನಂತೆಯೆ ಪ್ರಾಣಾಯಾಮ–ಅಂಗನ್ಯಾಸ–ಕರನ್ಯಾಸಗಳನ್ನು ಮಾಡಿ, ಗಾಯತ್ರೀಮೂರ್ತಿಯನ್ನು ಧ್ಯಾನಿಸುತ್ತ ಕನಿಷ್ಠ ಹತ್ತುಬಾರಿ ಗಾಯತ್ರಿಯನ್ನು ಜಪಿಸಿ ಪೂರ್ವೋಕ್ತ ಕ್ರಮದಲ್ಲಿಯೆ ಕೃಷ್ಣಾರ್ಪಣ ಮಾಡಬೇಕು.[೪]

ಕೃಷ್ಣಾರ್ಪಣ

ಅನಂತರ ಮಾಧ್ಯಾಹ್ನಿಕ ಸಂಧ್ಯಾವಂದನದ ಕೃಷ್ಣಾರ್ಪಣಃ

ಕಾಯೇನ ವಾಚಾ ಮನಸೇಂದ್ರಿಯೈರ್ವಾ
ಬುದ್ಧ್ಯಾತ್ಮನಾ ವಾನುಸೃತಃ ಸ್ವಭಾವಮ್ ।
ಕರೋಮಿ ಯದ್ಯತ್ ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಅನೇನ ಮಾಧ್ಯಾಹ್ನಿಕಸಂಧ್ಯಾಕರಣೇನ ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಮ್ ಎಂದು ಅರ್ಘ್ಯಪಾತ್ರೆಗೆ ಜಲವನ್ನೆರೆದು ನಾವು ಮಾಡಿದ ಕರ್ಮವನ್ನು ಭಗವಂತನಿಗೆ ಸಮರ್ಪಿಸಬೇಕು: **ಶ್ರೀಕೃಷ್ಣಾರ್ಪಣಮಸ್ತು ।**

* * *

ಯುಸ್ಸು ಅವನ ದರ್ಶನದಿಂದ ಸಾರ್ಥಕವಾಗಲಿ; ಆನಂದಮಯವಾಗಲಿ; ಸುಖಿಭೋಗದಿಂದ ತುಂಬಲಿ; ಒಳ್ಳೆಯ ಮಾತನಾಡುತ್ತ, ಒಳ್ಳೆಯ ಮಾತನ್ನಾಲಿಸುತ್ತ, ದುಷ್ಟಶಕ್ತಿಗಳಿಗೆ ಬಲಿಯಾಗದೆ ನಮ್ಮ ಬಾಳು ಸಾತ್ವಿಕ ಪಥದಲ್ಲಿ ಮುನ್ನಡೆಯಲಿ' ಎಂಬ ಅರ್ಥದ ಈ ಮಂತ್ರವನ್ನು ಮಧ್ಯಾಹ್ನದಲ್ಲಿ ಮಾತ್ರವೆ ಏನು, ಬಾಳಿನುದ್ದಕ್ಕೂ ನೆನೆಸಿಕೊಂಡರೂ ತಪ್ಪಲ್ಲ. ಬಾಳಿನ ಮಹಾನ್ ಸಂದೇಶವನ್ನು ಸಾರುವ ಈ ಮಂತ್ರದ ಅರ್ಥ ಅರಿತಾಗ ಸಂಧ್ಯಾವಂದನೆಗೆ ವೈದಿಕಜೀವನದಲ್ಲಿ ಎಂಥ ಪ್ರಾಧಾನ್ಯ ಇದೆ ಮತ್ತು ಅದು ಎಷ್ಟು ಅನಿವಾರ್ಯ ಎನ್ನುವುದು ತಿಳಿಯುತ್ತದೆ.

೪. ಈ ಪುಸ್ತಕದ 16-18 ಪುಟಗಳಲ್ಲಿ ಗಾಯತ್ರೀಜಪದ ಕ್ರಮ ಬಂದಿದೆ. ಅದನ್ನು ನೋಡಿಕೊಂಡು ಅದರಂತೆಯೆ ಜಪಮಾಡಬೇಕು.

Rarest Archiver

ಬ್ರಹ್ಮಯಜ್ಞ ತರ್ಪಣ[೪೪]

ಸಂಕಲ್ಪ: ಬ್ರಹ್ಮಯಜ್ಞೇನ ಯಕ್ಷ್ಯೇ ದೇವರ್ಷೀನ್ ತರ್ಪಯಾಮಿ ಚ । [ಪಿತೃತರ್ಪಣಾಧಿಕಾರಿಗಳಾದರೆ ದೇವರ್ಷಿಪಿತೄಂಸ್ತರ್ಪಯಾಮಿ ಚ] ಅನಂತರ ಆಚಮನ ಮಾಡಬೇಕು. ಬಲಮೊಣಕಾಲಿನ ಮೇಲೆ ಶುದ್ಧ ಜಲಸಹಿತವಾದ ಎಡ ಅಂಗೈಯನ್ನಿಡಬೇಕು. ಪವಿತ್ರ ಧರಿಸದಿದ್ದರೆ ಅದರ ಪ್ರತಿನಿಧಿಯಾಗಿ ಯಜ್ಞೋಪವೀತವನ್ನು ಅನಾಮಿಕೆಗೆ ಸುತ್ತಿಕೊಳ್ಳಬೇಕು. ನಿರ್ಮಾಲ್ಯಸಹಿತವಾದ ಬಲ ಅಂಗೈಯನ್ನು ಎಡ ಅಂಗೈಯ ಮೇಲೆ ಮುಚ್ಚಬೇಕು. ಅನಂತರ ನೆಟ್ಟ ದೃಷ್ಟಿಯಿಂದ ಮೌನವಾಗಿ ವೇದಮಂತ್ರಗಳನ್ನು ಜಪಿಸಬೇಕು:

ಓಂ ಭೂರ್ಭುವಃ ಸ್ವಃ । ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ । ಓಂ ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ । ಓಂ ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ । ಧಿಯೋ ಯೋ ನಃ ಪ್ರಚೋದಯಾತ್ । ಓಂ ನಮೋ ಬ್ರಹ್ಮಣೇ ನಮೋಽ ಅಸ್ತ್ವಗ್ನಯೇ ನಮಃ ಪೃಥಿವ್ಯೈ ನಮಽ ಓಷಧೀಭ್ಯಃ । ನಮೋ ವಾಚೇ ನಮೋ ವಾಚಸ್ಪತಯೇ ನಮೋ ವಿಷ್ಣವೇ ಬೃಹತೇ ಕರೋಮಿ [ಎಂದು ಮೂರುಬಾರಿ ಹೇಳಬೇಕು.] ಓಂ ತಚ್ಚಂಯೋರಾ ವೃಣೇಮಹೇ ಗಾತುಂ ಯಜ್ಞಾಯ ಗಾತುಂ ಯಜ್ಞಪತಯೇ । ದೈವೀ ಸ್ವಸ್ತಿರಸ್ತು ನಃ ಸ್ವಸ್ತಿರ್ಮಾನುಷೇಭ್ಯಃ । ಊರ್ಧ್ವಂ ಜಿಗಾತು ಭೇಷಜಮ್ । ಶಂ ನೋಽ ಅಸ್ತು ದ್ವಿಪದೇ ಶಂ ಚತುಷ್ಪದೇ ಎಂದು

---

೪೪. ನಾವು ಅಧ್ಯಯನ ಮಾಡಿದ ವೇದಮಂತ್ರಗಳನ್ನು ಆವೃತ್ತಿಮಾಡುವುದೇ ಬ್ರಹ್ಮಯಜ್ಞದ ತಾತ್ಪರ್ಯ: 'ಸ್ವಶಾಖಾಧ್ಯಾಯನಂ ವಿಪ್ರ ಬ್ರಹ್ಮಯಜ್ಞ ಇತಿ ಸ್ಮೃತಃ' (ಲಿಂಗಪು). ಬ್ರಹ್ಮ ಎಂದರೆ ವೇದ. ದಿನವೂ ನಾವು ಮಾಡುವ ವೇದಾಧ್ಯಯನವೇ ಬ್ರಹ್ಮಯಜ್ಞ. ಆದರಿಂದ ಎಷ್ಟು ಸಾಧ್ಯ ಅಷ್ಟು ಮಂತ್ರಗಳನ್ನು ಬ್ರಹ್ಮಯಜ್ಞಕಾಲದಲ್ಲಿ ಜಪಿಸಬಹುದು. ಇತಿಹಾಸ-ಪುರಾಣ-ಸ್ಮೃತಿ ಗ್ರಂಥಗಳನ್ನೂ ಪಠಿಸಬಹುದು. ಪ್ರಧಾನವಾಗಿ ಎಲ್ಲ ವೇದಾರ್ಥಭೂತಗಳಾದ ಗಾಯತ್ರಿ-ವ್ಯಾಹೃತಿ-ಪ್ರಣವಗಳನ್ನಾದರೂ ಜಪಿಸಬೇಕು. ವೇದಪಾರಾಯಣದಿಂದ ಎಲ್ಲ ಜಗತ್ತು ತೃಪ್ತಿ ಹೊಂದಲಿ ಎಂಬ ಅನುಸಂಧಾನವೆ ಈ ತರ್ಪಣದ ಉದ್ದೇಶ. ಇದನ್ನು ಏಕಾದಶೀ, ಕೃಷ್ಣಜನ್ಮಾಷ್ಟಮೀ ಮುಂತಾದ ದಿನಗಳಲ್ಲೂ ವಿವಾಹಾದಿಗಳಲ್ಲೂ ಮಾಡಬಾರದು. 'ಸುರಾದಿಕಾನ್ ತರ್ಪಯಿತ್ವಾ' ಎಂಬ ಮಾತಿನಲ್ಲೆ ಆಚಾರ್ಯರು ತರ್ಪಣದ ಉಲ್ಲೇಖವನ್ನು ಸೂಕ್ಷ್ಮವಾಗಿ ಮಾಡಿಬಿಟ್ಟಿದ್ದಾರೆ. 'ಸ್ಮೃತ್ವಾ ಸರ್ವೋತ್ತಮಂ ವಿಷ್ಣುಂ ಸ್ವಾಧ್ಯಾಯೇನಾರ್ಚಯೇದ್ಧರಿಮ್ । ಧ್ಯಾನಪ್ರವಚನಾಭ್ಯಾಂ ವಾ ಯಥಾಯೋಗ್ಯಮುಪಾಸ್ಯ ತಮ್' ಎಂಬ ಆಚಾರ್ಯರ ವಚನದಲ್ಲಿ ಬ್ರಹ್ಮಯಜ್ಞದ ಸೂಚನೆಯೂ ಅಡಕವಾಗಿದೆ.

Rarest Archiver

ಶಾಂತಿಮಂತ್ರವನ್ನು ಜಪಿಸಿ ನಿರ್ಮಾಲ್ಯದಿಂದ ಪ್ರೋಕ್ಷಿಸಿಕೊಂಡು ಕೈ ತೊಳೆದು ಕೊಳ್ಳಬೇಕು.

ತರ್ಪಣಃ **ಬ್ರಹ್ಮಾದೀನ್ ದೇವಾನ್ ಸಪರಿವಾರಾನ್ ತರ್ಪಯಾಮಿ** ಎಂದು ಒಂದು ಬಾರಿ ತರ್ಪಣವನ್ನೀಯಬೇಕು. ಅನಂತರ ಯಜ್ಞೋಪವೀತವನ್ನು ಮಾಲಾಕಾರವಾಗಿ ಹಾಕಿಕೊಂಡು– **ಕೃಷ್ಣದ್ವೈಪಾಯನಾದೀನ್ ಋಷೀನ್ ಸಪರಿವಾರಾನ್ ತರ್ಪಯಾಮಿ ತರ್ಪಯಾಮಿ** ಎಂದು ಎರಡುಬಾರಿ ತರ್ಪಣವನ್ನೀಯಬೇಕು.

[ಅನಂತರ ಪಿತೃತರ್ಪಣಾಧಿಕಾರಿಗಳಾದರೆ ಯಜ್ಞೋಪವೀತವನ್ನು ಎಡಕ್ಕೆ ಹಾಕಿಕೊಂಡು ತರ್ಪಣ ಕೊಡಬೇಕು. ತಾಯಿ–ತಂದೆ ಇದ್ದವರು ಈ ತರ್ಪಣವನ್ನು ಕೊಡಬಾರದು:

ಆ ಬ್ರಹ್ಮಸ್ತಂಬಪರ್ಯಂತಂ ದೇವರ್ಷಿಪಿತೃಮಾನವಾಃ ।
ತೃಪ್ಯಂತು ಪಿತರಃ ಸರ್ವೇ ಮಾತೃಮಾತಾಮಹಾದಯಃ ।
ಅತೀತಕುಲಕೋಟೀನಾಂ ಸಪ್ತದ್ವೀಪನಿವಾಸಿನಾಮ್ ।
ಆಬ್ರಹ್ಮಭವನಾಲ್ಲೋಕಾದಿದಮಸ್ತು ಕುಶೋದಕಮ್ ॥

ಹೀಗೆ ಮೂರುಬಾರಿ ಜಪಿಸಿ ಮೂರು ತರ್ಪಣ ನೀಡಬೇಕು.[೪೫]

ಆಬ್ರಹ್ಮಸ್ತಂಬಪರ್ಯಂತಂ ಸರ್ವಂ ಜಗತ್ ತೃಪ್ಯತು, ತೃಪ್ಯತು, ತೃಪ್ಯತು ।]

ಅನಂತರ ಯಜ್ಞೋಪವೀತವನ್ನು ಬಲಕ್ಕೆ ಹಾಕಿಕೊಂಡು ಕೃಷ್ಣಾರ್ಪಣಜಲವನ್ನು ಬಿಡಬೇಕು:

ಅನೇನ ಬ್ರಹ್ಮಯಜ್ಞೇನ ದೇವರ್ಷಿತರ್ಪಣೇನ ಚ [ಪಿತೃತರ್ಪಣಾಧಿಕಾರಿಗಳಾದರೆ: **ದೇವರ್ಷಿಪಿತೃತರ್ಪಣೇನ ಚ**] **ಭಗವಾನ್ ನಾರಾಯಣಃ ಪ್ರೀಯತಾಮ್** ।

* * *

---

೪೫. ಪಿತೃತರ್ಪಣದಲ್ಲಿ ತಮ್ಮ ತಾಯಿ–ತಂದೆ ಮತ್ತು ಎಲ್ಲ ಹಿರಿಯರ ಎಲ್ಲ ಹೆಸರನ್ನೂ ಪ್ರತ್ಯೇಕವಾಗಿಯೆ ಹೇಳಿ ವಿಸ್ತಾರವಾಗಿ ತರ್ಪಣ ಕೊಡುವುದು ತುಂಬ ಪ್ರಶಸ್ತ. ಹಿರಿಯರಿಂದ ತಿಳಿದುಕೊಂಡು ಇಂಥ ವಿಸ್ತೃತವಾದ ಪಿತೃತರ್ಪಣಕ್ರಮವನ್ನು ಉಳಿಸಿಕೊಂಡು ಬರುವುದು ತುಂಬ ಶ್ರೇಯಸ್ಕರ. ಅದು ಸರ್ವಥಾ ಅಶಕ್ಯವಾದಲ್ಲಿ ಮೇಲಿನ ಮಂತ್ರಗಳಿಂದ ಸಂಕ್ಷಿಪ್ತವಾಗಿಯಾದರೂ ತರ್ಪಣ ನೀಡುವ ಕ್ರಮವನ್ನು ಇಟ್ಟುಕೊಳ್ಳಬೇಕು. ಈ ಪಿತೃತರ್ಪಣವನ್ನು ಎಳ್ಳುಕಾಳಿನ ಜತೆಗೆ ಕೊಡುವುದು ವಿಶೇಷ. ಕಡೆಗೆ, ಅಮಾವಾಸ್ಯೆ–ಸಂಕ್ರಾಂತಿ ಇಂಥ ವಿಶೇಷ ದಿನಗಳಲ್ಲಾದರೂ ಎಳ್ಳು ಸಹಿತವಾಗಿ ತರ್ಪಣ ಕೊಡುವ ಪದ್ಧತಿಯನ್ನು ಇಟ್ಟುಕೊಳ್ಳುವುದು ಉತ್ತಮ.

Rarest Archiver

ಪೂಜಾವಿಧಿ[೪೬]

ಪೂಜೆಗೆ ಬೇಕಾದ ಶುದ್ಧ ಜಲ–ತುಲಸಿ–ಗಂಧ ಮೊದಲಾದ ಸಾಮಗ್ರಿಗಳನ್ನು ಮೊದಲೇ ಸಿದ್ಧಪಡಿಸಿಕೊಂಡು ದೇವರ ಕೋಣೆಯ ಬಾಗಿಲ ಬಳಿ ನಿಂತು ಭಗವಂತನ ದ್ವಾರಪಾಲಕರನ್ನು ಪ್ರಾರ್ಥಿಸಬೇಕು:

ದ್ವಾರಶ್ರಿಯೇ ನಮಃ । ನಂದಾಯ ನಮಃ । ಸುನಂದಾಯ ನಮಃ । ಚಂಡಾಯ ನಮಃ । ಪ್ರಚಂಡಾಯ ನಮಃ । ಜಯಾಯ ನಮಃ । ವಿಜಯಾಯ ನಮಃ । ಕುಮುದಾಯಯ ನಮಃ । ಕುಮುದೇಕ್ಷಣಾಯ ನಮಃ ।

ಅನಂತರ ಬಾಗಿಲು ತೆರೆದು ದೇವರ ದೀಪವನ್ನು ಬೆಳಗಬೇಕು. ಅನಂತರ ಕೈಮುಗಿದುಕೊಂಡು ತನ್ನ ಪೂಜೆಯನ್ನು ಕೊಳ್ಳುವಂತೆ–ತನ್ನಲ್ಲಿ ಕರುಣಾದೃಷ್ಟಿಯನ್ನು ಬೀರುವಂತೆ ಪ್ರಾರ್ಥಿಸಿಕೊಳ್ಳಬೇಕು:

ಆಯತಾಭ್ಯಾಂ ವಿಶಾಲಾಭ್ಯಾಂ ಶೀತಲಾಭ್ಯಾಂ ಕೃಪಾನಿಧೇ ।
ಕರುಣಾರಸಪೂರ್ಣಾಭ್ಯಾಂ ಲೋಚನಾಭ್ಯಾಂ ವಿಲೋಕಯ ॥

ಅಪರಾಧಸಹಸ್ರಾಣಿ ಕ್ರಿಯಂತೇಽಹರ್ನಿಶಂ ಮಯಾ ।
ತಾನಿ ಸರ್ವಾಣಿ ಮೇ ದೇವ ಕ್ಷಮಸ್ವ ಪುರುಷೋತ್ತಮ ॥
ಸ್ವಾಮಿನ್ ಕೃಪಯಾ ಪೂಜಾರ್ಥಂ ಉತ್ತಿಷ್ಠ ।

ಅನಂತರ ಘಂಟಾನಾದವನ್ನು ಮಾಡಬೇಕು. ಗಂಟೆಯ ಕರೆ ಕೇಳಿ ದೇವತೆಗಳು ಬಳಿಬರುವರಂತೆ; ದುಷ್ಟಶಕ್ತಿಗಳು ದೂರ ಸರಿಯುವುವಂತೆ. ಅದಕ್ಕಾಗಿ ಪೂಜಾರಂಭದಲ್ಲಿ ಈ ಘಂಟಾನಾದ. ಅದಕ್ಕಾಗಿ ಘಂಟಾದೇವತೆಗಳನ್ನು ನೆನೆಯಬೇಕು; ಜತೆಗೆ ಶಂಖದಲ್ಲಿರುವ ದೇವತೆಗಳನ್ನು ಕೂಡ:

ಘಂಟಾದೇವತಾಭ್ಯೋ ನಮಃ । ಶಂಖದೇವತಾಭ್ಯೋ ನಮಃ ॥

---

೪೬. ತನ್ನ ಜೀವನೋಪಯೋಗಿಯಾದ ಧನಾರ್ಜನೆಯನ್ನು ಶಾಸ್ತ್ರೀಯವಾದ ರೀತಿಯಲ್ಲಿ ಮಾಡಿ ಮನೆಗೆ ಬಂದು ಮಿಂದು ವೇದಾನುಸಾರಿತಂತ್ರಗಳಲ್ಲಿ ಒರೆದಂತೆ ಹರಿಯನ್ನು ಪೂಜಿಸಬೇಕು ಎಂದು ಆಚಾರ್ಯರು ಪೂಜಾವಿಧಿಯನ್ನು ಒಂದೇ ಮಾತಿನಲ್ಲಿ ಸೂಚಿಸಿದ್ದಾರೆ:

ಧರ್ಮೇಣೇಜ್ಯಾಸಾಧನಾನಿ ಸಾಧಯಿತ್ವಾ ವಿಧಾನತಃ ।
ಸ್ನಾತ್ವಾ ಸಂಪೂಜಯೇದ್ ವಿಷ್ಣುಂ ವೇದತಂತ್ರೋಕ್ತಮಾರ್ಗತಃ ॥
— *(ಸದಾಚಾರಸ್ಮೃತಿ)*

Rarest Archiver

ನಿರ್ಮಾಲ್ಯವಿಸರ್ಜನ

ದೇವರ ಎದುರುಗಡೆ ಪೂರ್ವ ಅಥವಾ ಉತ್ತರಮುಖವಾಗಿ ಕುಳಿತು ಸಂಪುಟದ ಬಾಯಿ ತೆರೆದು ಅಲ್ಲಿಯ ನಿರ್ಮಾಲ್ಯಗಳನ್ನೂ ಪ್ರತಿಮೆಯಲ್ಲಿನ ನಿರ್ಮಾಲ್ಯವನ್ನೂ ತೆಗೆದು ಚೊಕ್ಕಟಗೊಳಿಸಿ ಸಾಲಿಗ್ರಾಮಗಳನ್ನು ನೀರಿನಲ್ಲಿ ತೊಳೆದು ಅಭಿಷೇಕದ ಪಾತ್ರೆಯಲ್ಲಿರಿಸಬೇಕು.

[ಮುಖ್ಯಪ್ರಾಣನ, ಗರುಡನ ಮೂರ್ತಿಗಳಿದ್ದರೆ, ಶೇಷನ ಫಣವಿದ್ದರೆ, ಶಿವನ ಲಿಂಗವಿದ್ದರೆ ಅವುಗಳನ್ನೂ 'ಓಂ ಹಂ ಹನುಮತೇ ನಮಃ, ಗರುಡಶೇಷರುದ್ರೇಭ್ಯೋ ನಮಃ' ಎಂದು ನೀರಿನಿಂದ ತೊಳೆದು ಅಭಿಷೇಕಕ್ಕೆಂದು ಬೇರೆಬೇರೆ ತಟ್ಟೆಗಳಲ್ಲಿಡ ಬೇಕು.]

ಸಂಕಲ್ಪ

ಅನಂತರ ಜಪದಲ್ಲಿ ಹೇಳಿದಂತೆ ಪಾಪಪುರುಷ ಧ್ಯಾನ–ಶೋಷಣ–ದಹನ–ಪ್ಲುತಿಗಳನ್ನು ಮಾಡಿ ಸಂಕಲ್ಪಿಸಬೇಕು:

ಭಗವತಃ ಪ್ರೇರಣಯಾ ಭಗವತ್ಪ್ರೀತ್ಯರ್ಥಂ [ಶ್ರೀಮದ್ವಾಚಾರ್ಯಾಣಾಂ ಹೃತ್ಕಮಲವಾಸಿನಃ][೪೭] ಶ್ರೀವಾಸುದೇವಸ್ಯ ಪೂಜಾತ್ಮಕಂ ಕರ್ಮ ಕರಿಷ್ಯೇ ॥

ಕಲಶಪೂಜೆ

ಅನಂತರ ಅಭಿಷೇಕಕ್ಕಾಗಿ ಎರಡು ಪಾತ್ರೆಗಳನ್ನಿಟ್ಟು ಒಂದರಲ್ಲಿ ಗಂಧೋದಕವನ್ನೂ, [೪೮] ಇನ್ನೊಂದರಲ್ಲಿ ಶುದ್ಧೋದಕವನ್ನೂ ತುಂಬಬೇಕು. ಆ ಕಲಶಗಳನ್ನು ಮುಟ್ಟಿಕೊಂಡು ಕಲಶದಲ್ಲಿ ಎಲ್ಲ ಪುಣ್ಯಜಲಗಳೂ ಸನ್ನಿಹಿತವಾಗಿರಲಿ ಎಂದು ನೆನೆದುಕೊಂಡು ಪ್ರಾರ್ಥಿಸಬೇಕು:

[೪೯] **ಅಜಾದ್ಯೇಕಪಂಚಾಶನ್ಮೂರ್ತಯೇ ನಮಃ । ಕೇಶವಾದಿಚತುರ್ವಿಂಶತಿ ಮೂರ್ತಯೇ ನಮಃ । ಆತ್ಮಾದಿಚತುರ್ಮೂರ್ತಯೇ ನಮಃ । ವಾಸು-**

---

೪೭. ಪ್ರತಿಯೊಬ್ಬ ಮಾಧ್ವನೂ ಈ ಅನುಸಂಧಾನವನ್ನು ತಪ್ಪದೆ ಮಾಡಬೇಕು. ನಾವು ಮಾಡಿದ ಕರ್ಮಗಳನ್ನು ಭಗವಂತನಿಗೆ ಅರ್ಪಿಸುವವರು ವಾಯುಸ್ವರೂಪರಾದ ಆಚಾರ್ಯಮಧ್ವರು.

೪೮. ಏಕಾದಶಿಯ ದಿನ ತೀರ್ಥಕ್ಕೆ ಗಂಧದ್ರವ್ಯವನ್ನು ಬೆರೆಸಬಾರದು.

೪೯. ನೂರುಮಂದಿ ಕಲಶದೇವತೆಗಳ ಹೆಸರು ಈ ತೆರನಾಗಿದೆ:

ಅಜಾದಿಮೂರ್ತಿಗಳು ೫೧–

೧. ಅಜ ೨. ಆನಂದ ೩. ಇಂದ್ರ ೪. ಈಶ ೫. ಉಗ್ರ ೬. ಊರ್ಜ ೭. ಋತಂಭರ ೮. ೠಷ ೯. ಲ್ಶ ೧೦. ಲ್ೞ ೧೧. ಏಕಾತ್ಮ ೧೨. ಐರ ೧೩. ಓಜೋಭೃತ್ ೧೪. ಔರಸ ೧೫. ಅಂತ ೧೬. ಅರ್ಧಗರ್ಭ ೧೭. ಕಪಿಲ ೧೮. ೠಪತಿ ೧೯. ಗರುಡಾಸನ ೨೦. ಘರ್ಮ ೨೧. ಜಸಾರ ೨೨. ಚಾರ್ವಂಗ ೨೩. ಛಂದೋಗಮ್ಯ ೨೪.

Rarest Archiver

ದೇವಾದಿಚತುರ್ಮೂರ್ತಯೇ ನಮಃ । ವಿಶ್ವಾದಿಚತುರ್ಮೂರ್ತಯೇ ನಮಃ । ಮತ್ಸ್ಯಾದಿದಶಮೂರ್ತಯೇ ನಮಃ । ದತ್ತಾತ್ರೇಯಾಯ ನಮಃ । ವೇದವ್ಯಾಸಾಯ ನಮಃ । ಶಿಂಶುಮಾರಾಯ ನಮಃ ॥

ಸರ್ವಕ್ಷೇತ್ರಮಯೋ ಯಸ್ಮಾತ್ ಸರ್ವತೀರ್ಥಮಯೋ ಯತಃ ।
ಅತೋ ಹರಿಪ್ರಿಯೋಽಸಿ ತ್ವಂ ಪೂರ್ಣಕುಂಭ ನಮೋಽಸ್ತು ತೇ ॥

ಪೀಠಪೂಜೆ[೫೦]

ನಮ್ಮ ಪೀಠದಿಂದ ಮೊದಲುಗೊಂಡು ಇಡಿಯ ಬ್ರಹ್ಮಾಂಡವನ್ನೆಲ್ಲ ವ್ಯಾಪಿಸಿ ನಿಂತಿರುವ ಕ್ಷೀರಸಾಗರಶಾಯಿ ಭಗವಂತನ ವಿಭೂತಿರೂಪವನ್ನು ಈ ತೆರನಾಗಿ ಧ್ಯಾನಿಸಬೇಕು:

ಜನಾರ್ದನ ೨೫. ಝೂಟಿತಾರಿ ೨೬. ಇಮ ೨೭. ಟಂಕಿ ೨೮. ಠಲಕ ೨೯. ಡರಕ ೩೦. ಢರಿ ೩೧. ಣಾತ್ಮ ೩೨. ತಾರ ೩೩. ಥಭ ೩೪. ದಂಡಿ ೩೫. ಧನ್ವಿ ೩೬. ನಮ್ಯ ೩೭. ಪರ ೩೮. ಫಲಿ ೩೯. ಬಲಿ ೪೦. ಭಗ ೪೧. ಮನು ೪೨. ಯಜ್ಞ ೪೩. ರಾಮ ೪೪. ಲಕ್ಷ್ಮೀಪತಿ ೪೫. ವರ ೪೬. ಶಾಂತಸಂವಿತ್ ೪೭. ಷಡ್ಗುಣ ೪೮. ಸಾರಾತ್ಮ ೪೯. ಹಂಸ ೫೦. ಳಾಳುಕ ೫೧. ನೃಸಿಂಹ.

ಕೇಶವಾದಿಮೂರ್ತಿಗಳು ೨೪:

೧. ಕೇಶವ ೨. ನಾರಾಯಣ ೩. ಮಾಧವ ೪. ಗೋವಿಂದ ೫. ವಿಷ್ಣು ೬. ಮಧುಸೂದನ ೭. ತ್ರಿವಿಕ್ರಮ ೮. ವಾಮನ ೯. ಶ್ರೀಧರ ೧೦. ಹೃಷೀಕೇಶ ೧೧. ಪದ್ಮನಾಭ ೧೨. ದಾಮೋದರ ೧೩. ಸಂಕರ್ಷಣ ೧೪. ವಾಸುದೇವ ೧೫. ಪ್ರದ್ಯುಮ್ನ ೧೬. ಅನಿರುದ್ಧ ೧೭. ಪುರುಷೋತ್ತಮ ೧೮. ಅಧೋಕ್ಷಜ ೧೯. ನಾರಸಿಂಹ ೨೦. ಅಚ್ಯುತ ೨೧. ಜನಾರ್ದನ ೨೨. ಉಪೇಂದ್ರ ೨೩. ಹರಿ ೨೪. ಕೃಷ್ಣ.

ಆತ್ಮಾದಿಚತುರ್ಮೂರ್ತಿಗಳು:

೧. ಆತ್ಮ ೨. ಅಂತರಾತ್ಮ ೩. ಪರಮಾತ್ಮ ೪. ಜ್ಞಾನಾತ್ಮ.

ವಾಸುದೇವಾದಿಚತುರ್ಮೂರ್ತಿಗಳು:

೧. ವಾಸುದೇವ ೨. ಸಂಕರ್ಷಣ ೩. ಪ್ರದ್ಯುಮ್ನ ೪. ಅನಿರುದ್ಧ.

ವಿಶ್ವಾದಿಚತುರ್ಮೂರ್ತಿಗಳು:

೧. ವಿಶ್ವ ೨. ತೈಜಸ ೩. ಪ್ರಾಜ್ಞ ೪. ತುರೀಯ.

ಮತ್ಸ್ಯಾದಿ ದಶಮೂರ್ತಿಗಳು:

೧. ಮತ್ಸ್ಯ ೨. ಕೂರ್ಮ ೩. ವರಾಹ ೪. ನರಸಿಂಹ ೫. ವಾಮನ ೬. ಭಾರ್ಗವ ೭. ರಾಮ ೮. ಕೃಷ್ಣ ೯. ಬುದ್ಧ ೧೦. ಕಲ್ಕಿ. ಒಟ್ಟಿಗೆ ೬೭ ಮೂರ್ತಿಗಳು. ದತ್ತಾತ್ರೇಯ-ವೇದವ್ಯಾಸ-ಶಿಂಶುಮಾರ ರೂಪಗಳನ್ನು ಸೇರಿಸಿ ಒಟ್ಟು ನೂರು ಭಗವದ್‌ರೂಪಗಳು.

೫೦. ಬ್ರಹ್ಮಾಂಡ ಕಟಾಹದಿಂದ ಹಿಡಿದು ನಾವು ಪೂಜೆಗೆ ಅಣಿಗೊಳಿಸಿದ ಅಣುಪೀಠದ ವರೆಗೂ ವ್ಯಾಪಿಸಿದ ಭಗವಚ್ಛಕ್ತಿಯ ಅನಂತ ಸಂಸ್ಥಾನವನ್ನು ಚಿಂತಿಸುವುದೇ ಈ

Rarest Archiver

ಮಧ್ಯದಲ್ಲಿ: ಓಂ ನಮೋ ನಾರಾಯಣಾಯ ।
ಎಡಪಕ್ಕದಲ್ಲಿ: ಪರಮಗುರವೇ ವಾಯವೇ ನಮಃ ।
ಬಲಪಕ್ಕದಲ್ಲಿ: ಬ್ರಹ್ಮಾದಿಸರ್ವದೇವತಾಭ್ಯೋ ನಮಃ ।
ಪುನಃ ಎಡದಲ್ಲಿ: ಸರ್ವೇಭ್ಯೋ ಗುರುಭ್ಯೋ ನಮಃ ।

ಪೀಠದ ಕೆಳಭಾಗದ ಆಗ್ನೇಯಾದಿ ನಾಲ್ಕು ಮೂಲೆಗಳಲ್ಲಿ ಕ್ರಮವಾಗಿ:

ಗರುಡಾಯ ನಮಃ । ವೇದವ್ಯಾಸಾಯ ನಮಃ । ದುರ್ಗಾಯೈ ನಮಃ । ಸರಸ್ವತ್ಯೈ ನಮಃ ।

ಮೇಲ್ಭಾಗದ ನಾಲ್ಕು ಮೂಲೆಗಳಲ್ಲಿ:

ಧರ್ಮಾಧಿಪತಯೇ ಯಮಾಯ ನಮಃ । ಜ್ಞಾನಾಧಿಪತಯೇ ವಾಯವೇ ನಮಃ । ವೈರಾಗ್ಯಾಧಿಪತಯೇ ಶಿವಾಯ ನಮಃ । ಐಶ್ವರ್ಯಾಧಿ–ಪತಯೇ ಇಂದ್ರಾಯ ನಮಃ ।

ನಡುವೆ ಪೂರ್ವಾದಿದಿಕ್ಕುಗಳಲ್ಲಿ ಕ್ರಮವಾಗಿ:

ಅಧರ್ಮಾಧಿಪತಯೇ ನಿರ್ಋತಯೇ ನಮಃ । ಅಜ್ಞಾನಾಧಿಪತಯೇ ದುರ್ಗಾಯೈ ನಮಃ । ಅವೈರಾಗ್ಯಾಧಿಪತಯೇ ಕಾಮಾಯ ನಮಃ । ಅನೈಶ್ವರ್ಯಾಧಿಪತಯೇ ರುದ್ರಾಯ ನಮಃ ।

ಇಷ್ಟು ಭಗವತ್ಪರಿವಾರಭೂತರಾಗಿ ಪೀಠವನ್ನು ಸುತ್ತುವರಿದು ನಿಂತಿರುವ ದೇವತೆಗಳ ಅನುಸಂಧಾನ ಕ್ರಮ. ಆನಂತರ ಪೀಠಮಧ್ಯದ ಸರಳರೇಖೆಯಲ್ಲಿ ಬ್ರಹ್ಮಾಂಡದ ಅಡಿಯಲ್ಲಿ ಪರಮಪುರುಷನಾದ ನಾರಾಯಣನೂ ಆಧಾರಶಕ್ತಿ

ಪೂಜೆಯ ಉದ್ದೇಶ. ಎಂತಲೇ ಬ್ರಹ್ಮಾಂಡ ಕಟಾಹವನ್ನು ತಲೆಯಲ್ಲಿ ಹೊತ್ತುಕೊಂಡು ನಮ್ಮನ್ನೆಲ್ಲ ಸಲಹುತ್ತಿರುವ ಭಗವದ್ರೂಪವನ್ನು ಮೊದಲುಗೊಂಡು ಬ್ರಹ್ಮಾಂಡದ ಅಣುಮಾತ್ರವಾದ ನಮ್ಮ ಪೀಠದಲ್ಲೂ ಸನ್ನಿಹಿತವಾದ ಭಗವದ್ರೂಪದ ವಿಭೂತಿಚಿಂತನ. ನಮ್ಮ ಪೀಠದಲ್ಲಿ ಕುಳಿತ ಭಗವದ್ರೂಪ ಬ್ರಹ್ಮಾಂಡವನ್ನು ಹೊತ್ತಿದೆ. ಬ್ರಹ್ಮಾಂಡವನ್ನು ಹೊತ್ತಿರುವ ಭಗವದ್ರೂಪ ನಮ್ಮ ಚಿಕ್ಕ ಪೀಠದಲ್ಲಿ ಬೆಳಗುತ್ತಿದೆ. ಒಂದು ದಿಗಂತಗಳನ್ನೆಲ್ಲ ವ್ಯಾಪಿಸಿದ ವಿಶ್ವದರ್ಶನವಾದರೆ; ಒಂದು ಅಂಗೈಯಗಲದ ಚಿಕ್ಕ ರೂಪದ ಅರ್ಚಾ ಮೂರ್ತಿ. ಇದು ಪೀಠಪೂಜೆಯಲ್ಲಿ ನಾವು ಅರಿತುಕೊಳ್ಳಬೇಕಾದ ಮಹಿಮೆ. ಇದೇ ಈ ಪೂಜೆಯ ಪದ್ಧತಿಯ ಹಿನ್ನೆಲೆ. ಭೂಮಿಯನ್ನು ಹೊತ್ತಿರುವ ವಿಷ್ಣುಕೂರ್ಮ– ವಾಯು ಕೂರ್ಮಗಳೆಂದರೆ ಜಗತ್ತಿನ ಧಾರಕಶಕ್ತಿಗಳೇ ಆಗಿವೆ. ಈ ಭೂಮಿಯಾಗಲಿ ಗ್ರಹ–ನಕ್ಷತ್ರ ಗಳಾಗಲಿ ಬರಿಯ ಮುಗಿಲಲ್ಲಿ ಹೇಗೆ ನಿಂತಿವೆ? ಅದಕ್ಕೆ ಶಾಸ್ತ್ರಕಾರರು ಎನ್ನುತ್ತಾರೆ: ಭಗವಂತನ ಶಕ್ತಿ ಅದನ್ನು ಒಂದಕ್ಕೊಂದು ಹೆಣೆದು ಹೊತ್ತು ನಿಂತಿದೆ; ವಾಯು ದೇವರು ಗಾಳಿಯ ರೂಪದಿಂದ ಅದನ್ನು ಹೊತ್ತು ನಡೆಯಿಸುತಿದ್ದಾರೆ– ಎಂದು. ಇದನ್ನೆ ಇಂದಿನವರು ಆಕರ್ಷಣಶಕ್ತಿಯೆಂದು ಹೆಸರಿಸಿದರು. ಹಿಂದಿನವರು ಈ ಶಕ್ತಿ ಭೂಮಿಗೆ ಬಂದುದು ಭಗವಂತನಿಂದ ಎಂದರು. ಯಾವುದು ಯಾವುದಕ್ಕೂ ವಿರೋಧಿಯಾಗಿಲ್ಲ. ಅರಿತು ಹೊಂದಿಸಿಕೊಳ್ಳುವುದು ಮುಖ್ಯ.

Rarest Archiver

ಯಾದ ರಮೆಯೂ ಇರುವರೆಂದು ಧ್ಯಾನಿಸಬೇಕು. ಆಧಾರಶಕ್ತಿಯ ಮೇಲೆ ಜಗದಾಧಾರನಾದ ಆದಿಕೂರ್ಮನನ್ನೂ ಅವನ ಪುಚ್ಛದಲ್ಲಿ ವಾಯುಕೂರ್ಮನನ್ನೂ ಅವನ ಪುಚ್ಛದಲ್ಲಿ ಶೇಷನನ್ನೂ ಶೇಷನ ಹೆಡೆಯಲ್ಲಿ ಪೃಥಿವಿಯನ್ನೂ ಅಲ್ಲಿ ಕ್ಷೀರ ಸಾಗರವನ್ನೂ ಕ್ಷೀರಾಸಾಗರದಲ್ಲಿ ಶ್ವೇತದ್ವೀಪವನ್ನೂ ಅಲ್ಲಿ ದಿವ್ಯ ರತ್ನಖಚಿತವಾದ ಮಂಟಪವನ್ನೂ ಧ್ಯಾನಿಸಿ, ಆ ಮಂಟಪದಲ್ಲಿ ಚತುಷ್ಕೋಣಾಕಾರದ ಪೀಠದ ಮೇಲಿರುವ ಪದ್ಮದಲ್ಲಿ ಆಸೀನನಾದ ಭಗವಂತನನ್ನು ಧ್ಯಾನಿಸಬೇಕು:

ಪೀಠಾಧೋಮಧ್ಯಭಾಗೇ ಪರಮಪುರುಷಾಯ ನಮಃ । ಆಧಾರ-ರೂಪಿಣ್ಯೈ ಶಕ್ತ್ಯೈ ನಮಃ । ತದುಪರಿ ಆದಿಕೂರ್ಮಾಯ ನಮಃ । ತತ್ಪುಚ್ಛೋಪರಿಸ್ಥಿತವಾಯುಕೂರ್ಮಾಯ ನಮಃ । ತದುಪರಿ ಅನಂತಾಯ ನಮಃ। ತದುಪರಿ ಪೃಥಿವ್ಯಭಿಮಾನಿನ್ಯೈ ಭೂಮ್ಯೈ ನಮಃ । ತದುಪರಿ ಕ್ಷೀರ–ಸಾಗರಾಭಿಮಾನಿನೇ ವರುಣಾಯ ನಮಃ । ತದುಪರಿ ಶ್ವೇತದ್ವೀಪರೂಪಾಯೈ ರಮಾಯೈ ನಮಃ । ತದುಪರಿ ದಿವ್ಯರತ್ನಮಯಮಹಾಮಂಡಪರೂಪಾಯೈ ರಮಾಯೈ ನಮಃ । ತದುಪರಿ ಪದ್ಮರೂಪಾಯೈ ರಮಾಯೈ ನಮಃ ।

ಮಂಟಪದಲ್ಲಿ ಆರು ದಲಗಳ ಪದ್ಮವೊಂದು, ಅದರಲ್ಲಿ ಎಂಟು ದಲಗಳ ಪದ್ಮವೊಂದು –ಹೀಗೆ ಎರಡು ಕಮಲಗಳನ್ನು ಧ್ಯಾನಿಸಬೇಕು. ಮೊದಲನೆಯ ಪದ್ಮದ ಆರು ದಲಗಳ ಎದುರುಬದಿಯಿಂದ ಪ್ರದಕ್ಷಿಣಾಕಾರವಾಗಿ ಈ ಆರು ದೇವತೆಗಳನ್ನು ಧ್ಯಾನಿಸಬೇಕು:

ಓಂ ಸೂರ್ಯಾಯ ನಮಃ । ಸೋಮಾಯ ನಮಃ । ಹುತಾಶನಾಯ ನಮಃ । ಓಂ ಸಂ ಸತ್ತ್ವಾಯ ನಮಃ । ರಂ ರಜಸೇ ನಮಃ । ತಂ ತಮಸೇ ನಮಃ ।

ಅನಂತರ ಪರಮಾತ್ಮನ ರೂಪಗಳನ್ನು ಧ್ಯಾನಿಸಬೇಕು:

ಓಂ ಆತ್ಮನೇ ನಮಃ । ಓಂ ಅಂತರಾತ್ಮನೇ ನಮಃ । ಓಂ ಪರಮಾತ್ಮನೇ ನಮಃ । ಓಂ ಜ್ಞಾನಾತ್ಮನೇ ನಮಃ ।

ಅನಂತರ ಅಷ್ಟದಲ ಪದ್ಮದ ಎಂಟು ದಲಗಳಲ್ಲಿ ಮತ್ತು ಮಧ್ಯದಲ್ಲಿ ಪೂರ್ವಾದಿಕ್ರಮವಾಗಿ ಭಗವಂತನ ನವಶಕ್ತಿಗಳನ್ನು ಧ್ಯಾನಿಸಬೇಕು:

ಓಂ ವಿಮಲಾಯೈ ನಮಃ । ಓಂ ಉತ್ಕರ್ಷಿಣ್ಯೈ ನಮಃ । ಓಂ ಜ್ಞಾನಾಯೈ ನಮಃ । ಓಂ ಕ್ರಿಯಾಯೈ ನಮಃ । ಓಂ ಯೋಗಾಯೈ ನಮಃ । ಓಂ ಪ್ರಹ್ವ್ಯೈ ನಮಃ । ಓಂ ಸತ್ಯಾಯೈ ನಮಃ । ಓಂ ಈಶಾನಾಯೈ ನಮಃ । ಓಂ ಅನುಗ್ರಹಾಯೈ ನಮಃ ।

ಅಲ್ಲಿ ನಾರಾಯಣನ ಹಾಸುಗೆಯಾದ ಶೇಷನನ್ನು ನೆನೆಯಬೇಕು:

ಓಂ ಸರ್ವಪೀಠದೇವತಾಭ್ಯೋ ನಮಃ । ಓಂ ಅನಂತಾಯ ಯೋಗ-ಪೀಠಾತ್ಮನೇ ನಮಃ ।।

Rarest Archiver

ಆವಾಹನಕ್ರಮ

ನಮ್ಮ ಹೃದಯಕಮಲದಲ್ಲಿ ನೆಲೆಸಿರುವ, ಚಕ್ರ–ಶಂಖ–ಗದಾ–ಪದ್ಮಧಾರಿಯಾದ, ಜ್ಞಾನಾನಂದಮಯನಾದ ನಾರಾಯಣನನ್ನು ಧ್ಯಾನಿಸಿ, ತನ್ನ ಹೃದಯದಿಂದ ಪೀಠದ ಪ್ರತಿಮೆಯಲ್ಲಿ ಬಂದು ಸನ್ನಿಹಿತನಾಗುವಂತೆ ಈ ಮಂತ್ರಗಳಿಂದ ಪ್ರಾರ್ಥಿಸಬೇಕು:

ಆತ್ಮಾ ದೇವಾನಾಂ ಭುವನಸ್ಯ ಗರ್ಭೋ
ಯಥಾವಶಂ ಚರತಿ ದೇವ ಏಷಃ ।
ಘೋಷಾ ಇದಸ್ಯ ಶೃಣ್ವಿರೇ ನ ರೂಪಂ
ತಸ್ಮೈ ವಾತಾಯ ಹವಿಷಾ ವಿಧೇಮ ॥

ಏಹ್ಯೇಹಿ ಮಮ ಹೃತ್ಪದ್ಮಸ್ಥಿತ ಶ್ರೀಪುರುಷೋತ್ತಮ ।
ಆವಾಹಯಾಮಿ ಪೀಠೇಽಸ್ಮಿನ್ ಪ್ರತಿಮಾಯಾಂ ರಮಾಪತೇ ॥

ಏಹ್ಯೇಹಿ ಮಮ ಹೃತ್ಪದ್ಮಸ್ಥಿತ ಶ್ರೀಪುರುಷೋತ್ತಮ ।
ಆವಾಹಯಾಮಿ ಪೀಠೇಽಸ್ಮಿನ್ ಪ್ರತಿಮಾಯಾಂ ರಮಾಪತೇ ॥

ಅನಂತರ: ಓಂ ನಮೋ ನಾರಾಯಣಾಯ । [ಯಥಾಶಕ್ತಿ ೮; ೨೪ ಅಥವಾ ೧೦೮ ಬಾರಿ]

ಭೋಃ ಸ್ವಾಮಿನ್ ಜಗತಾಂ ನಾಥ ಯಾವತ್ಪೂಜಾವಸಾನಕಮ್ ।
ತಾವತ್ಸಂಪ್ರೀತಿಭಾವೇನ ಪ್ರತಿಮಾಯಾಂ ಸ್ಥಿರೋ ಭವ ॥

ಎಂದು ಪೂಜೆ ಮುಗಿವ ತನಕ ಪ್ರತಿಮೆಯಲ್ಲಿ ಸನ್ನಿಹಿತನಾಗಿರುವಂತೆ ಭಗವಂತನಲ್ಲಿ ವಿನಂತಿಸಿಕೊಂಡು ತುಲಸೀಪುಷ್ಪಗಳನ್ನು ಅರ್ಪಿಸಬೇಕು. ಅನಂತರ ಆವಾಹನಾದಿ ಷಣ್ಮುದ್ರೆಗಳನ್ನು ತೋರಿಸಬೇಕು: ಓಂ ನಮೋ ನಾರಾಯಣಾಯ । ಆವಾಹಿತೋ ಭವ । ಸಂಸ್ಥಾಪಿತೋ ಭವ । ಸನ್ನಿಹಿತೋ ಭವ । ಸನ್ನಿರುದ್ಧೋ ಭವ । ಸಮ್ಮುಖೋ ಭವ । ಅವಗುಂಠಿತೋ ಭವ ।



ಆವಾಹನ ಮುದ್ರೆ



ಸಂಸ್ಥಾಪನ ಮುದ್ರೆ

Rarest Archiver



ಸನ್ನಿಧಾನ ಮುದ್ರೆ



ಸನ್ನಿರೋಧ ಮುದ್ರೆ



ಸಮ್ಮುಖ ಮುದ್ರೆ

ಅವಗುಂಠನ ಮುದ್ರೆ

ಈ ಮುದ್ರೆಗಳನ್ನು ತೋರಿಸಿದ ಅನಂತರ ಹರಿಯ ಸನ್ನಿಧಾನಕ್ಕಾಗಿ ಪ್ರತಿಮೆಯನ್ನು ಸ್ಪರ್ಶಿಸಿ ಯಥಾಶಕ್ತಿ **ಓಂ ಓಂ ನಮೋ ನಾರಾಯಣಾಯ ಓಮ್** ಎಂದು ಕನಿಷ್ಠ ಎಂಟು ಬಾರಿ ಮೂಲಮಂತ್ರವನ್ನು ಜಪಿಸಿ ಪೂಜೆ ಮುಗಿವ ತನಕ ಹರಿಯು ಲಕ್ಷ್ಮೀಸಹಿತನಾಗಿ ಸನ್ನಿಹಿತನಾಗಿರುವಂತೆ ಪ್ರಾರ್ಥಿಸಬೇಕು.[೫೧]

[ಅನಂತರ ಮುಖ್ಯಪ್ರಾಣನ ಪ್ರತಿಮೆಯಿದ್ದರೆ ಅದನ್ನು ಸ್ಪರ್ಶಿಸಿ 'ಓಂ ಹಂ ಹನುಮತೇ ನಮಃ' ಎಂಬ ಮಂತ್ರವನ್ನು ಯಥಾಶಕ್ತಿ ಜಪಿಸಬೇಕು. ಅನಂತರ ಗರುಡಾದಿಗಳ ಪ್ರತಿಮೆಯಿದ್ದರೆ ಆಯಾ ಪ್ರತಿಮೆಗಳನ್ನು ಸ್ಪರ್ಶಿಸಿ, 'ಓಂ ಗಂ ಗರುಡಾಯ ನಮಃ', 'ಓಂ ಶೇಂ ಶೇಷಾಯ ನಮಃ', 'ಓಂ ನಮಃ ಶಿವಾಯ', 'ಓಂ ಗಂ ಗಣಪತಯೇ ನಮಃ' ಎಂದು ಆಯಾ ದೇವತಾಮಂತ್ರಗಳನ್ನು ಜಪಿಸಬೇಕು.]

---

೫೧. ಸಾಲಿಗ್ರಾಮ ಮಾತ್ರವನ್ನು ಪೂಜಿಸುವವರು ಈ ಆವಾಹನವನ್ನು ಮಾಡಬೇಕಾಗಿಲ್ಲ. ಪ್ರತಿಮೆಗಳಿಗೆ ಮಾತ್ರವೇ ಆವಾಹನೆ. ಆವಾಹನಾದಿಮುದ್ರೆಗಳನ್ನು ಮೇಲೆ ಕೊಟ್ಟಿರುವ ಚಿತ್ರಗಳನ್ನು ನೋಡಿ ಕಲಿತುಕೊಳ್ಳಬಹುದು. ಇಷ್ಟಿದ್ದೂ ಹಿರಿಯರಿಂದ ಕೇಳಿ ಸರಿಯಾಗಿ ತಿಳಿದುಕೊಳ್ಳುವುದು ಉತ್ತಮ.

Rarest Archiver

ಅರ್ಘ್ಯಾದ್ಯುಪಚಾರ

ಓಂ ನಮೋ ನಾರಾಯಣಾಯ ಅರ್ಘ್ಯಂ ಸಮರ್ಪಯಾಮಿ । ಪಾದ್ಯಂ ಸಮರ್ಪಯಾಮಿ । ಆಚಮನೀಯಂ ಸಮರ್ಪಯಾಮಿ । ಮಧುಪರ್ಕಂ ಸಮರ್ಪಯಾಮಿ । ಪುನರಾಚಮನೀಯಂ ಸಮರ್ಪಯಾಮಿ । ಎಂದು ಭಕ್ತನ ಅತಿಥಿಯಾಗಿ ಬಂದ ಭಗವಂತ ಕೈ–ಕಾಲು ತೊಳೆದುಕೊಳ್ಳಲು ಅರ್ಘ್ಯ [ಕೈ–ಮೋರೆ ತೊಳೆಯುವ ನೀರು], ಪಾದ್ಯ [ಕಾಲುತೊಳೆಯುವ ನೀರು]ಗಳನ್ನಿತ್ತು ಆಚಮನಕ್ಕೆ ಶುದ್ಧಜಲವನ್ನೊದಗಿಸಿ ಕುಡಿಯಲು ಮಧುರವಾದ ಮಧುಪರ್ಕವೆಂಬ ಪಾನೀಯವನ್ನಿತ್ತು ಪುನರಾಚಮನಕ್ಕೆ ಜಲವನ್ನೀಯಬೇಕು. ಅನಂತರ ಸಾಲಿಗ್ರಾಮಗಳಿಗೆ ಅಭಿಷೇಕ ಮಾಡಬೇಕು.[೫೨]

ಅಭಿಷೇಕ

ಗಂಧೋದಕವನ್ನು ತುಂಬಿ ಪೂಜಿಸಿದ್ದ ಕಲಶದ ಜಲದಿಂದ ಶಾಂತಿಸೂಕ್ತ –ಪುರುಷಸೂಕ್ತ ಮುಂತಾದ ವೇದಮಂತ್ರಗಳನ್ನುಚ್ಚರಿಸುತ್ತಾ ಅಭಿಷೇಕಗೈಯಬೇಕು:

ಓಂ ನಮೋ ನಾರಾಯಣಾಯ ಸ್ನಾನಂ ಸಮರ್ಪಯಾಮಿ । ಓಂ ಶಂ ನೋ ಮಿತ್ರಃ ಶಂ ವರುಣಃ । ಶಂ ನೋ ಭವತ್ವರ್ಯಮಾ । ಶಂ ನ ಇಂದ್ರೋ ಬೃಹಸ್ಪತಿಃ । ಶಂ ನೋ ವಿಷ್ಣುರುರುಕ್ರಮಃ । ನಮೋ ಬ್ರಹ್ಮಣೇ । ನಮಸ್ತೇ ವಾಯೋ । ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ । ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ ವಕ್ತಾರಮವತು । ಅವತು ಮಾಮ್ । ಅವತು ವಕ್ತಾರಮ್ । ಓಂ ಶಾಂತಿಃ ಶಾಂತಿಃ ಶಾಂತಿಃ । ಸಹ ನಾವವತು । ಸಹ ನೌ ಭುನಕ್ತು । ಸಹ ವೀರ್ಯಂ ಕರವಾವಹೈ । ತೇಜಸ್ವಿ ನಾವಧೀತಮಸ್ತು । ಮಾ ವಿದ್ವಿಷಾವಹೈ । ಓಂ ಶಾಂತಿಃ ಶಾಂತಿಃ ಶಾಂತಿಃ । ಶಂ ನೋ ದೇವೀರಭಿಷ್ಟಯ ಆಪೋ ಭವಂತು ಪೀತಯೇ । ಶಂಯೋರಭಿ ಸ್ರವಂತು ನಃ ।

---

೫೨. ಪ್ರತಿಮೆಗಳಿಗೆ ದಿನವೂ ಅಭಿಷೇಕ ಮಾಡುವ ಸಂಪ್ರದಾಯವಿಲ್ಲ. ವರ್ಷಕ್ಕೊಮ್ಮೆ ಪಂಚಾಮೃತಗಳಿಂದ ಅಭಿಷೇಕ ಮಾಡುವುದು ರೂಢಿ. ಅದರಿಂದ ಪ್ರತಿಮೆಯಿದ್ದವರೂ ಸಾಲಿಗ್ರಾಮಗಳಿಗಷ್ಟೆ ಅಭಿಷೇಕಗೈದರೆ ಸಾಕು.

ಅರ್ಘ್ಯದಿಂದ ಷೋಡಶ ಉಪಚಾರಗಳ ಪ್ರಾರಂಭಃ ೧. ಅರ್ಘ್ಯ, ೨. ಪಾದ್ಯ, ೩. ಆಚಮನೀಯ, ೪. ಮಧುಪರ್ಕ, ೫. ಪುನರಾಚಮನೀಯ, ೬. ಸ್ನಾನ, ೭. ವಸ್ತ್ರ, ೮. ಭೂಷಣ, ೯. ಯಜ್ಞೋಪವೀತ, ೧೦. ಆಸನ, ೧೧. ಗಂಧ, ೧೨. ಪುಷ್ಪ, ೧೩. ಧೂಪ, ೧೪. ದೀಪ, ೧೫. ನೈವೇದ್ಯ, ೧೬. ನಮಸ್ಕಾರ –ಇವೇ ಹದಿನಾರು ಉಪಚಾರಗಳು.

Rarest Archiver

ಹೀಗೆ ಮೊದಲನೆಯ ಕಲಶಪಾತ್ರೆಯ ನೀರನ್ನು ಶಂಖದಿಂದ ಅಭಿಷೇಕಿಸಿ ಇನ್ನೊಂದು ಪೂರ್ಣಕಲಶದ ಶುದ್ಧಜಲವನ್ನು ಪುರುಷಸೂಕ್ತಮಂತ್ರಗಳನ್ನು ಉಚ್ಚರಿಸುತ್ತ ಘಂಟಾನಾದದೊಡನೆ ಪಾತ್ರದಿಂದಲೆ ಅಭಿಷೇಕಿಸಬೇಕು:

ಓಂ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್
ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ ದಶಾಂಗುಲಮ್ ॥[೫೩]

ಅಲಂಕಾರ

ಅಭಿಷೇಕದ ಅನಂತರ ಸಾಲಿಗ್ರಾಮಗಳನ್ನು ಸಂಪುಟದಲ್ಲಿ ತುಂಬಿ ಹೂ–ತುಲಸೀದಲಗಳನ್ನಿಕ್ಕಿ ಸಿಂಗರಿಸಬೇಕು. ಅನಂತರ ಭಗವಂತನಿಗೆ ಉಡುಗೆ–ತೊಡುಗೆಗಳನ್ನರ್ಪಿಸಬೇಕು: **ಓಂ ನಮೋ ನಾರಾಯಣಾಯ ವಸ್ತ್ರಯುಗ್ಮಂ ಸಮರ್ಪಯಾಮಿ ।**[೫೪] **ವಿಭೂಷಣಾನಿ ಸಮರ್ಪಯಾಮಿ । ಯಜ್ಞೋಪವೀತಂ ಸಮರ್ಪಯಾಮಿ । ಆಸನಂ ಸಮರ್ಪಯಾಮಿ । ಗಂಧಾನ್ ಸಮರ್ಪಯಾಮಿ । ಪುಷ್ಪಾಣಿ ಸಮರ್ಪಯಾಮಿ ।** –ಎಂದು ತುಲಸಿ, ಪುಷ್ಪಗಳಿಂದ ಭಗವಂತನನ್ನು, ಭಗವಂತನ ಪೀಠವನ್ನು ಅಲಂಕರಿಸಬೇಕು.

[ಅನಂತರ ಇತರ ದೇವತಾಪ್ರತೀಕಗಳಿಗೆ ಪ್ರತ್ಯೇಕ ಪಾತ್ರೆಯಲ್ಲಿ '**ಹಂ ಹನುಮತೇ ನಮಃ**', '**ಗಂ ಗರುಡಾಯ ನಮಃ**' ಎಂದು ಹಿಂದಿನಂತೆಯೆ ಮಂತ್ರಗಳನ್ನು ಹೇಳಿ, ಅಥವಾ ವಾಯುಸ್ತುತಿ, ಶಿವಸ್ತುತಿ ಮುಂತಾದ ಆಯಾ ದೇವತಾಸ್ತೋತ್ರಗಳನ್ನು ಜಪಿಸುತ್ತ ಸಾಳಗ್ರಾಮತೀರ್ಥವನ್ನು ಅಭಿಷೇಕಿಸಬೇಕು. ಮುಖ್ಯ ಪ್ರಾಣನಿಗೆ ಅಭಿಷೇಕಿಸಿದ ತೀರ್ಥವನ್ನು ಪ್ರತ್ಯೇಕ ಪಾತ್ರೆಯಲ್ಲಿ ತೆಗೆದಿಟ್ಟು ಉಳಿದ ದೇವತೆಗಳಿಗೆ ಅಭಿಷೇಕಿಸಿದ ತೀರ್ಥವನ್ನು ಅರ್ಘ್ಯಪಾತ್ರೆಗೆ ಚೆಲ್ಲಿಬಿಡಬೇಕು. ಹಾಗೆಯೆ ವಾದಿರಾಜರ ಅಥವಾ ರಾಘವೇಂದ್ರರ ವೃಂದಾವನವನ್ನು ಪೂಜಿಸುವವರು ಆ ವೃಂದಾವನಗಳಿಗು '**ಶ್ರೀವಾದಿರಾಜಗುರುಭ್ಯೋ ನಮಃ**', '**ಶ್ರೀರಾಘವೇಂದ್ರ–**

---

೫೩. ಪುರುಷಸೂಕ್ತದ ಪೂರ್ತಿಪಾಠವನ್ನು ಪರಿಶಿಷ್ಟದಲ್ಲಿ ಕಾಣಬಹುದು. ಅಭಿಷೇಕದ ಅವಧಿ ದೀರ್ಘವಾಗಿದ್ದಾಗ –ಸಂಪೂರ್ಣ ಸೂಕ್ತವನ್ನು ಪಠಿಸಬೇಕು. ಸೂಕ್ಷ್ಮವಾಗಿದ್ದಾಗ ಮೇಲಿನ ಕೆಲವೇ ಮಂತ್ರಗಳನ್ನು ಪಠಿಸಬಹುದು. ಮುಖ್ಯಪ್ರಾಣ ಗರುಡ ಮುಂತಾದ ಪ್ರತಿಮೆಗಳಿದ್ದರೆ ಆ ಪ್ರತಿಮೆಗಳಿಗೂ ಆಯಾ ದೇವತೆಗಳನ್ನು ಸ್ಮರಿಸಿಕೊಂಡು ತೀರ್ಥಾಭಿಷೇಕ ಮಾಡಬೇಕು.

೫೪. ವಸ್ತ್ರಾದಿಗಳ ಪ್ರತಿನಿಧಿಯಾಗಿ ಭಗವಂತನಿಗೆ ತುಲಸಿಯನ್ನು ಅರ್ಪಿಸಿ ಮಾನಸಿಕ ಅನುಸಂಧಾನದಿಂದಲೇ ಪೂಜಿಸುವುದು ರೂಢಿ. ಏನಿಲ್ಲವೆಂದರೆ ಜಲಬಿಂದುವಿನಿಂದ ಭಗವಂತನು ಪ್ರಸನ್ನನಾಗುತ್ತಾನೆ. ಹೊರಗಿನ ಸಾಧನೆಗಳಿಗಿಂತಲೂ ಮನಸ್ಸಿನ ಪಕ್ವತೆ ಮುಖ್ಯ ಎನ್ನುತ್ತದೆ ಆಚಾರ್ಯರು ಕೃಷ್ಣಾಮೃತಮಹಾರ್ಣವದಲ್ಲಿ ಉದ್ಧರಿಸಿದ ವಚನ:

ದ್ರವ್ಯಾಣಾಮಪ್ಯಭಾವೇ ತು ಸಲಿಲೇನಾಪಿ ಪೂಜಿತಃ ।
ಯೋ ದದಾತಿ ಸ್ವಕಂ ಸ್ಥಾನಂ ಸ ತ್ವಯಾ ಕಿಂ ನ ಪೂಜಿತಃ ॥

Rarest Archives

ಗುರುಭ್ಯೋ ನಮಃ' ಎಂದು ತೀರ್ಥವನ್ನಿತ್ತು, ತುಳಸೀನಿರ್ಮಾಲ್ಯವನ್ನರ್ಪಿಸಬೇಕು. ಮುಖ್ಯಪ್ರಾಣಾದಿಗಳ ಪ್ರತಿಮೆಗಳನ್ನು ಪೀಠದಲ್ಲಿ ಯಥಾಸ್ಥಾನದಲ್ಲಿಟ್ಟು ಪುಷ್ಪ–ನಿರ್ಮಾಲ್ಯಾದಿಗಳಿಂದ ಅಲಂಕರಿಸಬೇಕು.]

ಆವರಣಪೂಜೆ

ಪರಮಪುರುಷನಾದ ನಾರಾಯಣನು ಮಧ್ಯದಲ್ಲಿದ್ದು ಅವನ ಸುತ್ತಲೂ ಭಗವಂತನ ಲೀಲಾರೂಪಗಳು ಮತ್ತು ಪರಿವಾರಭೂತರಾದ ದೇವತೆಗಳು ತಾರತಮ್ಯಕ್ಕೆ ಅನುಗುಣವಾಗಿ ಸುತ್ತುವರಿದು ನಿಂತಿದ್ದಾರೆ ಎಂಬ ಅನುಸಂಧಾನದಿಂದ ಪೂಜಿಸುವುದೇ ಆವರಣಪೂಜೆಯೆನ್ನಿಸುತ್ತಿದೆ:

ಮಧ್ಯದಲ್ಲಿ: **ಓಂ ಪರಮಪುರುಷಾಯ ನಮಃ ।**

ಎಡಬಲಗಳಲ್ಲಿ: **ಓಂ ಲಕ್ಷ್ಮೀ ನಮಃ । ಓಂ ಧರಾಯೈ ನಮಃ ।**

ಅದರ ಹೊರ ಆವರಣದ ಪೀಠದ ನಾಲ್ಕು ದಿಕ್ಕುಗಳಲ್ಲಿ ಪೂರ್ವಾದಿ [ದೇವರ ಎದುರು ಭಾಗವೇ ಪೂರ್ವ] ಕ್ರಮದಿಂದ: **ಓಂ ಕೃದ್ಧೋಲ್ಕಾಯ ನಮಃ । ಓಂ ಮಹೋಲ್ಕಾಯ ನಮಃ । ಓಂ ವೀರೋಲ್ಕಾಯ ನಮಃ । ಓಂ ದ್ಯೂಲ್ಕಾಯ ನಮಃ ।** ಹೀಗೆ ದಿಕ್ಕುಗಳಲ್ಲಿ ಭಗವಂತನ ಈ ನಾಲ್ಕು ರೂಪಗಳನ್ನು ಚಿಂತಿಸಿ ಆಗ್ನೇಯಾದಿ ವಿದಿಕ್ಕುಗಳಲ್ಲಿ ಸಹಸ್ರೋಲ್ಕರೂಪವನ್ನು ಚಿಂತಿಸಬೇಕು: **ಓಂ ಸಹ–ಸ್ರೋಲ್ಕಾಯ ನಮಃ ।** ಅದರ ಹೊರಮೈಯ ಎರಡನೆಯ ಆವರಣದ ನಾಲ್ಕು ದಿಕ್ಕುಗಳಲ್ಲಿ: **ಓಂ ವಾಸುದೇವಾಯ ನಮಃ । ಓಂ ಸಂಕರ್ಷಣಾಯ ನಮಃ । ಓಂ ಪ್ರದ್ಯುಮ್ನಾಯ ನಮಃ । ಓಂ ಅನಿರುದ್ಧಾಯ ನಮಃ ।**

ಮೂರನೆಯ ಆವರಣದ ಅಂಗವಾಗಿ ಕೇಶವಾದಿ-ದ್ವಾದಶ-ಮೂರ್ತಿಗಳನ್ನು ದಿಕ್ಕುಗಳಲ್ಲಿ ಎರಡೆರಡು ಮೂರ್ತಿಗಳಂತೆಯೂ ವಿದಿಕ್ಕುಗಳಲ್ಲಿ ಒಂದೊಂದರಂತೆಯೂ ಧ್ಯಾನಿಸಬೇಕು:

ಪೂರ್ವ: **ಓಂ ಕೇಶವಾಯ ನಮಃ । ಓಂ ನಾರಾಯಣಾಯ ನಮಃ ।**

ಆಗ್ನೇಯ: **ಓಂ ಮಾಧವಾಯ ನಮಃ ।**

ದಕ್ಷಿಣ: **ಓಂ ಗೋವಿಂದಾಯ ನಮಃ । ಓಂ ವಿಷ್ಣವೇ ನಮಃ ।**

ನೈರ್ಋತ್ಯ: **ಓಂ ಮಧುಸೂದನಾಯ ನಮಃ ।**

ಪಶ್ಚಿಮ: **ಓಂ ತ್ರಿವಿಕ್ರಮಾಯ ನಮಃ । ಓಂ ವಾಮನಾಯ ನಮಃ ।**

ವಾಯವ್ಯ: **ಓಂ ಶ್ರೀಧರಾಯ ನಮಃ ।**

ಉತ್ತರ: **ಓಂ ಹೃಷೀಕೇಶಾಯ ನಮಃ । ಓಂ ಪದ್ಮನಾಭಾಯ ನಮಃ ।**

ಐಶಾನ್ಯ: **ಓಂ ದಾಮೋದರಾಯ ನಮಃ ।**

Rarest Archiver

ನಾಕನೆಯ ಆವರಣದಲ್ಲಿ ಇದೇ ತೆರನಾಗಿ ಸಂಕರ್ಷಣಾದಿಮೂರ್ತಿಗಳನ್ನು ಧ್ಯಾನಿಸಬೇಕು:

ಪೂರ್ವ: ಓಂ ಸಂಕರ್ಷಣಾಯ ನಮಃ । ಓಂ ವಾಸುದೇವಾಯ ನಮಃ ।
ಆಗ್ನೇಯ: ಓಂ ಪ್ರದ್ಯುಮ್ನಾಯ ನಮಃ ।
ದಕ್ಷಿಣ: ಓಂ ಅನಿರುದ್ಧಾಯ ನಮಃ । ಓಂ ಪುರುಷೋತ್ತಮಾಯ ನಮಃ ।
ನೈರ್ಋತ್ಯ: ಓಂ ಅಧೋಕ್ಷಜಾಯ ನಮಃ ।
ಪಶ್ಚಿಮ: ಓಂ ನಾರಸಿಂಹಾಯ ನಮಃ । ಓಂ ಅಚ್ಯುತಾಯ ನಮಃ ।
ವಾಯವ್ಯ: ಓಂ ಜನಾರ್ದನಾಯ ನಮಃ ।
ಉತ್ತರ: ಓಂ ಉಪೇಂದ್ರಾಯ ನಮಃ । ಓಂ ಹರಯೇ ನಮಃ ।
ಐಶಾನ್ಯ: ಓಂ ಶ್ರೀಕೃಷ್ಣಾಯ ನಮಃ ।

ಐದನೆಯ ಆವರಣದಲ್ಲಿ:

ಪೂರ್ವ: ಓಂ ಮತ್ಸ್ಯಾಯ ನಮಃ । ಓಂ ಕೂರ್ಮಾಯ ನಮಃ ।
ಆಗ್ನೇಯ: ಓಂ ವರಾಹಾಯ ನಮಃ ।
ದಕ್ಷಿಣ: ಓಂ ನಾರಸಿಂಹಾಯ ನಮಃ । ಓಂ ವಾಮನಾಯ ನಮಃ ।
ನೈರ್ಋತ್ಯ: ಓಂ ಭಾರ್ಗವಾಯ ನಮಃ ।
ಪಶ್ಚಿಮ: ಓಂ ರಾಮಾಯ ನಮಃ । ಓಂ ಕೃಷ್ಣಾಯ ನಮಃ ।
ವಾಯವ್ಯ: ಓಂ ಬುದ್ಧಾಯ ನಮಃ ।
ಉತ್ತರ: ಓಂ ಕಲ್ಕಿನೇ ನಮಃ । ಓಂ ಅನಂತಾಯ ನಮಃ ।
ಐಶಾನ್ಯ: ಓಂ ವಿಶ್ವರೂಪಾಯ ನಮಃ ।

ಆರನೆಯ ಆವರಣದಲ್ಲಿ ಹಿಂಬದಿಯಲ್ಲಿ: ಓಂ ಅನಂತಾಯ ನಮಃ ।
ಎಡಬದಿಯಲ್ಲಿ: ಓಂ ಬ್ರಹ್ಮಣೇ ನಮಃ ।
ಎದುರುಗಡೆ: ಓಂ ವಾಯವೇ ನಮಃ । ಓಂ ಗರುಡಾಯ ನಮಃ ।
ಬಲಬದಿಯಲ್ಲಿ: ಓಂ ಗಿರಿಶಾಯ ನಮಃ ।

ಆಯಾ ದೇವತೆಗಳ ಎಡಬದಿಯಲ್ಲಿ ಕ್ರಮವಾಗಿ ಮೇಲಿನ ದೇವತೆಗಳ ಪತ್ನಿಯರನ್ನು ಧ್ಯಾನಿಸಬೇಕು:

ಓಂ ವಾರುಣ್ಯೈ ನಮಃ । ಓಂ ಸರಸ್ವತ್ಯೈ ನಮಃ । ಓಂ ಭಾರತ್ಯೈ ನಮಃ । ಓಂ ಸುಪರ್ಣ್ಯೈ ನಮಃ । ಓಂ ಗಿರಿಜಾಯೈ ನಮಃ ।

Rarest Archiver

ಅದರ ಹೊರಗಿನ ಏಳನೆಯ ಆವರಣದಲ್ಲಿ ಇಂದ್ರಾದ್ಯಷ್ಟ ದಿಕ್ಪಾಲರನ್ನೂ ಮೇಲು-ಕೆಳಗಿನ ಅಧಿಪತಿಗಳಾದ ಬ್ರಹ್ಮಶೇಷರನ್ನೂ ಅವರವರ ದಿಕ್ಕುಗಳಲ್ಲಿ ಧ್ಯಾನಿಸಬೇಕು:

ಪೂರ್ವ: ಓಂ ಇಂದ್ರಾಯ ಸುರಾಧಿಪತಯೇ ವಿಷ್ಣುಪಾರ್ಷದಾಯ ನಮಃ ।
ಆಗ್ನೇಯ: ಓಂ ಅಗ್ನಯೇ ತೇಜೋಧಿಪತಯೇ " " ।
ದಕ್ಷಿಣ: ಓಂ ಯಮಾಯ ಧರ್ಮಾಧಿಪತಯೇ " " ।
ನೈರ್ಋತ್ಯ: ಓಂ ನಿರ್ಋತಯೇ ರಕ್ಷೋಧಿಪತಯೇ " " ।
ಪಶ್ಚಿಮ: ಓಂ ವರುಣಾಯ ಜಲಾಧಿಪತಯೇ " " ।
ವಾಯವ್ಯ: ಓಂ ವಾಯವೇ ಪ್ರಾಣಾಧಿಪತಯೇ " " ।
ಉತ್ತರ: ಓಂ ಸೋಮಾಯ ನಕ್ಷತ್ರಾಧಿಪತಯೇ " " ।
ಐಶಾನ್ಯ: ಓಂ ಈಶಾನಾಯ ವಿದ್ಯಾಧಿಪತಯೇ " " ।
ಕೆಳಗೆ: ಓಂ ಅನಂತಾಯ ನಾಗಾಧಿಪತಯೇ ವಿಷ್ಣುಪಾರ್ಷದಾಯ ನಮಃ ।
ಮೇಲೆ: ಓಂ ಬ್ರಹ್ಮಣೇ ಲೋಕಾಧಿಪತಯೇ ವಿಷ್ಣುಪಾರ್ಷದಾಯ ನಮಃ ।

ನಡುವಿನಲ್ಲಿ ಶ್ರೀಹರಿಯನ್ನು ಧ್ಯಾನಿಸಬೇಕು:

ತನ್ಮಧ್ಯೇ ಶ್ರೀಲಕ್ಷ್ಮೀನಾರಾಯಣಾಯ ನಮಃ ।

ಧೂಪ-ದೀಪ

ಧೂಪದ ತಟ್ಟೆಯಲ್ಲಿ ಸುಡುವ ಅಂಗಾರಗಳನ್ನು ತುಂಬಿ, ದನದ ತುಪ್ಪ-ಗುಗ್ಗುಳಾದಿಗಳಿಂದ ಸುವಾಸಿತಗೊಳಿಸಿ,

ಓಂ ನಮೋ ನಾರಾಯಣಾಯ ಧೂಪಂ ಸಮರ್ಪಯಾಮಿ ।

ಎಂದು ಮೂರು ಬಾರಿ ಧೂಪಪಾತ್ರೆಯನ್ನು ಪೀಠಕ್ಕೆ ಸುತ್ತುವರಿದು ಕೈತೊಳೆದು ಕೊಳ್ಳಬೇಕು. ಅನಂತರ ದೀಪಾರತಿಯನ್ನು-

ಓಂ ನಮೋ ನಾರಾಯಣಾಯ ದೀಪಂ ಸಮರ್ಪಯಾಮಿ ।

ಎಂದು ಭಗವಂತನಿಗೆ ಬೆಳಕು ತೋರಿಸಿ ಕೆಳಗಿಡಬೇಕು. ಧೂಪದೀಪಗಳ ಕಾಲದಲ್ಲಿ ಘಂಟಾನಾದವನ್ನು ಮಾಡದಿದ್ದರೆ ಅಂಥ ಪೂಜೆ ಆಸುರಪೂಜೆ ಎನಿಸುತ್ತದೆ.

ನೈವೇದ್ಯಸಮರ್ಪಣೆ[೫೫]

ದೇವರ ಎದುರು ಬಲಗಡೆ ನೆಲವನ್ನು ಸಾರಿಸಿ ನೈವೇದ್ಯದ ಸಾಮಗ್ರಿಗಳನ್ನು ಇಡಬೇಕು. ಅದನ್ನು ಶುದ್ಧಜಲದಿಂದ ಪ್ರೋಕ್ಷಿಸಿ:

---

೫೫. ಏಕಾದಶಿಯಂದು ಭಕ್ಷ್ಯಭೋಜ್ಯಾದಿಗಳನ್ನು ಸಮರ್ಪಿಸಬೆಕಿಲ್ಲ. ಆದುದರಿಂದ ಆ ದಿನ:

Rarest Archiver

ಓಂ ನಮೋ ನಾರಾಯಣಾಯ ।

ಎಂದು ಪದಾರ್ಥಗಳಿಗೆ ತುಲಸೀದಲಗಳನ್ನು ಹಾಕಿ ಪರಿಷೇಕ ಗೈಯಬೇಕು:

ಓಂ ಭೂರ್ಭುವಃ ಸ್ವಃ । ಸತ್ಯಂ ತ್ವರ್ತೇನ ಪರಿಷಿಂಚಾಮಿ । ಅಮೃತೋಪಸ್ತರಣಮಸಿ ।

ಎಂದು ಲಕ್ಷ್ಮೀದೇವಿಯೇ ಶ್ರೀಹರಿಗೆ ಆಪೋಶನವನ್ನೀಯುತ್ತಾಳೆಂಬ ಅನುಸಂಧಾನದಿಂದ ನೀರನ್ನು ಅರ್ಘ್ಯಪಾತ್ರೆಗೆ ಚೆಲ್ಲಬೇಕು.

ಓಂ ಪ್ರಾಣಾಯ ಸ್ವಾಹಾ । ಅಪಾನಾಯ ಸ್ವಾಹಾ । ವ್ಯಾನಾಯ ಸ್ವಾಹಾ । ಉದಾನಾಯ ಸ್ವಾಹಾ । ಸಮಾನಾಯ ಸ್ವಾಹಾ । ಓಂ ನಮೋ ನಾರಾಯಣಾಯ । ಸಶ್ರೀಕಾಯ ಸಪರಿವಾರಾಯ ಶ್ರೀಲಕ್ಷ್ಮೀನಾರಾಯಣಾಯ ನೈವೇದ್ಯಂ ಸಮರ್ಪಯಾಮಿ ।

ಎಂದು ದೇವರಿಗೆ ತುಲಸೀದಲಗಳನ್ನರ್ಪಿಸಬೇಕು. ಅನಂತರ–

ಮಧ್ಯೇ ಸ್ವಾದೂದಕಂ ಸಮರ್ಪಯಾಮಿ ।

ಎಂದು ಪಾನೀಯವನ್ನಿತ್ತು ಮುಖವನ್ನು ಮುಚ್ಚಿಕೊಂಡು ೧೦೮ ಬಾರಿ ಕೊನೆಗೆ ೧೨ ಬಾರಿಯಾದರೂ–

ಓಂ ಓಂ ನಮೋ ನಾರಾಯಣಾಯ ಓಮ್

ಎಂದು ಮೂಲಮಂತ್ರವನ್ನು ಜಪಿಸಬೇಕು. ಆಮೇಲೆ–

ಅಮೃತಾಪಿಧಾನಮಸಿ ।

ಎಂದು ಉತ್ತರಾಪೋಶನವಿತ್ತು **ಓಂ ನಮೋ ನಾರಾಯಣಾಯ** ಎಂದು ಪುಷ್ಪಾಂಜಲಿಯನ್ನರ್ಪಿಸಿ ಪುನಃ ಅರ್ಘ್ಯಪಾದ್ಯಾದಿಗಳನ್ನೀಯಬೇಕು:

ಓಂ ನಮೋ ನಾರಾಯಣಾಯ ಹಸ್ತಪ್ರಕ್ಷಾಲನಂ ಸಮರ್ಪಯಾಮಿ । ಗಂಡೂಷಂ ಸಮರ್ಪಯಾಮಿ । ಪಾದ್ಯಂ ಸಮರ್ಪಯಾಮಿ । ಅನಂತರ: **ಓಂ ನಮೋ ನಾರಾಯಣಾಯ ಮುಖವಾಸಃ ಸಮರ್ಪಯಾಮಿ । ತಾಂಬೂಲಂ ಸಮರ್ಪಯಾಮಿ ।** ಎಂದು ಕರ್ಪೂರಾದಿಗಳಿಂದ ಸುವಾಸಿತವಾದ ಎಲೆಅಡಿಕೆಯನ್ನು ಸಮರ್ಪಿಸಬೇಕು. ಅನಂತರ ಬೇರೆ ತಟ್ಟೆಯಲ್ಲಿ ಅಥವಾ ಎಲೆಯಲ್ಲಿ ಸ್ವಲ್ಪ ನೈವೇದ್ಯ ತೆಗೆದಿಟ್ಟು **ವಿಷ್ವಕ್‌ಸೇನಾಯ ಸ್ವಾಹಾ** ಎಂದು ವಿಷ್ವಕ್‌ಸೇನನಿಗೆ ಅರ್ಪಿಸಬೇಕು. ಅನಂತರ ನೈವೇದ್ಯಕ್ಕೆ ಪ್ರಾಣದೇವರ ತೀರ್ಥವನ್ನು ಹಾಕಿ ಘಂಟಾನಾದ

ಓಂ ನಮೋ ನಾರಾಯಣಾಯ ಫಲಗುಡಕ್ಷೀರಾದಿಮಹಾನೈವೇದ್ಯಂ ಸಮರ್ಪಯಾಮಿ ಎಂದಿಷ್ಟೇ ಮಂತ್ರಗಳಿಂದ ಹಾಲು-ಹಣ್ಣುಗಳನ್ನಷ್ಟೆ ಸಮರ್ಪಿಸಬೇಕು. ನಿತ್ಯವೂ ನೈವೇದ್ಯ ಸಮರ್ಪಣೆ ಮಾಡಲು ಅಶಕ್ಯವಾದಲ್ಲಿ ಹಣ್ಣು-ಕಾಯಿಗಳನ್ನು ಅಥವಾ ಬರಿಯ ಸ್ವಾದೂದಕವನ್ನಾದರೂ ಸಮರ್ಪಿಸಬೇಕು.

Rarest Archiver

ಪೂರ್ವಕವಾಗಿ ಸಮರ್ಪಣವನ್ನು ಮುಗಿಸಬೇಕು. ಅನಂತರ ಮತ್ತೊಮ್ಮೆ ಧೂಪ–ದೀಪಗಳನ್ನೆತ್ತಬೇಕು.

ಮಂಗಳನೀರಾಜನ

ಅನಂತರ ಮಂಗಳಾರತಿಯನ್ನು ಕೈಯಲ್ಲಿ ಎತ್ತಿಕೊಂಡು ಘಂಟಾನಾದ ಪೂರ್ವಕವಾಗಿ–

ಅರ್ಚತ ಪ್ರಾರ್ಚತ ಪ್ರಿಯಮೇಧಾಸೋ॥ ಅರ್ಚತ ।
ಅರ್ಚಂತು ಪುತ್ರಕಾ॥ ಉತ ಪುರಂ ನ ಧೃಷ್ಣ್ವರ್ಚತ ॥

ಶ್ರಿಯೇ ಜಾತಃ ಶ್ರಿಯ॥ ಆ ನಿರಿಯಾಯ
ಶ್ರಿಯಂ ವಯೋ ಜರಿತೃಭ್ಯೋ ದಧಾತಿ ।
ಶ್ರಿಯಂ ವಸಾನಾ॥ ಅಮೃತತ್ವಮಾಯನ್
ಭವಂತಿ ಸತ್ಯಾ ಸಮಿಥಾ ಮಿತದ್ರೌ ॥

ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ
ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಮ್ ।
ನಿಖಿಲಗುಣಗಣಾರ್ಣೋ ನಿತ್ಯನಿರ್ಮುಕ್ತದೋಷಃ
ಸರಸಿಜನಯನೋ॥ಸೌ ಶ್ರೀಪತಿರ್ಮಾನದೋ ನಃ ॥

ಓಂ ನಮೋ ನಾರಾಯಣಾಯ ಮಂಗಳನೀರಾಜನಂ ಸಮರ್ಪಯಾಮಿ ।

ಎಂದು ಭಗವಂತನಿಗೆ ಸುತ್ತುವರಿಸಿ ಕೆಳಗಿಟ್ಟು ಕೈತೊಳೆದುಕೊಳ್ಳಬೇಕು. ಆರತಿ ಸಂಖ್ಯೆ ನಮ್ಮ ಅನುಕೂಲತೆಯನ್ನು ಹೊಂದಿಕೊಂಡಿದೆ. ಭಗವಂತನಿಗೆ ಎಷ್ಟು ಆರತಿ ಬೆಳಗಿದರೆ ಏನು ತಪ್ಪು? ಈ ಧೂಪ–ದೀಪಾರತಿಗಳ ಕಾಲದಲ್ಲಿ ಆಚಾರ್ಯರ ತಾತ್ಪರ್ಯನಿರ್ಣಯದ ಶ್ಲೋಕಗಳನ್ನು ಪಠಿಸುತ್ತಾರೆ:

ಜಯತ್ಯಜೋ॥ಖಿಂಡಗುಣೋರುಮಂಡಲಃ
ಸದೋದಿತೋ ಜ್ಞಾನಮರೀಚಿಮಾಲೀ ।
ಸ್ವಭಕ್ತಹಾರ್ದೋಚ್ಚತಮೋನಿಹಂತಾ
ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ॥

ಜಯತ್ಯಜೋ॥ಕ್ಷೀಣಸುಖಾತ್ಮಬಿಂಬಃ
ಸ್ವೈಶ್ವರ್ಯಕಾಂತಿಪ್ರತತಃ ಸದೋದಿತಃ ।
ಸ್ವಭಕ್ತಸಂತಾಪದುರಿಷ್ಟಹಂತಾ
ರಾಮಾವತಾರೋ ಹರಿರೀಶಚಂದ್ರಮಾಃ ॥

ಜಯತ್ಯಸಂಖ್ಯೋರುಬಲಾಂಬುಪೂರೋ
ಗುಣೋಚ್ಚರತ್ನಾಕರ ಆತ್ಮವೈಭವಃ ।

Rarest Archiver

ಸದಾ ಸದಾತ್ಮಜ್ಞನದೀಭಿರಾಪ್ಯಃ
ಕೃಷ್ಣಾವತಾರೋ ಹರಿರೇಕಸಾಗರಃ ॥

ಮಂತ್ರಪುಷ್ಪ

ವೈಷ್ಣವಮಂತ್ರಗಳೆಂಬ ಹೂವುಗಳಿಂದ ಭಗವಂತನನ್ನರ್ಚಿಸುವುದೇ ಮಂತ್ರ ಪುಷ್ಪ. ಅದರಿಂದ ಯಾವ ವೈಷ್ಣವಮಂತ್ರಗಳಿಂದಲೂ ಮಂತ್ರಪುಷ್ಪವನ್ನರ್ಪಿಸ ಬಹುದು:

ಯೋ ನಃ ಪಿತಾ ಜನಿತಾ ಯೋ ವಿಧಾತಾ
ಧಾಮಾನಿ ವೇದ ಭುವನಾನಿ ವಿಶ್ವಾ ।
ಯೋ ದೇವಾನಾಂ ನಾಮಧಾ ಏಕ ಏವ
ತಂ ಸಂಪ್ರಶ್ನಂ ಭುವನಾ ಯಂತ್ಯನ್ಯಾ ಸ್ವಸ್ತಿ ॥

ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯೋ
ನಮೋ ಯುವಭ್ಯೋ ನಮ ಆಶಿನೇಭ್ಯಃ ।
ಯಜಾಮ ದೇವಾನ್ ಯದಿ ಶಕ್ನವಾಮ
ಮಾ ಜ್ಯಾಯಸಃ ಶಂಸಮಾ ವೃಕ್ಷಿ ದೇವಾಃ ॥

ಓಂ ನಮೋ ನಾರಾಯಣಾಯ ಮಂತ್ರಪುಷ್ಪಂ ಸಮರ್ಪಯಾಮಿ ॥

ಅನೂಪಚಾರ[೫೬]

ಅನಂತರ ಭಗವಂತನಿಗೆ ಸರ್ವರಾಜೋಪಚಾರವನ್ನರ್ಪಿಸುವ ಅನುಸಂಧಾನ ದಿಂದ ತುಲಸೀದಲಗಳನ್ನರ್ಪಿಸಬೇಕು:

ಓಂ ನಮೋ ನಾರಾಯಣಾಯ ದರ್ಪಣಂ ಸಮರ್ಪಯಾಮಿ । ಛತ್ರಂ ಸಮರ್ಪಯಾಮಿ । ಚಾಮರಂ ಸಮರ್ಪಯಾಮಿ । ಪಾದುಕೇ ಸಮರ್ಪಯಾಮಿ । ನೃತ್ಯಂ ಸಮರ್ಪಯಾಮಿ । ಗೀತಂ ಸಮರ್ಪಯಾಮಿ । ವಾದ್ಯಂ ಸಮರ್ಪಯಾಮಿ । ಸ್ತೋತ್ರಂ ಸಮರ್ಪಯಾಮಿ । ಸಮಸ್ತ-ರಾಜೋಪಚಾರಾನ್ ಸಮರ್ಪಯಾಮಿ ॥

ಶಂಖಭ್ರಮಣ

ಅನಂತರ ಶಂಖದಲ್ಲಿ ನೀರು ತುಂಬಿ–

---

೫೬. ಹದಿನಾರು ಉಪಚಾರಗಳು ಹೇಗೆ ಹಾಗೆ ಆರು ಅನೂಪಚಾರಗಳು: ಮುಖವಾಸ, ತಾಂಬೂಲ, ದರ್ಪಣ, ಛತ್ರ, ಚಾಮರ ಮತ್ತು ಪಾದುಕೆಗಳು. ಮೊದಲ ಎರಡು –ಮುಖವಾಸ ಮತ್ತು ತಾಂಬೂಲ– ನೈವೇದ್ಯಸಮರ್ಪಣದ ಜತೆಗೆ ಬಂದಿದೆ. ಉಳಿದ ನಾಕು ಇಲ್ಲಿ ಬಂದಿವೆ.

Rarest Archiver

ಓಂ ನಮೋ ನಾರಾಯಣಾಯ । ಇಮಾ ಆಪಃ ಶಿವಾಃ ಶುದ್ಧಾಃ ಶೀತಲಾಃ ಸಂತು ಪೂತಾಃ ಸೂರ್ಯಸ್ಯ ರಶ್ಮಿಭಿಃ ।

ಎಂದು ಅಭಿಮಂತ್ರಿಸಿ ಆ ಶಂಖಿವನ್ನು ಭಗವಂತನಿಗೆ ಮೂರು ಬಾರಿ ಸುತ್ತು ವರಿಯಬೇಕು. ಇದರಿಂದ ದೈಹಿಕವಾದ ಸ್ಪರ್ಶದೋಷ ಮುಂತಾದ ಎಲ್ಲ ಪಾತಕಗಳೂ ಪರಿಹಾರವಾಗುವವು ಎಂದು ಪ್ರಾಜ್ಞರ ಮತ. ಈ ತೀರ್ಥವನ್ನು ಬೇರೊಂದು ಪಾತ್ರೆಯಲ್ಲಿ ಹಾಕಿಡಬೇಕು.

ಕೃಷ್ಣಾರ್ಪಣ

ಅನಂತರ ನಾವು ಮಾಡಿದ ಕರ್ಮಗಳಲ್ಲಿ ಏನಾದರೂ ನ್ಯೂನಾಧಿಕ್ಯಗಳಿದ್ದರೆ ಕ್ಷಮಿಸಿ ಭಗವಂತ ಅವನ್ನು ಸ್ವೀಕರಿಸಿ ಪ್ರೀತನಾಗಲಿ ಎಂದು ಪ್ರಾರ್ಥಿಸಿ ಎಲ್ಲ ಕರ್ಮಗಳನ್ನೂ ಅವನಿಗೆ ಅರ್ಪಿಸಬೇಕು:

ಯಸ್ಯ ಸ್ಮೃತ್ಯಾ ಚ ನಾಮೋಕ್ತ್ಯಾ ತಪೋಯಜ್ಞಕ್ರಿಯಾದಿಷು ।
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಮ್ ॥

ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ ।
ಯತ್ ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ತೇ ॥

ಅನಯಾ ಯಥಾಸಂಭವಂ ಮಯಾ ಕೃತಯಾ ಭಗವತ್ಪೂಜಯಾ ಆಚಾರ್ಯಹೃದಯನಿವಾಸೀ ನಾರಾಯಣಃ ಪ್ರೀಯತಾಮ್ ।

ಎಂದು ಪಾತ್ರೆಗೆ ಪುಷ್ಪೋದಕವನ್ನು ಸುರಿಯಬೇಕು. ಅನಂತರ ರಮಾ-ಬ್ರಹ್ಮಾದಿ ಸಕಲಸುರರಿಗೆ ಭಗವತ್ಪ್ರಸಾದವನ್ನರ್ಪಿಸಬೇಕು:

ರಮಾಬ್ರಹ್ಮಾದಯೋ ದೇವಾಃ ಸನಕಾದ್ಯಾಃ ಶುಕಾದಯಃ ।
ಶ್ರೀನೃಸಿಂಹಪ್ರಸಾದೋಽಯಂ ಸರ್ವೇ ಗೃಹ್ಣಂತು ವೈಷ್ಣವಾಃ ॥

ಅನಂತರ ಭಗವಂತನನ್ನು ಪ್ರತಿಮೆಯಿಂದ ತನ್ನ ಹೃದಯಕಮಲದಲ್ಲಿ ಆವಾಹಿಸಿಕೊಳ್ಳಬೇಕು.

ಏಹ್ಯೇಹಿ ಪ್ರತಿಮಾಸ್ಥಿತ ಭಗವನ್ ಸಶ್ರೀಕಂ ಸಪರಿವಾರಂ ಭವಂತಂ ಮಮ ಹೃತ್‌ಕಮಲೇ ಪುನರಾವಾಹಯಾಮಿ ।

[೫೭] ಯಾಚೇಽಹಂ ತ್ವಾಂ ಹೃಷೀಕೇಶ ನಮಾಮಿ ಪುರುಷೋತ್ತಮ ।
ಹೃದಯೇ ಕುರು ಸಂವಾಸಂ ಶ್ರಿಯಾ ಸಹ ಜಗತ್‌ಪತೇ ॥

---

೫೭. ಕೊನೆಯದಾಗಿ ನಾವು ಪ್ರಾರ್ಥಿಸುವ ಮಂತ್ರಗಳ ತಾತ್ಪರ್ಯ ಈ ತೆರನಾಗಿದೆ:
'ಪರಮಪುರುಷನೆ, ನಿನಗೆ ನಮಿಸಿ ಬೇಡಿಕೊಳ್ಳುತ್ತೇನೆ. ರಮೆಯರಸನೆ, ಬಾ. ರಮೆಯೊಡನೆ ನನ್ನ ಬಗೆಯಲ್ಲಿ ಬೆಳಗು'. 'ನಾನು ಏನನ್ನೂ ಮಾಡಿಲ್ಲ. ಹರಿಯ ಪೂಜೆ

Rarest Archiver

ನಾಹಂ ಕರ್ತಾ ಹರಿಃ ಕರ್ತಾ ತತ್‌ಪೂಜಾ ಕರ್ಮ ಚಾಖಿಲಮ್ ।
ತಥಾಽಪಿ ಮತ್‌ಕೃತಾ ಪೂಜಾ ತತ್‌ಪ್ರಸಾದೇನ ನಾನ್ಯಥಾ ॥

ನ ಜಾನೇ ಕರ್ಮ ಯತ್‌ಕಿಂಚಿನ್ನಾಪಿ ವೈದಿಕಲೌಕಿಕೇ ।
ನ ನಿಷೇಧವಿಧೀ ವಿಷ್ಣೋ ತವ ದಾಸೋಽಸ್ಮಿ ಕೇವಲಮ್ ॥

ಮಾದೃಶೋ ನ ಪರಃ ಪಾಪೀ ತ್ವಾದೃಶೋ ನ ದಯಾಪರಃ ।
ಇತಿ ಮತ್ವಾ ಜಗನ್ನಾಥ ರಕ್ಷ ಮಾಂ ಗರುಡಧ್ವಜ ॥

ಎಂದು ಪ್ರದಕ್ಷಿಣ ಬಂದು ನಮಸ್ಕರಿಸಬೇಕು.

* * *

ಯನ್ನು ಹರಿಯೆ ಮಾಡಿಸಿಕೊಂಡನು. ನಾನು ಅವನ ಕರುಣೆದೋರಿದತ್ತ ಚಲಿಸುವ ಕೀಲುಬೊಂಬೆ'. 'ವೈದಿಕವೂ ಲೌಕಿಕವೂ ನನಗೆ ತಿಳಿದಿಲ್ಲ. ಮಾಡಬೇಕಾದ್ದನ್ನು-ಮಾಡಬಾರದ್ದನ್ನು ನಾನರಿಯೆ. ನಾನು ನಿನ್ನ ದಾಸ. ನೀನು ನಡೆಸಿದಂತೆ ನಡೆವವನು; ಇಟ್ಟಂತೆ ಇರುವವನು'. 'ನನ್ನಂಥಾ ಪಾತಕಿಯೂ ಇಲ್ಲ. ನಿನ್ನಂಥಾ ಕರುಣಾಳುವೂ ಇಲ್ಲ. ಆದ್ದರಿಂದ ನನ್ನನ್ನು ಸಲಹುವ ಹೊಣೆ ನಿನ್ನದು'.

Rarest Archiver

೫೮ ವೈಶ್ವದೇವ ಮತ್ತು ಬಲಿಹರಣ

ಸಂಕಲ್ಪ: ೫೯ ಪಂಚಸೂನಾಪ್ರಾಯಶ್ಚಿತ್ತಾರ್ಥಂ ವೈಶ್ವದೇವಾಖ್ಯಂ ಕರ್ಮ ಕರಿಷ್ಯೇ । ಓಂ ಅಗ್ನಯೇ ನಮಃ । ಓಂ ಭೂರ್ಭುವಃ ಸುವರೋಮ್ । ಎಂದು ಅಕ್ಷತೆ ಗಳನ್ನು ಚೆಲ್ಲಿ ಅಗ್ನಿಪ್ರತಿಷ್ಠೆ ಮಾಡಬೇಕು. ಅನಂತರ– ಅದಿತೇಽನುಮನ್ಯಸ್ವ । ಅನು-ಮತೇಽನುಮನ್ಯಸ್ವ । ಸರಸ್ವತೇಽನುಮನ್ಯಸ್ವ । ದೇವ ಸವಿತಃ ಪ್ರಸುವ– ಎಂದು ಮಂತ್ರಜಲದಿಂದ ಸುತ್ತುವರಿದು ಪ್ರಾರ್ಥಿಸಬೇಕು:

ಅಗ್ನಿಂ ಪ್ರಜ್ವಲಿತಂ ವಂದೇ ಜಾತವೇದಂ ಹುತಾಶನಮ್ ।
ಸುವರ್ಣವರ್ಣಮನಲಂ ಸಮಿದ್ಧಂ ವಿಶ್ವತೋಮುಖಮ್ ॥

ಅಂಗಾರವರ್ಣಮಭಿತೋಽಂಡಬಹಿಃ ಪ್ರಭಾಭಿಃ
ವ್ಯಾಪ್ತಂ ಪರಶ್ವಧಧನುರ್ಧರಮೇಕವೀರಮ್ ।
ಧ್ಯಾಯೇದಜೇಶಪುರುಹೂತಮುಖೈಃ ಸ್ತುವದ್ಭಿಃ
ಆವೀತಮಾತ್ಮಪದವೀಂ ಪ್ರತಿಪಾದಯಂತಮ್ ॥

ಓಂ ನಮೋ ನಾರಾಯಣಾಯ । ಶ್ರೀಪರಶುರಾಮಂ ಅಗ್ನಿಮಧ್ಯೇ ಆವಾಹಯಾಮಿ । ಎಂದು ಆವಾಹಿಸಿ ಅರ್ಘ್ಯಾದಿಗಳಿಂದ ಉಪಚರಿಸಬೇಕು:

ಓಂ ಪರಶುರಾಮಾಯ ನಮಃ । ಅರ್ಘ್ಯಾದಿಷೋಡಶೋಪಚಾರಾನ್ ಸಮರ್ಪಯಾಮಿ । ಅನಂತರ ವ್ಯಾಹೃತಿಮಂತ್ರಗಳಿಂದ ನಾಲ್ಕು ತುಪ್ಪದ ಆಹುತಿಗಳನ್ನೀಯಬೇಕು:

---

೫೮. ಏಕಾದಶಿಯಂದು ವೈಶ್ವದೇವ-ಬಲಿಹರಣ ಮಾಡಬಾರದು.

೫೯. ಪಂಚಸೂನಾಗಳು ಅಂದರೆ ಪಾಕಕ್ಕಾಗಿ ನಾವು ಮಾಡುವ ಐದು ವಿಧದ ಹಿಂಸೆಗಳು. ಮೊದಲು ಶಾಕಗಳನ್ನು ಕಡಿಯುತ್ತೇವೆ; ಆಮೇಲೆ ಅರೆಯುತ್ತೇವೆ; ಹುರಿಯುತ್ತೇವೆ; ಬೇಯಿಸುತ್ತೇವೆ; ಸುಡುತ್ತೇವೆ. ಇವು ಐದು ಸೂನಾಗಳು. ಇದರಿಂದ ಆಗತಕ್ಕ ಪ್ರಾಣಿ ಹಿಂಸೆಗಳಿಂದ ಬರುವ ಪಾಪಪರಿಹಾರಕ್ಕಾಗಿ ದೇವತೆಗಳನ್ನು ಪ್ರಾರ್ಥಿಸುವುದು ಈ ವೈಶ್ವದೇವದ ಹಿನ್ನೆಲೆ. ಈ ವೈಶ್ವದೇವ-ಬಲಿಹರಣಗಳನ್ನು ಗೃಹಸ್ಥರು ಮಾತ್ರವೇ ಮಾಡ ಬೇಕು. ಬ್ರಹ್ಮಚಾರಿಗಳು ಅಗ್ನಿಕಾರ್ಯವನ್ನು ಮಾತ್ರವೇ ಮಾಡಬೇಕು. ಈ ಮಾತನ್ನು ಆಚಾರ್ಯರು ಹೀಗೆ ಹೇಳಿದ್ದಾರೆ:

ವೈಶ್ವದೇವಂ ಬಲಿಂ ಚೈವ ಕಾರ್ಯಂ ನಿತ್ಯಂ ತದರ್ಪಣಮ್ ।
ಇಷ್ಟಂ ದತ್ತಂ ಹುತಂ ಜಪ್ತಂ ಪೂರ್ತಂ ಯಚ್ಚಾತ್ಮನಃ ಪ್ರಿಯಮ್ ।
ದಾರಾನ್ ಸುತಾನ್ ಪ್ರಿಯಾನ್ ಪ್ರಾಣಾನ್ ಯತ್‌ಪರಸ್ಮೈ ನಿವೇದಯೇತ್ ॥
ಏಷ ನಿತ್ಯಃ ಸಮಾಚಾರೋ ಗೃಹಿಣೋ ವನಿನಸ್ತಥಾ ।
ವೈಶ್ವದೇವಂ ಬಲಿಂ ದಂತಧಾವನಂ ಚಾಪ್ಯತೇ ವಟೋಃ ।
ಸಮಿದ್ಧೋಮೋ ವಟೋಶ್ಚೈವ ಸ್ಮೃತ್ವಾ ವಿಷ್ಣುಂ ಹುತಾಶನೇ ॥

Rarest Archiver

ಓಂ ಭೂಃ ಸ್ವಾಹಾ ಅಗ್ನಯೇ ಅನಿರುದ್ಧಾಯೇದಂ ನ ಮಮ । ಓಂ ಭುವಃ ಸ್ವಾಹಾ ವಾಯವೇ ಪ್ರದ್ಯುಮ್ನಾಯೇದಂ ನ ಮಮ । ಓಂ ಸ್ವಃ ಸ್ವಾಹಾ ಸೂರ್ಯಾಯ ಸಂಕರ್ಷಣಾಯೇದಂ ನ ಮಮ । ಓಂ ಭೂರ್ಭುವಃ ಸ್ವಃ ಸ್ವಾಹಾ ಪ್ರಜಾಪತಯೇ ಶ್ರೀವಾಸುದೇವಾಯೇದಂ ನ ಮಮ । ಅನಂತರ ಕೆಳಗಿನ ಮಂತ್ರಗಳಿಂದ ಅನ್ನಾಹುತಿ ಕೊಡಬೇಕು:

ಓಂ ನಮೋ ನಾರಾಯಣಾಯೋಂ ಸ್ವಾಹಾ ನಾರಾಯಣಾಯೇದಂ ನ ಮಮ [ಎಂದು ಎಂಟು ಬಾರಿ ಆಹುತಿ ನೀಡಬೇಕು].

ಓಂ ವಿಷ್ಣವೇ ನಮೋಂ ಸ್ವಾಹಾ ವಿಷ್ಣವ ಇದಂ ನ ಮಮ । [ಎಂದು ಆರು ಬಾರಿ];

ಓಂ ಕ್ಲೀಂ ಕೃಷ್ಣಾಯ ನಮೋಂ ಸ್ವಾಹಾ ಕೃಷ್ಣಾಯೇದಂ ನ ಮಮ । [ಎಂದು ಆರು ಬಾರಿ ಹವಿಸ್ಸನ್ನರ್ಪಿಸಬೇಕು].

ಪುನಃ ವ್ಯಾಹೃತಿಮಂತ್ರಗಳಿಂದ ತುಪ್ಪದ ನಾಲ್ಕು ಆಹುತಿಗಳು:

ಓಂ ಭೂಃ ಸ್ವಾಹಾ ಅಗ್ನಯೇ ಅನಿರುದ್ಧಾಯೇದಂ ನ ಮಮ । ಓಂ ಭುವಃ ಸ್ವಾಹಾ ವಾಯವೇ ಪ್ರದ್ಯುಮ್ನಾಯೇದಂ ನ ಮಮ । ಓಂ ಸ್ವಃ ಸ್ವಾಹಾ ಸೂರ್ಯಾಯ ಸಂಕರ್ಷಣಾಯೇದಂ ನ ಮಮ । ಓಂ ಭೂರ್ಭುವಃ ಸ್ವಃ ಸ್ವಾಹಾ ಪ್ರಜಾಪತಯೇ ಶ್ರೀವಾಸುದೇವಾಯೇದಂ ನ ಮಮ । ಪುನಃ ಪರಿಷೇಕಃ ಅದಿತೇಽನ್ವಮಂಸ್ಥಾಃ । ಅನುಮತೇಽನ್ವಮಂಸ್ಥಾಃ । ಸರಸ್ವತೇಽನ್ವ–ಮಂಸ್ಥಾಃ । ದೇವ ಸವಿತಃ ಪ್ರಾಸಾವೀಃ । ಅಗ್ನ್ಯಂತರ್ಗತಂ ಪರಶುರಾಮಂ ಹೃದಿ ಪ್ರತ್ಯಾರೋಪಯಾಮಿ । ಅನಂತರ ಹಿಂದಿನಂತೆಯೇ: .....ಗೋತ್ರ .....ಪ್ರವರಾನ್ವಿತಃ .....ಶಾಖಾಧ್ಯಾಯೀ .....ಶರ್ಮಾಽಹಂ ಭೋ ಅಭಿವಾದಯೇ । ಎಂದು ಅಭಿವಾದನಮಾಡಿ–

ಅನೇನ ವೈಶ್ವದೇವಕರ್ಮಣಾ ಭಗವಾನ್ ಪರಶುರಾಮಃ ಪ್ರೀಯತಾಮ್ ।
ಎಂದು ಕೃಷ್ಣಾರ್ಪಣಮಾಡಬೇಕು: ಶ್ರೀಕೃಷ್ಣಾರ್ಪಣಮಸ್ತು ॥

ಅನಂತರ ಮನೆಯಂಗಣದಲ್ಲಿ ಎಲ್ಲ ಭೂತಗಳೂ ತೃಪ್ತಿ ಹೊಂದುವಂತೆ ಕೆಳಗಿನ ಮಂತ್ರದಿಂದ ಬಲಿಯನ್ನು ಚೆಲ್ಲಬೇಕು:

ಯೇ ಭೂತಾಃ ಪ್ರಚರಂತಿ ದಿವಾನಕ್ತಂ
ಬಲಿಮಿಚ್ಛಂತೋ ವಿತುದಸ್ಯ ಪ್ರೇಷ್ಯಾಃ ।
ತೇಭ್ಯೋ ಬಲಿಂ ಪುಷ್ಟಿಕಾಮೋ ಹರಾಮಿ
ಮಯಿ ಪುಷ್ಟಿಂ ಪುಷ್ಟಿಪತಿರ್ದದಾತು ಸ್ವಾಹಾ[೬೦] ॥

---

೬೦. ಬ್ರಹ್ಮಚಾರಿಗಳು ತಮ್ಮ ನಿತ್ಯಾಹ್ನಿಕದ ಅನಂತರ ವೈಶ್ವದೇವರ ಬದಲು ಅಗ್ನಿಕಾರ್ಯ ಮಾಡಬೇಕು. ಅದರ ಕ್ರಮ ಮುಂದಿನ ಪುಟದಲ್ಲಿ ಬಂದಿದೆ:

Rarest Archiver

[ಬ್ರಹ್ಮಚಾರಿಗಳ ಅಗ್ನಿಕಾರ್ಯ

ಸಂಕಲ್ಪಃ ಅಗ್ನ್ಯಂತರ್ಗತಶ್ರೀಪರಶುರಾಮಪ್ರೀತ್ಯರ್ಥಂ ಅಗ್ನಿಕಾರ್ಯಂ ಕರಿಷ್ಯೇ ।

ಆವಾಹನಃ ಓಂ ಭೂರ್ಭುವಃ ಸುವರೋಂ ಮದ್ಹೃದಿಷ್ಠಿತಮಗ್ನಿಂ ಸ್ಥಂಡಿಲ–
ಮಧ್ಯೇ ಆವಾಹಯಾಮಿ ।

ಧ್ಯಾನಃ ಅಗ್ನಿಂ ಪ್ರಜ್ವಲಿತಂ ವಂದೇ ಜಾತವೇದಂ ಹುತಾಶನಮ್ ।
ಸುವರ್ಣವರ್ಣಮನಲಂ ಸಮಿದ್ಧಂ ವಿಶ್ವತೋಮುಖಮ್ ॥

ಪರಿಷೇಕಃ ಓಂ ಅದಿತೇಽನುಮನ್ಯಸ್ವ । ಅನುಮತೇಽನುಮನ್ಯಸ್ವ ।
ಸರಸ್ವತೇಽನುಮನ್ಯಸ್ವ । ದೇವ ಸವಿತಃ ಪ್ರಸುವ ॥

ಸಮಿತ್ತಿನಿಂದ ಹೋಮಃ ಓಂ ಭೂಃ ಸ್ವಾಹಾ ಅಗ್ನಯೇ ಅನಿರುದ್ಧಾಯೇದಂ ನ
ಮಮ । ಓಂ ಭುವಃ ಸ್ವಾಹಾ ವಾಯವೇ ಪ್ರದ್ಯುಮ್ನಾಯೇದಂ ನ
ಮಮ । ಓಂ ಸುವಃ ಸ್ವಾಹಾ ಸೂರ್ಯಾಯ ಸಂಕರ್ಷಣಾ–
ಯೇದಂ ನ ಮಮ । ಓಂ ಭೂರ್ಭುವಃ ಸುವಃ ಸ್ವಾಹಾ ಪ್ರಜಾ–
ಪತಯೇ ವಾಸುದೇವಾಯೇದಂ ನ ಮಮ ।

ಉತ್ತರ ಪರಿಷೇಕಃ ಅದಿತೇಽನ್ವಮಂಸ್ಥಾಃ । ಅನುಮತೇಽನ್ವಮಂಸ್ಥಾಃ । ಸರಸ್ವ–
ತೇಽನ್ವ ಮಂಸ್ಥಾಃ । ದೇವ ಸವಿತಃ ಪ್ರಾಸಾವೀಃ ।

ಅನಂತರ ನಿಂತು ಪ್ರಾರ್ಥಿಸಬೇಕುಃ ಯತ್ತೇಽ ಅಗ್ನೇ ತೇಜಸ್ತೇನಾಹಂ ತೇಜಸ್ವೀ
ಭೂಯಾಸಮ್ । ಯತ್ತೇಽ ಅಗ್ನೆ ವರ್ಚಸ್ತೇನಾಹಂ ವರ್ಚಸ್ವೀ
ಭೂಯಾಸಮ್ । ಯತ್ತೇಽ ಅಗ್ನೇ ಹರಸ್ತೇನಾಹಂ ಹರಸ್ವೀ
ಭೂಯಾಸಮ್ । ಓಂ ಮಾ ನಃ ಸ್ತೋಕೇ ತನಯೇ ಮಾ ಽ
ಆಯುಷಿ ಮಾ ನೋ ಗೋಷು ಮಾ ನೋಽ ಅಶ್ವೇಷು ರೀರಿಷಃ ।
ವೀರಾನ್ಮಾ ನೋ ರುದ್ರ ಭಾಮಿತೋ ವಧೀರ್ಹವಿಷ್ಮಂತೋ
ನಮಸಾ ವಿಧೇಮ ತೇ ।

ಅನಂತರ ಹುತಭಸ್ಮಧಾರಣಮಾಡಿ ಕೃಷ್ಣಾರ್ಪಣ ಗೈಯಬೇಕುಃ
ಅನೇನ ಪ್ರಾತರಗ್ನಿಕಾರ್ಯಕರ್ಮಣಾ ಅಗ್ನ್ಯಂತರ್ಗತಃ ಪರಶು–
ರಾಮಃ ಪ್ರೀಯತಾಮ್ । ಓಂ ಭೂರ್ಭುವಃ ಸ್ವರೋಮ್ ।
ಸ್ಥಂಡಿಲಸ್ಥಮಗ್ನಿಂ ಹೃದಿ ಪ್ರತ್ಯಾರೋಪಯಾಮಿ ।

ಎಂದು ಬಲಗೈಯಿಂದ ಎದೆಯನ್ನು ಮುಟ್ಟಿಕೊಳ್ಳಬೇಕು.]

* * *

Rarest Archiver

ಭೋಜನ

ಅನಂತರ ಶಂಖತೀರ್ಥವನ್ನು ಪ್ರೋಕ್ಷಿಸಿಕೊಂಡು ತುಳಸೀದಲ ಮಿಶ್ರಿತವಾದ ತೀರ್ಥವನ್ನು ಮೂರು ಬಾರಿ ತೆಗೆದುಕೊಂಡು ಅತಿಥಿಗಳೊಡನೆ–ಭೃತ್ಯವರ್ಗದೊಡನೆ[೬೧] ಭೋಜನ ಮಾಡಬೇಕು.

ಪ್ರೋಕ್ಷಣಃ **ಓಂ ಭೂರ್ಭುವಃ ಸ್ವಃ ।**

ಪರಿಷೇಕಃ **ಓಂ ಸತ್ಯಂ ತ್ವರ್ತೇನ ಪರಿಷಿಂಚಾಮಿ ।**

[ರಾತ್ರಿಯಲ್ಲಾದರೆ: **ಋತಂ ತ್ವಾ ಸತ್ಯೇನ ಪರಿಷಿಂಚಾಮಿ**]

ಚಿತ್ರಾಹುತಿಃ **ಚಿತ್ರಾಯ ಸ್ವಾಹಾ । ಚಿತ್ರಗುಪ್ತಾಯ ಸ್ವಾಹಾ । ಯಮಾಯ ಸ್ವಾಹಾ । ಯಮಧರ್ಮರಾಜಾಯ ಸ್ವಾಹಾ । ಸರ್ವೇಭ್ಯೋ ಭೂತೇಭ್ಯಃ ಸ್ವಾಹಾ ।**

ಅನಂತರಃ **ಅಂತಶ್ಚರತಿ ಭೂತೇಷು ಗುಹಾಯಾಂ ಸರ್ವತೋಮುಖಃ ।**
ತ್ವಂ ಯಜ್ಞಸ್ತ್ವಂ ವಷಟ್‌ಕಾರಸ್ತ್ವಂ ವಿಷ್ಣುಃ ಪುರುಷಃ ಪರಃ ॥

ಎಂದು ಪ್ರಾರ್ಥಿಸಿ ಕೈಯಲ್ಲಿ ತೀರ್ಥಜಲವನ್ನು ಧರಿಸಿ– **ಅಮೃತೋಪಸ್ತರಣಮಸಿ ಜುಹೋಮಿ ಸ್ವಾಹಾ ।** ಎಂದು ಪ್ರಾಶನ ಮಾಡಬೇಕು.

ಪ್ರಾಣಾಹುತಿಃ **ಓಂ ಪ್ರಾಣಾಯ ಸ್ವಾಹಾ । ಓಂ ಅಪಾನಾಯ ಸ್ವಾಹಾ । ಓಂ ವ್ಯಾನಾಯ ಸ್ವಾಹಾ । ಓಂ ಉದಾನಾಯ ಸ್ವಾಹಾ । ಓಂ ಸಮಾನಾಯ ಸ್ವಾಹಾ ।**

ಅನಂತರ ಭಗವಂತನನ್ನು ನೆನೆಯುತ್ತ ಮೌನವಾಗಿ ಉಣ್ಣಬೇಕು. ಕೊನೆಗೆ– **ಅಮೃತಾಪಿಧಾನಮಸಿ** ಎಂದು ಉತ್ತರಾಪೋಶನ ತೆಗೆದುಕೊಂಡು ಎದ್ದು ಕೈ ತೊಳೆದುಕೊಳ್ಳಬೇಕು. ಅನಂತರ ಆಚಮನಮಾಡಿ ತೀರ್ಥ ತೆಗೆದುಕೊಂಡು– **ಓಂ ನಮೋ ನಾರಾಯಣಾಯ** ಎಂದು ಉದರವನ್ನು ಮುಟ್ಟಿ ಭಗವಂತನ ಸಂತೃಪ್ತಿಯನ್ನು ಪ್ರಾರ್ಥಿಸಿಕೊಳ್ಳಬೇಕು.

---

೬೧. '**ಭುಕ್ತಶೇಷಂ ಭಗವತೋ ಭೃತ್ಯಾತಿಥಿಪುರಸ್ಸರಃ । ಭುಂಜೀತ ಹೃದ್ಗತಂ ವಿಷ್ಣುಂ ಸ್ಮರಂಸ್ತದ್‌ಗತಮಾನಸಃ । ಆಚಮ್ಯ ಮೂಲಮಂತ್ರೇಣ ಕೋಷ್ಠಂ ಸ್ವಮಭಿಮಂತ್ರಯೇತ್ ॥**' ಎಂಬ ಆಚಾರ್ಯರ ವಚನದಲ್ಲಿ ಈ ವಿವರ ಬಂದಿದೆ.

ಇನ್ನು ಉಳಿದ ಹಗಲು ಹೊತ್ತಿನಲ್ಲಿ ವಿರಾಮವಿದ್ದಲ್ಲೆಲ್ಲ ಶಾಸ್ತ್ರಚರ್ಚೆಯಲ್ಲಿ ಕಳೆಯಬೇಕು ಎಂದಿದ್ದಾರೆ ಆಚಾರ್ಯರು: '**ವೇದಶಾಸ್ತ್ರವಿನೋದೇನ ಕ್ಷಣಯನ್ ಪುರುಷೋತ್ತಮಮ್ । ಅಹಃಶೇಷಂ ನಯೇತ್–**'

Rarest Archiver

ಸಾಯಂಸಂಧ್ಯಾವಂದನ

ಸಾಯಂಕಾಲದಲ್ಲೂ ಪ್ರಾತಃಕಾಲದಂತೆಯೆ ಜಪವನ್ನು ಆಚರಿಸಬೇಕು.[೬೨] ಬದಲಾವಣೆಯೆಂದರೆ ಜಲಪ್ರಾಶನಮಂತ್ರದಲ್ಲಿ ಮಾತ್ರ. ಅದನ್ನು ಅಲ್ಲೆ ಟಿಪ್ಪಣಿಯಲ್ಲಿ ಕಾಣಿಸಲಾಗಿದೆ. ಅಲ್ಲದೆ ಸಂಕಲ್ಪ ಮತ್ತು ಕೃಷ್ಣಾರ್ಪಣಗಳಲ್ಲಿ 'ಪ್ರಾತಃಸಂಧ್ಯಾಕರ್ಮಣಾ' ಎನ್ನುವ ಬದಲು 'ಸಾಯಂಸಂಧ್ಯಾಕರ್ಮಣಾ' ಎಂದು ಹೇಳಬೇಕು.

ರಾತ್ರಿಪೂಜೆ

ಸಂಕಲ್ಪಃ ಅದ್ಯ ಶುಭತಿಥೌ ಸಾಯಂಕಾಲೇ ಯಥಾಶಕ್ತಿ ಭಗವತ್‌ಪೂಜಾಂ ಕರಿಷ್ಯೇ ।

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ ॥

ಓಂ ನಮೋ ನಾರಾಯಣಾಯ ಗಂಧಂ ಸಮರ್ಪಯಾಮಿ । ಪುಷ್ಪಂ ಸಮರ್ಪಯಾಮಿ । ಧೂಪಮಾಘ್ರಾಪಯಾಮಿ । ದೀಪಂ ದರ್ಶಯಾಮಿ ।

ಎಂದು ಗಂಧ-ಪುಷ್ಪಗಳಿಂದರ್ಚಿಸಿ ಧೂಪದೀಪಗಳನ್ನೆತ್ತಿ–ಪ್ರತಿನಿಧಿಯಾಗಿ ತುಲಸೀದಲಗಳನ್ನಾದರೂ ಅರ್ಪಿಸಿ— ಹಾಲುಹಣ್ಣುಗಳನ್ನು ಸಮರ್ಪಿಸಬೇಕು: ಫಲಗುಡಕ್ಷೀರಾದಿಮಹಾನೈವೇದ್ಯಂ ಸಮರ್ಪಯಾಮಿ ।

ಅನಂತರ ಆರತಿಯೆತ್ತಿ— ಮಂಗಲನೀರಾಜನಂ ಸಮರ್ಪಯಾಮಿ ಎಂದು ಅರ್ಪಿಸಬೇಕು. ಕೃಷ್ಣಾರ್ಪಣಃ ಅನೇನ ಭಗವತ್‌ಪೂಜಾಕರ್ಮಣಾ ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಮ್ । ಶ್ರೀಕೃಷ್ಣಾರ್ಪಣಮಸ್ತು ॥

ಭೋಜನ

ರಾತ್ರಿಯ ಕಾಲದ ಭೋಜನ ಮಂತ್ರಗಳೂ ಮಧ್ಯಾಹ್ನದ ಮಂತ್ರಗಳೇ ಆಗಿವೆ. ವ್ಯತ್ಯಾಸವನ್ನು ಅಲ್ಲೇ ಹೇಳಿದೆ.

ಶಯನ

ರಾತ್ರಿ ಒಂದು ಯಾಮ ಕಳೆಯುವ ವರೆಗೆ ಶಾಸ್ತ್ರಾಧ್ಯಯನಾದಿಗಳನ್ನು ಮಾಡಿಕೊಂಡಿದ್ದು ಅನಂತರ ಮಲಗಬೇಕು.[೬೩]

* * *

---

೬೨. ಸಂಧ್ಯಾಮುಪಾಸೀತಾಥ ಪೂರ್ವವತ್ ।

೬೩. ಯಾಮಾತ್ ಪರತ ಏವಾಥ ಸ್ವಪೇದ್ ಧ್ಯಾತ್ವಾ ಜನಾರ್ದನಮ್ ।
ಅಂತರಾಳೇ ತಥೋದ್‌ಬುದ್ಧಃ ಸ್ಮರೇತ ಬಹುಶೋ ಹರಿಮ್ ॥

Rarest Archiver

ಸಂಕ್ಷಿಪ್ತಷೋಡಶೋಪಚಾರಪೂಜೆ[೬೪]

ಘಂಟಾನಾದ ಮಾಡಿ, ಅಭಿಷೇಕದ ಕಲಶ ಮುಂತಾದ್ದನ್ನು ಸಿದ್ಧಪಡಿಸಿಕೊಂಡು, ಪರಿವಾರದೇವತೆಗಳನ್ನು ನೆನೆಯಬೇಕು.

ಪುರುಷಸೂಕ್ತಮಂತ್ರೈಃ ಶ್ರೀಲಕ್ಷ್ಮೀನಾರಾಯಣಸ್ಯ ಷೋಡಶೋಪಚಾರ–
ಪೂಜಾಖ್ಯಂ ಕರ್ಮ ಕರಿಷ್ಯೇ ।
ದ್ವಾರದೇವತಾಭ್ಯೋ ನಮಃ ।
ದೀಪದೇವತಾಭ್ಯೋ ನಮಃ ।
ಘಂಟಾದೇವತಾಭ್ಯೋ ನಮಃ ।
ಶಂಖದೇವತಾಭ್ಯೋ ನಮಃ ।
ಕಲಶದೇವತಾಭ್ಯೋ ನಮಃ ।
ಪೀಠದೇವತಾಭ್ಯೋ ನಮಃ ।

ಓಂ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ ದಶಾಂಗುಲಮ್ ॥ ೧ ॥
ಓಂ ನಮೋ ನಾರಾಯಣಾಯ ಓಮ್ । ಸಪರಿವಾರಂ ಸಶ್ರೀಕಂ ನಾರಾಯಣ–
ಮಾವಾಹಯಾಮಿ ।

ಓಂ ಪುರುಷ ಏವೇದಂ ಸರ್ವಂ ಯದ್ ಭೂತಂ ಯಚ್ಚ ಭವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥ ೨ ॥
ಓಂ ನಮೋ ನಾರಾಯಣಾಯ ಓಮ್ । ಆಸನಂ ಸಮರ್ಪಯಾಮಿ ।

---

೬೪. ಈ ಷೋಡಶೋಪಚಾರಪೂಜಾವಿಧಾನದಲ್ಲಿ ಕೆಲವು ಸಂಪ್ರದಾಯಭೇದಗಳಿವೆ. ಆದರೆ ಇಲ್ಲಿ ನಮೂದಿಸಿರುವಂಥದು ಶೌನಕರ ಋಗ್‌ವಿಧಾನದಲ್ಲಿ ಹೇಳಿದ್ದು. ಪ್ರಾಚೀನ ಸಂಪ್ರದಾಯಾನುಗುಣವಾದದ್ದು. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಸಾಳಗ್ರಾಮಕ್ಕೆ ಮಾತ್ರ ಪೂಜೆ ಮಾಡುವವರು ಆವಾಹನ ಮಾಡಬೇಕಿಲ್ಲ. ಭಗವಂತ ಅಲ್ಲಿ ನಿತ್ಯಸನ್ನಿಹಿತ. ಆಗ ಮೊದಲ ಮಂತ್ರ ಹೇಳಿ ಬರಿಯ ಪ್ರಾರ್ಥನೆ ಸಲ್ಲಿಸಿದರೆ ಸಾಕು. 'ಆವಾಹಯಾಮಿ' ಎಂದು ಹೇಳಬೇಕಿಲ್ಲ. ಬದಲು 'ಪ್ರಾರ್ಥನಾಂ ಸಮರ್ಪಯಾಮಿ' ಎಂದು ಹೇಳಿದರೆ ಸಾಕು. ವಾರ್ಷಿಕ ವಿಶೇಷಪೂಜೆಗಳಲ್ಲಿ, ಆವಸರವಾಗಿ ಮಾಡಬೇಕಾದ ನಿತ್ಯಪೂಜೆಯಲ್ಲಿ ಕೂಡ, ಪುರುಷಸೂಕ್ತಮಂತ್ರಗಳಿಂದ ಮಾಡುವ ಈ ಷೋಡಶೋಪ ಚಾರಪೂಜೆ ತುಂಬ ಪ್ರಶಸ್ತ. ಈಗ ಬಳಕೆಯಲ್ಲಿರುವ ಕಲ್ಪೋಕ್ತಪೂಜೆಗಿಂತಲು ಉತ್ತಮ.

Rarest Archiver

ಓಂ ಏತಾವಾನಸ್ಯ ಮಹಿಮಾತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥ ೩ ॥

ಓಂ ನಮೋ ನಾರಾಯಣಾಯ ಓಮ್ । ಪಾದ್ಯಂ ಸಮರ್ಪಯಾಮಿ ।

ಓಂ ತ್ರಿಪಾದೂರ್ಧ್ವ ಉದೈತ್ ಪುರುಷಃ ಪಾದೋಸ್ಯೇಹಾಭವತ್ ಪುನಃ ।
ತತೋ ವಿಷ್ವಙ್ ವ್ಯಕ್ರಾಮತ್ ಸಾಶನಾನಶನೇ ಅಭಿ ॥ ೪ ॥

ಓಂ ನಮೋ ನಾರಾಯಣಾಯ ಓಮ್ । ಅರ್ಘ್ಯಂ ಸಮರ್ಪಯಾಮಿ ।

ಓಂ ತಸ್ಮಾದ್ವಿರಾಳಜಾಯತ ವಿರಾಜೋ ಅಧಿ ಪೂರುಷಃ ।
ಸ ಜಾತೋ ಅತ್ಯರಿಚ್ಯತ ಪಶ್ಚಾದ್ ಭೂಮಿಮಥೋ ಪುರಃ ॥ ೫ ॥

ಓಂ ನಮೋ ನಾರಾಯಣಾಯ ಓಮ್ । ಆಚಮನೀಯಂ ಸಮರ್ಪಯಾಮಿ ॥

ಓಂ ಯತ್ ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।
ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥ ೬ ॥

ಓಂ ನಮೋ ನಾರಾಯಣಾಯ ಓಮ್ । ಸ್ನಾನಂ ಸಮರ್ಪಯಾಮಿ ।

ಓಂ ನಮೋ ನಾರಾಯಣಾಯ ಓಮ್ । ಪುನರಾಚಮನೀಯಂ ಸಮರ್ಪಯಾಮಿ ।

ಓಂ ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚ ಯೇ ॥ ೭ ॥

ಓಂ ನಮೋ ನಾರಾಯಣಾಯ ಓಮ್ । ವಸ್ತ್ರಂ ಸಮರ್ಪಯಾಮಿ ।

ಓಂ ನಮೋ ನಾರಾಯಣಾಯ ಓಮ್ । ಪುನರಾಚಮನೀಯಂ ಸಮರ್ಪಯಾಮಿ ।

ಓಂ ತಸ್ಮಾದ್ ಯಜ್ಞಾತ್ ಸರ್ವಹುತಃ ಸಂಭೃತಂ ಪೃಷದಾಜ್ಯಮ್ ।
ಪಶೂನ್ ತಾಂಶ್ಚಕ್ರೇ ವಾಯವ್ಯಾನಾರಾಣ್ಯಾನ್ ಗ್ರಾಮ್ಯಾಶ್ಚ ಯೇ ॥ ೮ ॥

ಓಂ ನಮೋ ನಾರಾಯಣಾಯ ಓಮ್ । ಯಜ್ಞೋಪವೀತಂ ಸಮರ್ಪಯಾಮಿ ।

ಓಂ ತಸ್ಮಾದ್ ಯಜ್ಞಾತ್ ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ತಸ್ಮಾದ್ ಯಜುಸ್ತಸ್ಮಾದಜಾಯತ ॥ ೯ ॥

ಓಂ ನಮೋ ನಾರಾಯಣಾಯ ಓಮ್ । ಗಂಧಂ ಸಮರ್ಪಯಾಮಿ ।

ಓಂ ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ ।
ಗಾವ್ಹೋ ಹ ಜಜ್ಞಿರೇ ತಸ್ಮಾತ್ ತಸ್ಮಾಜ್ಜಾತಾ ಅಜಾವಯಃ ॥ ೧೦ ॥

ಓಂ ನಮೋ ನಾರಾಯಣಾಯ ಓಮ್ । ಪುಷ್ಪಂ ಸಮರ್ಪಯಾಮಿ ।

Rarest Archiver

ಓಂ ಯತ್ ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್ ।
ಮುಖಿಂ ಕಿಮಸ್ಯ ಕೌ ಬಾಹೂ ಕಾ ಊರೂ ಪಾದಾ ಉಚ್ಯೇತೇ ॥
॥ ೧೧॥
ಓಂ ನಮೋ ನಾರಾಯಣಾಯ ಓಮ್ । ಧೂಪಂ ಸಮರ್ಪಯಾಮಿ ।

ಓಂ ಬ್ರಾಹ್ಮಣೋಸ್ಯ ಮುಖಿಮಾಸೀದ್ ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ॥
॥ ೧೨ ॥
ಓಂ ನಮೋ ನಾರಾಯಣಾಯ ಓಮ್ । ದೀಪಂ ಸಮರ್ಪಯಾಮಿ ।

ಓಂ ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ ।
ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ ವಾಯುರಜಾಯತ ॥ ೧೩ ॥
ಓಂ ನಮೋ ನಾರಾಯಣಾಯ ಓಮ್ । ನೈವೇದ್ಯಂ ಸಮರ್ಪಯಾಮಿ ।
ಓಂ ನಮೋ ನಾರಾಯಣಾಯ ಓಮ್ । ಪುನರಾಚಮನೀಯಂ ಸಮರ್ಪಯಾಮಿ ।
ಓಂ ನಮೋ ನಾರಾಯಣಾಯ ಓಮ್ । ಮಂಗಳನೀರಾಜನಂ ಸಮರ್ಪಯಾಮಿ ।

ಓಂ ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ।
ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ ತಥಾ ಲೋಕಾ ಅಕಲ್ಪಯನ್
॥ ೧೪ ॥
ಓಂ ನಮೋ ನಾರಾಯಣಾಯ ಓಮ್ । ನಮಸ್ಕಾರಂ ಸಮರ್ಪಯಾಮಿ ।

ಓಂ ಸಪ್ತಾಸ್ಯಾಸನ್ ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ।
ದೇವಾ ಯದ್ ಯಜ್ಞಂ ತನ್ವಾನಾ ಅಬಧ್ನನ್ ಪುರುಷಂ ಪಶುಮ್
॥ ೧೫ ॥
ಓಂ ನಮೋ ನಾರಾಯಣಾಯ ಓಮ್ । ಪ್ರದಕ್ಷಿಣಂ ಸಮರ್ಪಯಾಮಿ ।

ಓಂ ಯಜ್ಞೇನ ಯಜ್ಞಮಯಜಂತ ದೇವಾ-
ಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ।
ತೇ ಹ ನಾಕಂ ಮಹಿಮಾನಃ ಸಚಂತ
ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ಓಮ್ ॥ ೧೬ ।
ಓಂ ನಮೋ ನಾರಾಯಣಾಯ ಓಮ್ । ದಕ್ಷಿಣಾಂ ಸಮರ್ಪಯಾಮಿ ।

ಅನೇನ ಶ್ರೀಪುರುಷಸೂಕ್ತಮಂತ್ರೈಃ ಷೋಡಶೋಪಚಾರಪೂಜಾಕರ್ಮಣಾ
ಮಧ್ವಾಂತರ್ಗತಃ ಶ್ರೀಲಕ್ಷ್ಮೀನಾರಾಯಣಃ ಪ್ರೀಯತಾಮ್। ಶ್ರೀಕೃಷ್ಣಾರ್ಪಣಮಸ್ತು ॥

* * * * *

Rarest Archiver

ಯಜ್ಞೋಪವೀತಧಾರಣ[೬೫]

ತೊಟ್ಟ ಯಜ್ಞೋಪವೀತ ತುಂಡಾದರೆ ಅಥವಾ ಆಶೌಚ ಬಂದರೆ ಆಶೌಚ ಶುದ್ಧಿಯ ದಿವಸ ಹೊಸ ಯಜ್ಞೋಪವೀತವನ್ನು ಧರಿಸಬೇಕು.

ಬ್ರಹ್ಮಚಾರಿಗಳಿಗೆ ಒಂದೇ ಯಜ್ಞೋಪವೀತ. ಗೃಹಸ್ಥನಿಗೆ ಎರಡು ಕನಿಷ್ಠ. ಉತ್ತರೀಯದ ಪ್ರತಿನಿಧಿಯಾಗಿ ಮತ್ತು ಶ್ರೇಯಸ್ಸಿಗಾಗಿ ಮೂರು. ನಾಕು ತೊಡುವುದು ಇನ್ನಷ್ಟು ವಿಶೇಷ.

ಮೊದಲು ಆಚಮನ ಮಾಡಿ, **ಯಜ್ಞೋಪವೀತಧಾರಣಂ ಕರಿಷ್ಯೇ** ಎಂದು ಸಂಕಲ್ಪಿಸಿ, ದೇವತಾಪ್ರತೀಕಕ್ಕರ್ಪಿಸಿದ ಯಜ್ಞೋಪವೀತವನ್ನು ಕೈಯಲ್ಲಿ ಬಿಡಿಸಿ ಹಿಡಿದು ಹತ್ತು ಬಾರಿ ಗಾಯತ್ರಿಯನ್ನು ಜಪಿಸುತ್ತ ಸೂರ್ಯನಿಗೆ ತೋರಿಸಬೇಕು. ಅನಂತರ ಈ ಮಂತ್ರವನ್ನು ಪಠಿಸುತ್ತ ಬಲತೋಳಿನ ಒಳಗೆ ಬರುವಂತೆ ಉಪವೀತಾಕಾರವಾಗಿ ಧರಿಸಬೇಕು:

ಓಮ್ ॥ ಯಜ್ಞೋಪವೀತಂ ಪರಮಂ ಪವಿತ್ರಂ
ಪ್ರಜಾಪತೇರ್ಯತ್ ಸಹಜಂ ಪುರಸ್ತಾತ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ
ಯಜ್ಞೋಪವೀತಂ ಬಲಮಸ್ತು ತೇಜಃ ॥ ಓಮ್ ॥

ಅನಂತರ ಹಳೆಯ ಯಜ್ಞೋಪವೀತವನ್ನು ಕೆಳಕ್ಕೆ ಜಾರಿಸಿ ತೆಗೆದು–

ಉಪವೀತಂ ಭಿನ್ನತಂತುಂ ಜೀರ್ಣಂ ಕಶ್ಮಲದೂಷಿತಮ್ ।
ವಿಸೃಜಾಮಿ ಜಲೇ ಬ್ರಹ್ಮವರ್ಚೋ ದೀರ್ಘಾಯುರಸ್ತು ಮೇ ॥

ಎಂದು ನೀರಿನಲ್ಲಿ ವಿಸರ್ಜಿಸಿ ಕೃಷ್ಣಾರ್ಪಣ ಬಿಡಬೇಕು.

ಅನೇನ ಯಜ್ಞೋಪವೀತಧಾರಣೇನ ಮಧ್ವಾಂತರ್ಗತಃ
ಶ್ರೀಗೋಪಾಲಕೃಷ್ಣಃ ಪ್ರೀಯತಾಮ್ । ಶ್ರೀಕೃಷ್ಣಾರ್ಪಣಮಸ್ತು ॥

* * *

---

೬೫. ಯಜ್ಞೋಪವೀತ ಎನ್ನುವುದು ವೇದೋಕ್ತವಾದ ಕರ್ಮಾನುಷ್ಠಾನದ ಬದ್ಧತೆಗಾಗಿ ತೊಡುವ ದೀಕ್ಷಾಬಂಧ. ಆದರ ಮೂರು ಎಳೆಗಳು ಮೂರು ವೇದಗಳನ್ನು, ಮೂರು ಗುಣಗಳನ್ನು, ಧರ್ಮಾರ್ಥಕಾಮಗಳೆಂಬ ಮೂರು ಪುರುಷಾರ್ಥಗಳನ್ನು ಪ್ರತಿನಿಧಿಸುತ್ತವೆ. ಆದರಲ್ಲಿರುವ ಪವಿತ್ರದ ಗಂಟು ಪಾವಿತ್ರ್ಯದ ಸಂಕೇತ.

ಯಜ್ಞೋಪವೀತ ಹೊಕ್ಕುಳಿಗಿಂತ ಮೇಲಿರಬಾರದು; ಹೊಕ್ಕುಳಿಗಿಂತ ಕೆಳಕ್ಕೂ ಇಳಿಯಬಾರದು. ಸರಿಯಾಗಿ ಹೊಕ್ಕುಳಿನ ಮಟಕ್ಕೇ ಇರಬೇಕು.

Rarest Archiver

Rarest Archiver

ಪರಿಶಿಷ್ಟ: ೧

* ಋಗ್ವೇದೀಯ ಪುರುಷಸೂಕ್ತ
* ಯಜುರ್ವೇದೀಯ ಪುರುಷಸೂಕ್ತ
* ಶ್ರೀಸೂಕ್ತ
* ವಿಷ್ಣುಸಹಸ್ರನಾಮಸ್ತೋತ್ರ
* ನಾರಾಯಣಾಷ್ಟೋತ್ತರಶತನಾಮಸ್ತೋತ್ರ
* ಕೃಷ್ಣಾಷ್ಟೋತ್ತರಶತನಾಮಸ್ತೋತ್ರ
* ನೃಸಿಂಹಾಷ್ಟೋತ್ತರಶತನಾಮಸ್ತೋತ್ರ
* ಮಂಗಲಾಷ್ಟಕ

Rarest Archiver

ಪುರುಷಸೂಕ್ತಮ್[೬೬]

[ಋಗ್ವೇದೀಯಪಾಠ]

ಓಂ ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ ದಶಾಂಗುಲಮ್ ॥ ೧ ॥

ಪುರುಷ ಏವೇದಂ ಸರ್ವಂ ಯದ್ ಭೂತಂ ಯಚ್ಚ ಭವ್ಯಮ್ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ॥ ೨ ॥

ಏತಾವಾನಸ್ಯ ಮಹಿಮಾತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ॥ ೩ ॥

ತ್ರಿಪಾದೂರ್ಧ್ವ ಉದೈತ್ ಪುರುಷಃ ಪಾದೋಸ್ಯೇಹಾಭವತ್ ಪುನಃ ।
ತತೋ ವಿಷ್ವಙ್ ವ್ಯಕ್ರಾಮತ್ ಸಾಶನಾನಶನೇ ಅಭಿ ॥ ೪ ॥

ತಸ್ಮಾದ್ವಿರಾಳಜಾಯತ ವಿರಾಜೋ ಅಧಿ ಪೂರುಷಃ ।
ಸ ಜಾತೋ ಅತ್ಯರಿಚ್ಯತ ಪಶ್ಚಾದ್ ಭೂಮಿಮಥೋ ಪುರಃ ॥ ೫ ॥

ಯತ್ ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।
ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ॥ ೬ ॥

ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚ ಯೇ ॥ ೭ ॥

ತಸ್ಮಾದ್ ಯಜ್ಞಾತ್ ಸರ್ವಹುತಃ ಸಂಭೃತಂ ಪೃಷದಾಜ್ಯಮ್ ।
ಪಶೂನ್ ತಾಂಶ್ಚಕ್ರೇ ವಾಯವ್ಯಾನಾರಾಣ್ಯಾನ್ ಗ್ರಾಮ್ಯಾಶ್ಚ ಯೇ ॥ ೮ ॥

ತಸ್ಮಾದ್ ಯಜ್ಞಾತ್ ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।
ಛಂದಾಂಸಿ ಜಜ್ಞಿರೇ ತಸ್ಮಾದ್ ಯಜುಸ್ತಸ್ಮಾದಜಾಯತ ॥ ೯ ॥

ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ ।
ಗಾವೋ ಹ ಜಜ್ಞಿರೇ ತಸ್ಮಾತ್ ತಸ್ಮಾಜ್ಜಾತಾಅಜಾವಯಃ ॥ ೧೦ ॥

---

